LAND FOR SALE
Residential / Commercial / Educational Institutions / Industrial / Warehouse Convertible Land Attached to Bengaluru - Mysore Expressway (NH 274) Near Ramnagar 3.08 Acres
Mobile: 98456 73081 98455 20505, 96634 52883 98862 57581

Commercial Building

Indiranagar

COMMERCIAL PROPERTY, 100 Feet Road, Indiranagar Bangalore is a treasure for Serious Investor' Whatsapp 84311 33959

Residential/ Commercial

Nelamangala

NELAMANGALA 7000 sqft on Nelamangala Main Road BMRA,Bukkasagara 4000 sqft Pride Vatika, BMRD. 9677163464

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH FACING CONTACT OWNER 9844018823

Villas/Bunglows

Thanisandra

SOBHA CITY Tanisandra Main Road, 5 BHK Row House villa for sale. Contact: Chandan: 9900665081

RENTAL PROPERTIES

Accommodation Wanted

Industrial And Factory

WANTED NATURAL EXTRACT MANUFACTURING FACILITY FOR RENT
Require factory equipped with manufacturing facilities like SS Reactors, Distillation Column and solvent storage facility on Rental basis on long term.
Interested parties may contact: 7034 118 881 pridekerala@gmail.com

Accommodation Available

Commercial

FOR RENT Commercial space North facing, Ground- 2000 sqft, First- 1750 sqft, 11th Main, 4th Block, Jayanagar, Opp. Raymond's showroom suitable for showrooms, Jewellery Bank, cowork space office purpose. Contact: 8105133777/ 8310861001.

FULLY FURNISHED Office for Doctors, C.A.'s, Advocates available on Rent/ Mortgage 1200 sft. Three Chambers Lounge, Reception at R.P.C. Layout, Vijaynagar, Bengaluru. Contact:- 8618730793.

VVPURAM JAIN Temple Road 2BHK GF 1000 Sft Residential/ Office cum Godown. 30,000/- Rent Negotiate Contact: ESHWER ENTERPRISES. 98454-97163

Flats

FOR RENT Koramangla Prestige St.Johns Woods Pent House 3200 Sqft 4BHK with Attach Toilets, Servant Room, 2Car Parks: 9448770410

MANTRI WOOD Lands, Bannerghatta road, 3 BHK Flat vegetarians only, rent 35000/ including maintenance. 9886425997

House

RENT: HANUMANTHNAGAR 2BHK- DH GF, with amenities, Corporation Water. Ready occupation. Contact: Owner: 78925-30410/ 94488-09902

3 BEDROOM Attach Bathroom 1st Floor, independent house 3000 sft, covered parking, servants room, Jayamahal Extension. Call: 9741415476/ 9845718996.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Water Proofing Materials

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

REAL ESTATE BUYING

Farm House/ Land/ Resorts

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

Sites

Banashankari

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout,Contact: 9845062822, 8660751654

WANTED BDASITES Banashankari 6th Stg, Vishweswaraiah ,Layout, AnjanapuraJPNagar 8th_9thPhase,20x30,30x40, 40x60,50x80,Call Genuine Sellers: 9845812635

WANTED 30X40/ 30x50 Site BHCS Layout Hoskerehalli, BSK 1st, 3rd, 5th, Ashoknagar, NR.Colony, TR.Nagar, Hanumanthnagar Kathriguppe. Owners Contact: 94486-16570

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted Contact: SAPTHAGIRI, 9900268073, 9448068073.

J P Nagar

FOR PURCHASE Sites JP Nagar 7 & 8 Phase 2400 Sqft above Somesh 7411129550

Vishweshwariah Layout

BDA-SITES WANTED Kempegowda Layout Vishveshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage, Contact:9844533371/ 9341733480

Hesaraghatta

WANTED 30X40 'A' Khatha site in Kirloskar Layout, Siddeshwara Layout, Soundarya layout, Pai Layout,Navy Layout, AGB Layout. Contact:70260 04959 Broker Excuse

AUTOMOTIVE

Four Wheelers Selling

Honda

REQUIRE SALVAGE quote for Honda Amaze, KA50MB 9856 with / without RC. Contact 9844036218

2 / 3 Wheelers Selling

Mobikes

FOR SALE Jawa- 42, Model- 2019, single owner, kms- 7000 and Jawa Perak Model 2020, kms 3600. Contact: 8310861001.

EDUCATIONAL

Computer Education

NATIONAL INSTITUTE Of Electronics And Information Technology Approvided Training Centre SGECT Academy Mahalakshmi Layout -Basic Computer CCC DTP Operator Graphic Designing JAVA Developer WEB Developer Python On Nominal Fees Contact 6363825507, 9480322851, 7219695969.

Diploma Courses

DIPLOMA IN Student Counselling, 6-months, ONLINE, Starts:11-July WhatsApp: 9886044221 www.darwinpsychologycentre.com

Tuitions

NOW AT Your Doorstep Best (FRENCH) Tuitions: 9743095715 By T.S.Shivashankar, PhD. USA, Living In Mahalaxmi Layout only Home Tuitions Enough Seats Available, in all & different levels, in all Major Areas of Bangalore & towards Yelahanka Peenya Kengeri & Metro Routes From Mahalaxmi Layout Contact Early for New Academic Year 23-24.

COMPUTERS

Software / Programming

BILLING SOFTWARE Rs.6000/-Plus Gst Download Trial Software www.plumbite.in call 9008040544

PUBLIC NOTICE

ಸಾರ್ವಜನಿಕ ಪ್ರಕಟಣೆ

ಉಲ್ಲೇಖ:
ಎಸ್‌ಎಸ್‌ಹೆಚ್‌ಬಿಸಿಎಸ್/ಸಿಇ/ಎಡಿ1
ದಿನಾಂಕ: 25/06/2023

ವಿಷಯ: ಸಮೂಹ ಸೇವಾ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಂ.228/3, ಜೆ.ವಿ.ಎಂ ಮಸ್ಕರೆನ್ಹಾಸ್ ರೋಡ್, ಪಿಳ್ಳಣ್ಣ ಗಾರ್ಡನ್, 1ನೇ ಹಂತ,ಬೆಂಗಳೂರು – 560084 [ನೋಂದಣಿ ಸಂ. ಎಆರ್‌ಬಿ/941, ದಿನಾಂಕ 03/09/1957] ಇವರ ಷೇರು ದಾಖಲಾತಿಗಳನ್ನು ಅಪಡೇಟ್ ಮಾಡುವುದು.

ಈ ಪ್ರಕಟಣೆಯ ಮೂಲಕ ಸದರಿ ಸೊಸೈಟಿಯ ಎಲ್ಲಾ ಷೇರುದಾರರಿಗೆ/ ಸದಸ್ಯರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ನೀಡಲಾಗಿರುವ ಮಾಹಿತಿಯನ್ನು ಕೈಬರಹದಲ್ಲಿ ಅಥವಾ ಟೈಪ್ ಮಾಡಿದ ರೂಪದಲ್ಲಿ ದಿನಾಂಕ 25/06/2023 ರಿಂದ 24/07/2023 ರೊಳಗೆ ಸೊಸೈಟಿಯ ಕಚೇರಿಗೆ ಸಲ್ಲಿಸಿ, ತಮ್ಮ ಷೇರು ದಾಖಲಾತಿಗಳನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು. ಸದರಿ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ. ಕಚೇರಿ ಸಮಯ: 18:00 ರಿಂದ 20:00 ಗಂಟೆ (ಸೋಮವಾರ ದಿಂದ ಭಾನುವಾರ, ಮಂಗಳವಾರ ಹೊರತುಪಡಿಸಿ).

1. ಪ್ರಸ್ತುತ ವಿಳಾಸ, ಎಲ್‌ಎಲ್‌ಎಫ್ ನಂ., ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸ, ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ಇತ್ಯಾದಿ.

2. ದಿನಾಂಕ 21/12/13ರ ಸೊಸೈಟಿಯ ಪತ್ರ ಸಂ. ಜೆಆರ್‌ಬಿ/ ಅಮೆಂಡ್‌ಮೆಂಟ್/ 182/2013-14 ಮುಖೇನ ತಿದ್ದುಪಡಿಗೊಂಡಿರುವ ಬೈಲಾ ಪ್ರಕಾರ ರೂ. 2000/- ಷೇರು ಮೊತ್ತ (ತಲಾ ರೂ.1000/- ಮುಖಬೆಲೆಯ ಕನಿಷ್ಠ 2 ಷೇರುಗಳು) ಪಾವತಿಸದಿರುವ ಸದಸ್ಯರು, 24/07/2023 ರೊಳಗೆ ಸದರಿ ಷೇರು ಮೊತ್ತವನ್ನು "ದಿ ಸಮೂಹ ಸೇವಾ ಹೌಸ್ ಬಿಲ್ಡಿಂಗ್ ಕೋ-ಆಪ್ ಸೊಸೈಟಿ ಲಿ.," ಹೆಸರಿನಲ್ಲಿ ಪಡೆದಿರುವ ಕ್ರಾಸ್ಡ್ ಚೆಕ್/ಡ್ರಾಫ್ಟ್ ರೂಪದಲ್ಲಿ ಅಥವಾ ನೆಟ್ ಬ್ಯಾಂಕಿಂಗ್ ಮುಖಾಂತರ ಪಾವತಿಸಬೇಕು, ಇದಕ್ಕೆ ತಪ್ಪಿದಲ್ಲಿ ಅಂತಹ ಸದಸ್ಯರ ಸೊಸೈಟಿ ಸದಸ್ಯತ್ವವನ್ನು ತಡೆಹಿಡಿಯಲಾಗುತ್ತದೆ ಮತ್ತು ರೂ.2000/- ಕ್ಕೂ (2 ಷೇರುಗಳು) ಕಡಿಮೆ ಇರುವ ಅವರ ಷೇರು ಮೊತ್ತವನ್ನು ಕೆಸಿಎ ಆಕ್ಟ್‌ನ ಸೆಕ್ಷನ್ 19 ಮತ್ತು ಬೈಲಾ 40, 25 (7) ಪ್ರಕಾರ ರಿಸರ್ವ್ ಫಂಡ್‌ಗೆ ವರ್ಗಾವಣೆ ಮಾಡಲಾಗುತ್ತದೆ. ಈಗಾಗಲೇ ಷೇರು ಮೊತ್ತ ಪಾವತಿಸಿದ್ದಲ್ಲಿ, ಈ ಸೂಚನೆಯನ್ನು ನಿರ್ಲಕ್ಷಿಸಿರಿ. ಸದಸ್ಯತ್ವ ಕ್ಲೇಮ್ ಮಾಡಿಕೊಳ್ಳುವ ನಾಮಿನಿಯು, ತಮ್ಮ ಉತ್ತರಾಧಿಕಾರತ್ವಕ್ಕೆ ಸಂಬಂಧಿ ಮರಣ ಪ್ರಮಾಣಪತ್ರ/ ಮೃತರ ಷೇರು ಪ್ರಮಾಣಪತ್ರ ಹಾಗೂ ಗುರುತಿನ ಪತ್ರದಂತಹ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ದಿನಾಂಕ 21/05/2023 ರಂದು ಅಧ್ಯಕ್ಷರಾದ ಶ್ರೀ. ಎಂ. ಫಾತಿನಾಥನ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬಿಒಡಿ ಸಭೆಯಲ್ಲಿ, ಇಂತಹದೊಂದು ಪ್ರಕಟಣೆ ಹೊರಡಿಸಬೇಕೆಂದು ಸರ್ವಾನುಮತದಿಂದ ಠರಾವು ಮಂಡಿಸಲಾಗಿದೆ. ಷೇರುದಾರರು ಮತ್ತು ಸದಸ್ಯರು ಸದರಿ ವರದಿಯನ್ನು ತುರ್ತಾಗಿ ಅನುಸರಿಸುವುದು ಕಡ್ಡಾಯ.

ಮಂಡಳಿಯ ಪರವಾಗಿ
ಸಹಿ/-
ಚೀಫ್ ಎಕ್ಸಿಕ್ಯೂಟಿವ್

ಕರ್ನಾಟಕ ಹೈಕೋರ್ಟ್ ಬೆಂಗಳೂರು.
ದಿನಾಂಕ ಮಾರ್ಚ್ 28, 2023 ರಂದು
ಗೌರವಾನ್ವಿತ ಶ್ರೀ ಜಸ್ಟಿಸ್ ಅಲೋಕ್ ಆರಾಧೆ ಮತ್ತು ಗೌರವಾನ್ವಿತ ಶ್ರೀ ಜಸ್ಟೀಸ್ ವಿಜಯಕುಮಾರ್ ಎ. ಪಾಟೀಲ್
MFA ಸಂಖ್ಯೆ: 8460 ಆಫ್ 2022 (FC/DB) ಅನ್ನು ಪ್ರಸ್ತುತಪಡಿಸಿ.
ನಡುವೆ
ಲತಾ ಆರ್ W/o ಶ್ರೀ. ಎನ್ ಮಹೇಶ್,
ವಯಸ್ಸು ಸುಮಾರು 38 ವರ್ಷ,
#6, ಹೊಸಪಾಳ್ಯ ಮುಖ್ಯ ರಸ್ತೆ,
ಡಯಾನಾ ಕಾನ್ವೆಂಟ್ ಹತ್ತಿರ,
7ನೇ ಮುಖ್ಯ ರಸ್ತೆ, ಬೊಮ್ಮನಹಳ್ಳಿ,
ಬೆಂಗಳೂರು-560068 ಮೇಲ್ಮನವಿದಾರ...
(ಶ್ರೀ ವೆಂಕಟರಾಮ್ ಮತ್ತು ದೀಪಕ್ ಕೆ. ವಕೀಲರು)
ಮತ್ತು
ಮಹೇಶ್. ಎನ್
S/o ನಿರಂಜನ್ ಗೌಡ,
ವಯಸ್ಸು ಸುಮಾರು 43 ವರ್ಷ,
13ನೇ ಎ ಕ್ರಾಸ್, ಮೂಕಾಂಬಿಕಾ ನಗರ
ಈಶ್ವರಿ ಶಾಲೆಯ ಹತ್ತಿರ, ಹೊಸಕೆರೆಹಳ್ಳಿ,
ಬನಶಂಕರಿ 3ನೇ ಹಂತ,
ಬೆಂಗಳೂರು-560085. ಪ್ರತಿಕ್ರಿಯಿಸಿದ...
ಪ್ರತಿವಾದಿ/ ಪತಿ ಇಂದಿನಿಂದ ಮುಂದಿನ ವಿಚಾರಣೆಯ ದಿನಾಂಕದವರೆಗೆ ಯಾವುದೇ ವಿವಾಹವನ್ನು ಒಪ್ಪಂದ ಮಾಡಿಕೊಳ್ಳಬಾರದು ಎಂದು ನಿರ್ದೇಶಿಸಲಾಗಿದೆ.
Sd/-
ನ್ಯಾಯಾಧೀಶ ಸಹಾಯಕ ರಿಜಿಸ್ಟ್ರಾರ್
ಪ್ರತಿಯನ್ನು V ಹೆಚ್ಚುವರಿ Prl ಗೆ ನಕಲಿಸಿ. ನ್ಯಾಯಾಧೀಶರು,
ಕೌಟುಂಬಿಕ ನ್ಯಾಯಾಲಯ, ಬೆಂಗಳೂರು.
ಸತ್ಯ ಪ್ರತಿ 01/04/2023
ವಿಭಾಗ ಕಛೇರಿ
ಕರ್ನಾಟಕ ಹೈಕೋರ್ಟ್
ಬೆಂಗಳೂರು-560001.

WEEKEND CORNER ಕ್ಲಾಸಿಫೈಡ್ಸ್

HOSPITAL AVAILABLE FOR RENT

Newly Constructed Hospital building at Prime Location is ready to move in.

at HSR Layout, 27th Main, 1st Sector, Bengaluru- 560102
Contact:
9886084799 / 9606940041
centralhr.nbgi@gmail.com

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

"CAMPERVAN REGISTERED IN KARNATAKA FOR SALE"

ideal for camping anywhere



For more details call :
96060 85341
88673 54347

CAMPERVANS Built on Isuzu DMax & Mahindra Imperio are on SALE. The demountable Camping POD contains a Small Shower, Geyser, Imported Cassette Toilet, Mini Fridge, Draw Out Kitchen Table, 1 KVA Generator, Inverter, Batteries, Manual Awning, 2 Queen Size Beds Including a Motorised Roof Top Tent and Provision to Connect External Power.

This is a Light Motor Vehicle LMV and can be driven using a Car Driving License. Vehicles registered in Karnataka as Yellow Board and life time tax paid in Karnataka, Vehicles are in good condition.

CARAVAN FOR SALE

KARNATAKA REGISTERED CARAVANS FOR SALE

Can accommodate 4 Passengers. Caravan has a Small Shower and Toilet, Kitchenette, Fridge, Microwave A/C, Geyser, Fans and External Power Connection from BESCOM or Generator. Its a Heavy Vehicle and built on Ashok Leyland Chassis by a German Team and 3 years old, In good condition, Sparingly used.

For more details call :
9606085341
8867354347

ರಾಜ್ಯದ ಪ್ರಮುಖರಿಂದ ಅಭಿಪ್ರಾಯ ಸಂಗ್ರಹಿಸುತ್ತಿರುವ ಬಿಜೆಪಿ ವರಿಷ್ಠರು

ಸಮರ್ಥ ನಾಯಕರಿಗೆ ಬಿಜೆಪಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆಗೆ ಭಾರಿ ಕಸರತ್ತು ನಡೆಸುತ್ತಿರುವ ಬಿಜೆಪಿ ವರಿಷ್ಠರು, ಈ ವಿಚಾರದಲ್ಲಿ ರಾಜ್ಯದ ಪ್ರಮುಖರ ಅಭಿಪ್ರಾಯಗಳನ್ನೂ ಆಲಿಸುತ್ತಿದ್ದಾರೆ. ಆ ಮೂಲಕ 'ಸರ್ವಸಮ್ಮತ ಆಯ್ಕೆ'ಗೆ ಪ್ರಯತ್ನಿಸುತ್ತಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡ ಬಿಜೆಪಿ ಈ ಬಾರಿ ವಿರೋಧ ಪಕ್ಷದ ಸ್ಥಾನದಲ್ಲಿದೆ. ಚುನಾವಣೆ ಫಲಿತಾಂಶ ಪ್ರಕಟವಾಗಿ 40 ದಿನಗಳು ಕಳೆದರೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆದಿಲ್ಲ. ಚುನಾವಣೆಯಲ್ಲಿ ಪಕ್ಷವು ದೊಡ್ಡ ಅಂತರದ ಸೋಲು ಕಂಡಿರುವುದರಿಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನೂ ಬದಲಾವಣೆ ಮಾಡಬೇಕೆಂಬ ಕೂಗು ಪಕ್ಷದೊಳಗೆ ಎದ್ದಿದೆ.

ಎರಡೂ ಹುದ್ದೆಗಳಿಗೆ ಸಮರ್ಥರನ್ನು ಆಯ್ಕೆ ಮಾಡಬೇಕೆಂಬ ಬೇಡಿಕೆಯೂ ಇದೆ. ಈ ಹಿಂದೆ ಇಂತಹ ಸಂದರ್ಭಗಳಲ್ಲಿ ಪಕ್ಷದ ರಾಷ್ಟ್ರೀಯ ವರಿಷ್ಠರು ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಈ ಬಾರಿ ನಿರ್ಧಾರಕ್ಕೂ ಮೊದಲು ರಾಜ್ಯ ಬಿಜೆಪಿಯ ಕೆಲವು ಪ್ರಮುಖ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ.

ಬಿಜೆಪಿ ರಾಜ್ಯ ಉಸ್ತುವಾರಿಯಾಗಿ ಅರುಣ್ ಸಿಂಗ್ ಅವರು ಇದ್ದರೂ, ಹಿಂದೆ ಉಸ್ತುವಾರಿಯಾಗಿದ್ದ, ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ರಾಜ್ಯದ ಬಿಜೆಪಿ ಪ್ರಮುಖರ ಅಭಿಪ್ರಾಯ ಸಂಗ್ರಹಿಸುವ ಹೊಣೆ ವಹಿಸಲಾಗಿದೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೇರಿದಂತೆ ಹಲವು ಪ್ರಮುಖರನ್ನು ಸಂಪರ್ಕಿಸಿರುವ ಪ್ರಧಾನ್, ವಿಪಕ್ಷ ನಾಯಕ ಹಾಗೂ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕುರಿತು ಅಭಿಪ್ರಾಯ ಸಂಗ್ರಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಗ್ಯಾರಂಟಿ' ಯೋಜನೆಗಳನ್ನು ಜಾರಿ ಮಾಡಿರುವ ಕಾಂಗ್ರೆಸ್, ಜನರನ್ನು ತಲುಪುವಲ್ಲಿ ಯಶಸ್ವಿಯಾಗಿದೆ. ಯುದ್ಧದ ರೀತಿಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಎದುರಿಸಬೇಕಾಗಿದೆ. ಯುದ್ಧವನ್ನು ಮುನ್ನಡೆಸುವ ಸಮರ್ಥ ಸೇನಾಪತಿಯಂತೆ ಕೆಲಸ ಮಾಡುವ ನಾಯಕರನ್ನು ಅಧ್ಯಕ್ಷ ಹಾಗೂ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಆರಿಸಬೇಕಾಗಿದೆ ಎಂದು ಕೆಲವರು ಸಲಹೆ ನೀಡಿದ್ದಾರೆ' ಎಂದು ಗೊತ್ತಾಗಿದೆ.

'ಮುಂದಿನ ವರ್ಷ ಎದುರಾಗುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಎರಡೂ ಹುದ್ದೆಗಳಿಗೆ ಸಮರ್ಥರನ್ನು ಆಯ್ಕೆ ಮಾಡಬೇಕೆಂಬ ಯೋಚನೆ ಬಿಜೆಪಿ ವರಿಷ್ಠರಲ್ಲಿದೆ. ಜಾತಿವಾರು, ಪ್ರಾದೇಶಿಕ ಸಮತೋಲನವನ್ನೂ ಗಮನದಲ್ಲಿ ಇರಿಸಿಕೊಂಡು ನೇಮಕ ಮಾಡಲು ಯೋಚಿಸಿದ್ದಾರೆ. ಈ ಎಲ್ಲ ಅಂಶಗಳ ಬಗ್ಗೆಯೂ ವರಿಷ್ಠರು ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ, ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ವಿ. ಸುನಿಲ್ ಕುಮಾರ್ ಸೇರಿದಂತೆ ಹಲವರ ಹೆಸರುಗಳು ಪರಿಶೀಲನೆಯಲ್ಲಿವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಆರ್. ಅಶೋಕ, ಸಿ.ಟಿ. ರವಿ ಸೇರಿದಂತೆ ಕೆಲವರ ಹೆಸರುಗಳಿವೆ. ತಮಗೆ ಅವಕಾಶ ನೀಡಿ ಎನ್ನುವ ಮೂಲಕ ವಿ. ಸೋಮಣ್ಣ ಅವರೂ ಅಧ್ಯಕ್ಷ ಸ್ಥಾನದ ಆಕಾಂಕ್ಷೆಯನ್ನು ಬಹಿರಂಗಪಡಿಸಿದ್ದಾರೆ.

ಶಾಸಕಾಂಗ ಪಕ್ಷದ ಸಭೆಯನ್ನು ನಡೆಸುವ ಮುನ್ನವೇ ಪ್ರಮುಖ ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸಿ, ವಿರೋಧ ಪಕ್ಷದ ನಾಯಕ ಹಾಗೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕುರಿತು ತೀರ್ಮಾನಕ್ಕೆ ಬರಲು ವರಿಷ್ಠರು ನಿರ್ಧರಿಸಿದ್ದಾರೆ.

ಜುಲೈ 3ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಲಿದ್ದು, ಅದಕ್ಕೂ ಮುನ್ನ ತೀರ್ಮಾನ ಹೊರಬೀಳಲಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಸೋಲಿನ ನೈತಿಕ ಹೊಣೆ ಹೊತ್ತಿದ್ದೇನೆ: ಕಟೀಲ್

ಬಳ್ಳಾರಿ: 'ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿನ ನೈತಿಕ ಹೊಣೆ ಹೊತ್ತಿದ್ದೇನೆ. ಪಕ್ಷದ ವರಿಷ್ಠರಿಗೆ ಪತ್ರ ಕಳಿಸಿದ್ದೇನೆ. ಮೌಖಿಕವಾಗಿಯೂ ತಿಳಿಸಿದ್ದೇನೆ. ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಶನಿವಾರ ತಿಳಿಸಿದರು.

ಬಸವ ಭವನದಲ್ಲಿ ನಡೆದ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮತ್ತೊಮ್ಮೆ ಮಾತನಾಡಿದ ಕಟೀಲ್, 'ಪಕ್ಷದ ಸೋಲಿಗೆ ನೈತಿಕ ಹೊಣೆ ಹೊತ್ತಿರುವೆ' ಎಂದು ಪುನರುಚ್ಚರಿಸಿದರು.

'ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದ ಬದಲಾವಣೆ ಬಗ್ಗೆ ವಿ. ಸೋಮಣ್ಣ ಪ್ರಸ್ತಾಪಿಸಿದ್ದಾರೆ. ಅವರು ರಾಜ್ಯಾಧ್ಯಕ್ಷ ಸ್ಥಾನ ಕೇಳುವುದರಲ್ಲಿ ತಪ್ಪೇನೂ ಇಲ್ಲ. ನಾನು ಸತತ ನಾಲ್ಕು ವರ್ಷ ಅಧ್ಯಕ್ಷ ಆಗಿದ್ದೇನೆ. ಮೂರು ವರ್ಷ ಪೂರ್ಣಾವಧಿ ಮತ್ತು ಒಂದು ವರ್ಷ ಹಂಗಾಮಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈಗ ನನ್ನ ಅವಧಿ ಮುಗಿದಿದೆ. ಬದಲಾವಣೆ ಕುರಿತು ಪಕ್ಷದ ವರಿಷ್ಠರು ಸೂಕ್ತ ತೀರ್ಮಾನ ಕೈಗೊಳ್ಳುವರು' ಎಂದರು.

'ರಾಜೀನಾಮೆ ಕೊಟ್ಟಿಲ್ಲ'

ಬೆಂಗಳೂರು: ಬಳ್ಳಾರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಕೆಲವೇ ಗಂಟೆಗಳ ಬಳಿಕ ಅಧಿಕೃತ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ತಾವು ರಾಜೀನಾಮೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ.

'ಪ್ರಶ್ನೆಗೆ ಉತ್ತರಿಸುವ ವೇಳೆ ಸೋಲಿನ ನೈತಿಕ ಹೊಣೆ ಹೊರುತ್ತೇನೆ. ಸೋಲಿನ ಕಾರಣಗಳ ಕುರಿತಂತೆ ಪಕ್ಷದ ಹಿರಿಯರಿಗೆ ಮಾಹಿತಿ ನೀಡಿದ್ದೇನೆ. 4 ವರ್ಷಗಳಿಂದ ನಾನು ಅಧ್ಯಕ್ಷ ಸ್ಥಾನದಲ್ಲಿದ್ದೇನೆ ಎಂಬುದಾಗಿ ತಿಳಿಸಿದ್ದೆ. ಈ ಕುರಿತಂತೆ ಮಾಧ್ಯಮಗಳಲ್ಲಿ ಬರುತ್ತಿರುವ ಮಾಹಿತಿ ಸತ್ಯಕ್ಕೆ ದೂರವಾದುದು' ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ಜತೆ ಒಳ ಒಪ್ಪಂದವಾಗಿದ್ದರೆ, ಡಿ.ಕೆ. ಶಿವಕುಮಾರ್ ವಿರುದ್ಧ ಆರ್. ಅಶೋಕ ಹಾಗೂ ಸಿದ್ದರಾಮಯ್ಯ ವಿರುದ್ಧ ಸೋಮಣ್ಣ ಅವರನ್ನು ಕಣಕ್ಕಿಳಿಸುತ್ತಿರಲಿಲ್ಲ

ನಳಿನ್ ಕುಮಾರ್ ಕಟೀಲ್, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

'ರಾಜ್ಯ ಅಧ್ಯಕ್ಷರ ಹುದ್ದೆ ಖಾಲಿ ಇಲ್ಲ'

ಚಿಕ್ಕಮಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಹುದ್ದೆ ಖಾಲಿ ಇಲ್ಲ. ವಿ.ಸೋಮಣ್ಣ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ಸದ್ಯಕ್ಕೆ ನಳಿನ್‌ಕುಮಾರ್ ಕಟೀಲ್ ಅವರೇ ಮುಂದುವರಿಯಲಿದ್ದಾರೆ' ಎಂದು ಶಾಸಕ ಆರ್.ಅಶೋಕ ಹೇಳಿದರು.

'ಲೋಕಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ಬಿಜೆಪಿ ಜಯಭೇರಿ ಸಾಧಿಸುವ ನಿಟ್ಟಿನಲ್ಲಿ ಪಕ್ಷ ಸಂಘಟನೆ ಮಾಡುತ್ತಿದ್ದೇವೆ. ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ವಿಧಾನಸಭೆ ಅಧಿವೇಶನಕ್ಕೂ ಮುನ್ನ ಜುಲೈ 3ರಂದು ವಿರೋಧ ಪಕ್ಷದ ನಾಯಕರ ಆಯ್ಕೆ ನಡೆಯಲಿದೆ' ಎಂದು ಅವರು ಹೇಳಿದರು.

ಕಲಾಪ ಶುರುವಿನಿಂದಲೇ ಧರಣಿ

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿಎಸ್‌ವೈ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ನೀಡಿದ್ದ ಗ್ಯಾರಂಟಿಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ. ಸರ್ಕಾರದ ವೈಫಲ್ಯದ ವಿರುದ್ಧ ವಿಧಾನಮಂಡಲ ಅಧಿವೇಶನದ ಆರಂಭದ ದಿನದಿಂದಲೇ ಪ್ರತಿಭಟನೆ ನಡೆಸುತ್ತೇವೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಘೋಷಿಸಿದರು.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಒಂಬತ್ತು ವರ್ಷಗಳನ್ನು ಪೂರೈಸಿರುವ ಪ್ರಯುಕ್ತ ಶನಿವಾರ ನಡೆದ ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಈ ಘೋಷಣೆ ಮಾಡಿದರು. ಸಂಜೆ ನಡೆದ ಬೆಂಗಳೂರು ಕೇಂದ್ರ ಜಿಲ್ಲಾ ಬಿಜೆಪಿ ಕಾರ್ಯಕರ್ತರ ಸಭೆಯಲ್ಲೂ ಇದೇ ಮಾತು ಪುನರುಚ್ಚರಿಸಿದರು.

'ಕಾಂಗ್ರೆಸ್ ನೀಡಿದ್ದ 'ಗ್ಯಾರಂಟಿ' ಭರವಸೆಗಳೇ ನಮ್ಮ ಸೋಲಿಗೆ ಕಾರಣ. ಅವರು ಅಧಿಕಾರದ ಮದದಿಂದ ಏನೇನೋ ಭರವಸೆಗಳನ್ನು ಕೊಟ್ಟು, ಈಗ ನರೇಂದ್ರ ಮೋದಿಯವರತ್ತ ಕೈ ತೋರಿಸುತ್ತಿದ್ದಾರೆ. ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರಬೇಕು. ಐದೂ ಗ್ಯಾರಂಟಿಗಳನ್ನು ಚಾಚೂ ತಪ್ಪದೆ ಅನುಷ್ಠಾನಕ್ಕೆ ತರಲಿ. ಇಲ್ಲವಾದರೆ ಅಧಿಕಾರ ಬಿಟ್ಟು ತೊಲಗಲಿ' ಎಂದರು.

'ಕಲಾಪ ನಡೆಯಲು ಬಿಡಬೇಡಿ': 'ಅಧಿವೇಶನ ಆರಂಭದ ದಿನದಿಂದ ಮುಗಿಯುವವರೆಗೂ ಮಹಾತ್ಮ ಗಾಂಧಿ ಪ್ರತಿಮೆ ಎದುರು ನಾವು ಪ್ರತಿಭಟನೆ ನಡೆಸುತ್ತೇವೆ. ನಮ್ಮ ಪಕ್ಷದ ಶಾಸಕರು ಸದನದ ಒಳಗೆ ಸರ್ಕಾರದ ವಿರುದ್ಧ ಹೋರಾಟ ನಡೆಸಬೇಕು. ಒಂದು ದಿನ ಕೂಡ ಕಲಾಪ ನಡೆಸಲು ಅವಕಾಶ ನೀಡಬೇಡಿ' ಎಂದು ಯಡಿಯೂರಪ್ಪ ಬಿಜೆಪಿ ಶಾಸಕರಿಗೆ ಸೂಚಿಸಿದರು.

'ಹತ್ತು ಕೆ.ಜಿ. ಅಕ್ಕಿ ಉಚಿತವಾಗಿ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಕೇಂದ್ರ ಸರ್ಕಾರ ತಲಾ ಐದು ಕೆ.ಜಿ. ನೀಡುತ್ತಿದೆ. ಒಟ್ಟು ತಲಾ 15 ಕೆ.ಜಿ. ಅಕ್ಕಿ ವಿತರಿಸುವಂತೆ ನಾವು ಹೋರಾಟ ಮಾಡಬೇಕು. ಉಚಿತ ವಿದ್ಯುತ್ ಪೂರೈಸುವ ಭರವಸೆ ನೀಡಿ, ಸಾಮಾನ್ಯ ಜನರು ಪಾವತಿಸಲು ಆಗದಷ್ಟು ಬಿಲ್ ನೀಡುತ್ತಿದ್ದಾರೆ. ಗೋಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿಗೆ ಮುಂದಾಗಿದ್ದಾರೆ. ಈ ಯಾವುದಕ್ಕೂ ಅವಕಾಶ ನೀಡಬಾರದು' ಎಂದರು.

28 ಸ್ಥಾನಗಳನ್ನೂ ಗೆಲ್ಲಬೇಕು: ನರೇಂದ್ರ ಮೋದಿಯವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಬೇಕು ಎಂದು 16 ಪಕ್ಷಗಳ ಮುಖಂಡರು ಸಂಕಲ್ಪ ಮಾಡಿದ್ದಾರೆ. ಅವರು ಪ್ರಾಮಾಣಿಕರೇ ಆಗಿದ್ದರೆ ಇಂತಹ ಸಂಕಲ್ಪ ಮಾಡುತ್ತಿರಲಿಲ್ಲ. ರಾಜ್ಯದಲ್ಲಿ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲ್ಲುವ ಮೂಲಕ ತಕ್ಕ ಉತ್ತರ ನೀಡಬೇಕು ಎಂದು ಹೇಳಿದರು.

ದಕ್ಷಿಣ ಜಿಲ್ಲಾ ಘಟಕದ ಸಭೆಯಲ್ಲಿ ಸಂಸದ ತೇಜಸ್ವಿ ಸೂರ್ಯ, ಮಾಜಿ ಸಚಿವ ಗೋವಿಂದ ಕಾರಜೋಳ, ಶಾಸಕ ಸತೀಶ್ ರೆಡ್ಡಿ, ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್. ಆರ್. ರಮೇಶ್ ಉಪಸ್ಥಿತರಿದ್ದರು.

ಬೆಂಗಳೂರು ಕೇಂದ್ರ ಬಿಜೆಪಿ ಘಟಕದ ಸಭೆಯಲ್ಲಿ ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ಸಂಸದ ಪಿ.ಸಿ. ಮೋಹನ್, ಶಾಸಕರಾದ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮುನಿರತ್ನ, ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್, ಮುಖಂಡ ಸುಬ್ಬ ನರಸಿಂಹ ಉಪಸ್ಥಿತರಿದ್ದರು.

ಬಿಜೆಪಿಯ ಬೆಂಗಳೂರಿನ ಜಿಲ್ಲಾಮಟ್ಟದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಬಿ.ಎಸ್ ಯಡಿಯೂರಪ್ಪ ಶನಿವಾರ ಪಾಲ್ಗೊಂಡಿದ್ದರು

ಅಧಿಕಾರಿಗಳೇ ದಲ್ಲಾಳಿಗಳು: ಮುನಿರತ್ನ

ಕಾಂಗ್ರೆಸ್ ಸರ್ಕಾರದಲ್ಲಿ ಅಧಿಕಾರಿಗಳೇ ದಲ್ಲಾಳಿಗಳಾಗಿದ್ದಾರೆ. ಮಂತ್ರಿಗಳು ತಾವು ತಪ್ಪಿಸಿಕೊಳ್ಳಲು ಅಧಿಕಾರಿಗಳನ್ನು ದಲ್ಲಾಳಿ ಕೆಲಸಕ್ಕೆ ದೂಡಿದ್ದಾರೆ ಎಂದು ಬಿಜೆಪಿ ಶಾಸಕ ಮುನಿರತ್ನ ಆರೋಪಿಸಿದರು.

ಅರಮನೆ ಮೈದಾನದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ದಲ್ಲಾಳಿ ಕೆಲಸ ಮಾಡಲು ಸಿದ್ಧರಿದ್ದರೆ ಬನ್ನಿ ಎಂದು ಅಧಿಕಾರಿಗಳಿಗೆ ಸಚಿವರು ಹೇಳುತ್ತಿದ್ದಾರೆ' ಎಂದರು.

'ಪುನಃ ಕಾಂಗ್ರೆಸ್‌ಗೆ ಬನ್ನಿ ಎಂದು ಚುನಾವಣೆಗೂ ಮೊದಲು ನನಗೆ ಆಹ್ವಾನ ನೀಡಿದ್ದರು. ನಾನು ಅಲ್ಲಿಗೆ ಹೋಗಲಿಲ್ಲ. ಯಡಿಯೂರಪ್ಪ ಅವರಂತಹ ನಾಯಕರು ನನ್ನ ಜತೆ ಇದ್ದಾರೆ. ನಾವು ಯಾವತ್ತೂ ಸೋಲುವುದಿಲ್ಲ' ಎಂದು ಹೇಳಿದರು.

ಜುಲೈ ಒಳಗೆ ಶೂ, ಎಸ್‌ಡಿಎಂಸಿಗೆ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆ ಮಕ್ಕಳಿಗೆ ಶೂ ಮತ್ತು ಸಾಕ್ಸ್‌ಗಳನ್ನು ಸ್ಥಳೀಯವಾಗಿ ಖರೀದಿಸುವ ಅಧಿಕಾರವನ್ನು ಈ ವರ್ಷವೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ನೀಡಿ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಸ್‌ಡಿಎಂಸಿ ಅಧ್ಯಕ್ಷರು (ಖರೀದಿ ಸಮಿತಿ ಅಧ್ಯಕ್ಷ), ಮುಖ್ಯ ಶಿಕ್ಷಕರು (ಸದಸ್ಯ ಕಾರ್ಯದರ್ಶಿ) ಹಾಗೂ ಎಸ್‌ಡಿಎಂಸಿಯ ಮೂವರು ಸದಸ್ಯರ ಸಮಿತಿಯು ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸಿ, ತಮ್ಮ ಶಾಲೆಯ ಮಕ್ಕಳಿಗೆ ವಿತರಿಸಲಿದೆ.

ಮಲೆನಾಡು, ಕರಾವಳಿ ಭಾಗದಲ್ಲಿ ಕೆಲವು ತಿಂಗಳು ಅತಿ ಹೆಚ್ಚು ಮಳೆ, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಬಿಸಿಲ ತಾಪ ಇರುವ ಕಾರಣ ವಾತಾವರಣಕ್ಕೆ ಅನುಗುಣವಾಗಿ ಶೂ ಬದಲಿಗೆ ಚಪ್ಪಲಿ ಖರೀದಿಸಲೂ ಅನುಮತಿ ನೀಡಲಾಗಿದೆ.

ಕಳಪೆ ಗುಣಮಟ್ಟದ ದೂರುಗಳು ಬಂದರೆ ಮುಖ್ಯ ಶಿಕ್ಷಕರು, ಬಿಇಒ, ಡಿಡಿಪಿಐ ವಿರುದ್ಧ ಶಿಸ್ತುಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗಿದೆ. ಹಿಂದಿನ ಸರ್ಕಾರ ನಿಗದಿ ಪಡಿಸಿದ್ದ ದರವನ್ನೇ ಅಂದರೆ, 1ರಿಂದ 5ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ₹265, 6ರಿಂದ 8 ₹295, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ₹325 ನಿಗದಿ ಮಾಡಲಾಗಿದೆ.

'ಖರೀದಿ ಪ್ರಕ್ರಿಯೆ, ಅನುದಾನ ಬಳಕೆ ಮೇಲೆ ನಿಗಾವಹಿಸಲು ಪ್ರತಿ ಜಿಲ್ಲೆಗೂ ಒಬ್ಬ ನೋಡಲ್ ಅಧಿಕಾರಿ ನೇಮಿಸಲಾಗಿದೆ. ಶಾಲಾ ಸಮಿತಿಗಳು ಖರೀದಿ ಹಾಗೂ ವಿತರಣಾ ಕಾರ್ಯವನ್ನು ತಕ್ಷಣ ಆರಂಭಿಸಬೇಕು. ಪ್ರತಿ ಶಾಲೆಯೂ ಅಗತ್ಯಕ್ಕೆ ತಕ್ಕಂತೆ ಪ್ರತ್ಯೇಕವಾಗಿ ಖರೀದಿಸಬೇಕು. ಜುಲೈ 30ರ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಆಯುಕ್ತ ಆರ್. ವಿಶಾಲ್ ಸೂಚಿಸಿದ್ದಾರೆ.

'ವೀರಶೈವ ಲಿಂಗಾಯತರೆಲ್ಲ ಶೂದ್ರರು'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವೀರಶೈವ ಲಿಂಗಾಯತರು ಕೂಡ ಶೂದ್ರರು. ನಮಗಿಂತ ಮೇಲಿದ್ದ ಜಾತಿಯವರು ಈಗಾಗಲೇ ಹಿಂದುಳಿದ ವರ್ಗಗಳ ಮೀಸಲಾತಿ ಪಡೆಯುತ್ತಿದ್ದಾರೆ. ಕೇಂದ್ರ ಸರ್ಕಾರ ಮೊದಲು ನಮಗೆ ಮೀಸಲಾತಿ ಕೊಡಬೇಕಿದೆ' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಉಪಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

ನಗರದಲ್ಲಿ ಶನಿವಾರ ವೀರಶೈವ ಲಿಂಗಾಯತ ಸಮಾಜದ ಶಾಸಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ನಾವು ಬ್ರಾಹ್ಮಣರಲ್ಲ, ಕ್ಷತ್ರಿಯರಲ್ಲ, ವೈಶ್ಯರಲ್ಲೂ ಬರುವುದಿಲ್ಲ. ಹಾಗಿದ್ದರೆ ಉಳಿದದ್ದು ಶೂದ್ರ ಮಾತ್ರ. ಶೂದ್ರರಿಗೆ ಮೊದಲು ಮೀಸಲಾತಿ ಕೊಡಬೇಕಿತ್ತಲ್ಲವೇ' ಎಂದು ಪ್ರಶ್ನಿಸಿದರು.



ಪ್ರಭಾಕರ ಕೋರೆ

'ಬಸವಾಭಿಮಾನಿಗಳು ಜಾತಿ–ಧರ್ಮದ ಕಾಲಂಗಳಲ್ಲಿ 'ವೀರಶೈವ ಲಿಂಗಾಯತ' ಎಂದೇ ಮೊದಲು ಬರೆಯಿರಿ. ಅದರ ಬಳಿಕ ಉಪ ಪಂಗಡದ ಹೆಸರು ನಮೂದಿಸಿ. ಇಲ್ಲದಿದ್ದರೆ ಸಮಾಜಕ್ಕೆ ಸಂಕಷ್ಟ ತಪ್ಪಿದ್ದಲ್ಲ' ಎಂದರು.

ಸಿಇಟಿ: 27ರಿಂದ ದಾಖಲೆಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ನೇ ಸಾಲಿನ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದಿರುವ (ಸಿಇಟಿ) ಅಭ್ಯರ್ಥಿಗಳ ಶೈಕ್ಷಣಿಕ ದಾಖಲೆಗಳ ಪರಿಶೀಲನೆಯು ಜೂನ್ 27ರಿಂದ ಆರಂಭವಾಗಲಿದೆ.

ಸಿಇಟಿ ರ‍್ಯಾಂಕ್ ಪಡೆದಿರುವ ವಿದ್ಯಾರ್ಥಿಗಳು ತಾವು ವ್ಯಾಸಂಗ ಮಾಡಿದ ತಾಲ್ಲೂಕಿನ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ (ಬಿಇಒ) ತೆರಳಿ ತಮ್ಮ ವ್ಯಾಸಂಗ ಪ್ರಮಾಣಪತ್ರ, ಗ್ರಾಮೀಣ ಪ್ರಮಾಣಪತ್ರ, ದ್ವಿತೀಯ ಪಿಯು ಅಂಕಪಟ್ಟಿ, ಕನ್ನಡ ಮಾಧ್ಯಮ ಪ್ರಮಾಣಪತ್ರಗಳನ್ನು ಪರಿಶೀಲಿಸಿಕೊಳ್ಳಬೇಕು. ಪರಿಶೀಲನಾ ಕಾರ್ಯ ಜುಲೈ 15ರವರೆಗೆ ನಡೆಯಲಿದೆ. ವಿದ್ಯಾರ್ಥಿಗಳಿಗೆ ಅವರು ಗಳಿಸಿದ ರ‍್ಯಾಂಕ್ ಆಧಾರದಲ್ಲಿ ದಿನ ನಿಗದಿ ಮಾಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಮಾಹಿತಿ ನೀಡಿದ್ದಾರೆ.

ಪರಿಶೀಲನೆಯ ವೇಳೆ ಸಿಇಟಿ ಪ್ರವೇಶ ಪತ್ರ, ಅರ್ಜಿ, ಶೈಕ್ಷಣಿಕ ದಾಖಲೆಗಳ ಪ್ರತಿಗಳನ್ನು ಹಾಜರುಪಡಿಸಬೇಕು. ಹೆಚ್ಚಿನ ಮಾಹಿತಿಗೆ http://kea.kar.nic.in ಸಂಪರ್ಕಿಸಬಹುದು. ಜಾತಿ, ಆದಾಯ ಪ್ರಮಾಣಪತ್ರ ಸೇರಿದಂತೆ ಕಂದಾಯ ದಾಖಲೆಗಳ ಪರಿಶೀಲನೆಗೆ ಕೆಇಎಗೆ ಹಾಜರಾಗಬೇಕು. ಶೀಘ್ರ ವೇಳಾಪಟ್ಟಿ ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ADVERTORIAL

Aakash + BYJU'S

ಆಕಾಶ್ ಕರ್ನಾಟಕದ ವಿದ್ಯಾರ್ಥಿಗಳು ಸತತವಾಗಿ 3 ವರ್ಷಗಳ ಕಾಲ NEET (UG) ಮತ್ತು KCET (Engg.) ಪರೀಕ್ಷೆಗಳಲ್ಲಿ ಪ್ರಕಾಶಮಾನವಾಗಿ ಮಿಂಚಿದ್ದಾರೆ.

NEET (UG) ಮತ್ತು KCET ಪರೀಕ್ಷೆಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳ ಸತತ ಅತ್ಯುತ್ತಮ ಪ್ರದರ್ಶನಗಳಲ್ಲಿ ಆಕಾಶ್ ಸಂಸ್ಥೆಯು ಅಪಾರ ಹೆಮ್ಮೆಯನ್ನು ಹೊಂದಿದೆ. ವರ್ಷದಿಂದ ವರ್ಷಕ್ಕೆ, ಕರ್ನಾಟಕದ ಆಕಾಶ್ ಸಂಸ್ಥೆಯ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ ಮತ್ತು ಉನ್ನತ ಶ್ರೇಣಿಯನ್ನು ಗಳಿಸಿದ್ದಾರೆ. ಅವರ ಸಮರ್ಪಣೆ ಮತ್ತು ಕಠಿಣ ಪರಿಶ್ರಮವನ್ನು ಪುನರುಚ್ಚರಿಸಿದ್ದಾರೆ. ಅವರ ಗಮನಾರ್ಹ ಸಾಧನೆಗಳನ್ನು ಪರಿಶೀಲಿಸೋಣ:

1. ಜಶನ್ ಛಾಬ್ರಾ – ಅಖಿಲ ಭಾರತ ಶ್ರೇಣಿ 5 – NEET (UG) 2021: ಆಕಾಶ್‌ನಲ್ಲಿ 4–ವರ್ಷದ ತರಗತಿಯ ವಿದ್ಯಾರ್ಥಿ. ಜಶನ್ ಛಾಬ್ರಾ NEET (UG) 2021 ರಲ್ಲಿ ನಂಬಲಾಗದ ಅಖಿಲ ಭಾರತ 5 ನೇ ಶ್ರೇಯಾಂಕವನ್ನು ಸಾಧಿಸಿದರು. ಅವರ ಅಸಾಧಾರಣ ಸಾಧನೆಯು ರಾಷ್ಟ್ರದ ಮಹತ್ವಾಕಾಂಕ್ಷಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿದೆ.

2. ಹೃಷಿಕೇಶ್ ಗಂಗೂಲೆ – ಅಖಿಲ ಭಾರತ ಶ್ರೇಣಿ 3 – NEET (UG) 2022: ಆಕಾಶ್‌ನಲ್ಲಿ ಮತ್ತೊಬ್ಬ ಪ್ರತಿಭಾವಂತ ತರಗತಿಯ ವಿದ್ಯಾರ್ಥಿ, ಹೃಷಿಕೇಶ್ ಗಂಗೂಲೆ ಅವರು NEET ನಲ್ಲಿ 715 / 720 ಅಂಕಗಳನ್ನು ಗಳಿಸುವ ಮೂಲಕ ಸಂಸ್ಥೆಯ ಧ್ವಜವನ್ನು ಎತ್ತರಕ್ಕೆ ಹಾರಿಸಿದ್ದಾರೆ. NEET (UG) 2022 ರಲ್ಲಿ ಅಖಿಲ ಭಾರತ 3 ನೇ ಶ್ರೇಯಾಂಕವನ್ನು ಗಳಿಸಿದ ಅವರ ಗಮನಾರ್ಹ ಸಾಧನೆಯು ಅವರನ್ನು ದೇಶದ ಅಗ್ರ ಶ್ರೇಯಾಂಕಿತರಲ್ಲಿ ಒಬ್ಬರನ್ನಾಗಿ ಮಾಡಿತು.

3. ಧ್ರುವ ಅಡ್ವಾಣಿ – ಅಖಿಲ ಭಾರತ ಶ್ರೇಣಿ 5 – NEET (UG) 2023: ಶ್ರೇಷ್ಠತೆಯ ಪರಂಪರೆಯನ್ನು ಮುಂದುವರೆಸುತ್ತಾ, ಧ್ರುವ ಅಡ್ವಾಣಿ, ಆಕಾಶ್ ತರಗತಿಯ ವಿದ್ಯಾರ್ಥಿ, NEET (UG) 2023 ರಲ್ಲಿ ಪ್ರಭಾವಶಾಲಿ ಅಖಿಲ ಭಾರತ 5 ನೇ ಶ್ರೇಯಾಂಕವನ್ನು ಗಳಿಸುವ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಅವರ ಸಮರ್ಪಣೆ ಮತ್ತು ಕಠಿಣ ಪರಿಶ್ರಮ ನಿಜವಾಗಿಯೂ ಶ್ಲಾಘನೀಯ.

ಕರ್ನಾಟಕದ ಆಕಾಶ್ ವಿದ್ಯಾರ್ಥಿಗಳು NEET (UG) ಅನ್ನು ಗೆದ್ದಿರುವುದು ಮಾತ್ರವಲ್ಲದೆ ಸಾಮಾನ್ಯವಾಗಿ KCET ಎಂದು ಕರೆಯಲ್ಪಡುವ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಯಶಸ್ವಿಯಾಗಿ ಪಡೆದಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕರ್ನಾಟಕದಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪದವಿಪೂರ್ವ ಕಾಲೇಜುಗಳಿಗೆ ಪ್ರವೇಶಿಸಲು ಬಯಸುವ ವಿದ್ಯಾರ್ಥಿಗಳಿಗೆ ವಾರ್ಷಿಕ ಪ್ರವೇಶ ಪರೀಕ್ಷೆಯನ್ನು ನಡೆಸುತ್ತದೆ. ಕೆಸಿಇಟಿ ಅತ್ಯಂತ ಪ್ರತಿಷ್ಠಿತ ಪರೀಕ್ಷೆಯಾಗಿದೆ ಮತ್ತು ಪ್ರತಿ ವರ್ಷ 2.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗುತ್ತಾರೆ.

ಸತತ ಮೂರು ವರ್ಷಗಳಿಂದ ಕೆಸಿಇಟಿಯಲ್ಲಿ ಪ್ರತಿಷ್ಠಿತ ಮೊದಲನೇ ಶ್ರೇಣಿ ಗಳಿಸುವ ಮೂಲಕ ನಮ್ಮ ವಿದ್ಯಾರ್ಥಿಗಳು ಗಮನಾರ್ಹ ಹ್ಯಾಟ್ರಿಕ್ ಶ್ರೇಷ್ಠತೆಯನ್ನು ಸಾಧಿಸಿದ್ದಾರೆ.

- 2021 ರಲ್ಲಿ, ಮೇಘನ್ HK ತನ್ನ ಅಸಾಧಾರಣ ಕೌಶಲ್ಯಗಳನ್ನು ಪ್ರದರ್ಶಿಸಿದರು ಮತ್ತು KCET (Engg.) ಟಾಪರ್ ಆಗಿ ಹೊರಹೊಮ್ಮಿದರು, ಮೊದಲನೇ ಶ್ರೇಯಾಂಕವನ್ನು ಗಳಿಸಿದರು.
- 2022 ರಲ್ಲಿ, ಅಪೂರ್ವ್ ಟಂಡನ್ ಅವರು ಕೆಸಿಇಟಿ ನಲ್ಲಿ ಉನ್ನತ ಶ್ರೇಣಿಯನ್ನು ಪಡೆಯುವ ಮೂಲಕ ಪರಂಪರೆಯನ್ನು ಮುಂದುವರೆಸಿದ್ದಾರೆ.
- 2023 ರಲ್ಲಿ, ವಿಘ್ನೇಶ್ ಎನ್ ಅವರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು ಮತ್ತು ಮತ್ತೊಮ್ಮೆ ಮೊದಲನೇ ಸ್ಥಾನವನ್ನು ಪಡೆದರು, ಆಕಾಶ್ ಇನ್ಸ್ಟಿಟ್ಯೂಟ್‌ನ ಹೆಮ್ಮೆಗೆ ಮತ್ತೊಂದು ಗರಿಯನ್ನು ಸೇರಿಸಿದರು.

ಧ್ರುವ್ ಅಡ್ವಾಣಿ ಅವರೊಂದಿಗಿನ ಸಂವಾದದ ಆಯ್ದ ಭಾಗಗಳು – ಅಖಿಲ ಭಾರತ ಶ್ರೇಯಾಂಕ 5 (NEET – UG, 2023), ರಲ್ಲಿ ಅವರು ಆಕಾಶ್ ಅವರೊಂದಿಗಿನ ಪ್ರಯಾಣದ ತುಣುಕುಗಳನ್ನು ಹಂಚಿಕೊಂಡಿದ್ದಾರೆ:

ಪ್ರಶ್ನೆ: ನಿಮ್ಮ ಪರೀಕ್ಷಾ ಕೌಶಲ್ಯವನ್ನು ಸುಧಾರಿಸಲು ಆಕಾಶ್ ಸಂಸ್ಥೆ ಹೇಗೆ ಕೊಡುಗೆ ನೀಡಿದೆ?
ಉ: ಆಕಾಶ್ ಸಂಸ್ಥೆಯು ನನ್ನ ಪರೀಕ್ಷೆ–ತೆಗೆದುಕೊಳ್ಳುವ ಕೌಶಲ್ಯವನ್ನು ಹೆಚ್ಚಿಸುವಲ್ಲಿ, ವಿಶೇಷವಾಗಿ ಓದುವ ತಪ್ಪುಗಳನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ನನ್ನ ಹೆಚ್ಚಿನ ತಪ್ಪುಗಳು ಪರಿಕಲ್ಪನಾ ದೋಷಗಳಿಗಿಂತ ಹೆಚ್ಚಾಗಿ ಬಬ್ಲಿಂಗ್ ಅಥವಾ ಓದುವ ದೋಷಗಳಿಂದಾಗಿ ಎಂದು ನಾನು ಅರಿತುಕೊಂಡೆ. ಆಕಾಶ್ ಅವರ ಪರೀಕ್ಷೆಗಳು, ವಿಶೇಷವಾಗಿ ಅಖಿಲ ಭಾರತ ಮಟ್ಟದಲ್ಲಿ, ಈ ಸಮಸ್ಯೆಗಳನ್ನು ಗುರುತಿಸಲು ಮತ್ತು ಸರಿಪಡಿಸಲು ಅತ್ಯಂತ ಪ್ರಯೋಜನಕಾರಿಯಾಗಿದೆ. ಪರೀಕ್ಷೆಗಳು, ಕಲಿಕೆ ಮತ್ತು ಬೆಳವಣಿಗೆಗೆ ಅಮೂಲ್ಯವಾದ ಅವಕಾಶಗಳನ್ನು ಒದಗಿಸುತ್ತವೆ ಎಂದು ನನ್ನ ಅಧ್ಯಾಪಕರೊಂದಿಗೆ ನಾನು ಒಪ್ಪುತ್ತೇನೆ.

ಪ್ರಶ್ನೆ: ನಿಮ್ಮ ಅಧ್ಯಯನವನ್ನು ಇತರ ಚಟುವಟಿಕೆಗಳೊಂದಿಗೆ ಸಮತೋಲನಗೊಳಿಸಲು ನೀವು ಹೇಗೆ ನಿರ್ವಹಿಸುತ್ತೀರಿ?
ಉ: ಇತರ ಚಟುವಟಿಕೆಗಳೊಂದಿಗೆ ಅಧ್ಯಯನವನ್ನು ಸಮತೋಲನಗೊಳಿಸುವುದು ನನ್ನ ಒಟ್ಟಾರೆ ಯೋಗಕ್ಷೇಮಕ್ಕೆ ನಿರ್ಣಾಯಕವಾಗಿತ್ತು. ನಾನು ಮಾಡುವುದನ್ನು ಆನಂದಿಸುವುದರಲ್ಲಿ ನಾನು ದೃಢವಾಗಿ ನಂಬುತ್ತೇನೆ ಮತ್ತು ಆದ್ದರಿಂದ ನನ್ನ ಅಧ್ಯಯನದ ಜೊತೆಗೆ ನನ್ನ ಉತ್ಸಾಹವನ್ನು ಮುಂದುವರಿಸಿದೆ. ಈ ಸುಸಜ್ಜಿತ ವಿಧಾನವು ಆರೋಗ್ಯಕರ ಕೆಲಸ–ಜೀವನದ ಸಮತೋಲನವನ್ನು ಕಾಪಾಡಿಕೊಳ್ಳಲು ನನಗೆ ಸಹಾಯ ಮಾಡಿತು. ವಿರಾಮಗಳನ್ನು ತೆಗೆದುಕೊಳ್ಳುವ ಮತ್ತು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಾಮುಖ್ಯತೆಯನ್ನು ಒತ್ತಿಹೇಳುವ ನನ್ನ ಬೆಂಬಲಿತ ಕುಟುಂಬಕ್ಕೆ ನಾನು ಕೃತಜ್ಞನಾಗಿದ್ದೇನೆ.

ಸತತವಾಗಿ ಪ್ರಶ್ನೆಗಳನ್ನು ಕೇಳಿ. ಪ್ರತಿದಿನ ಅಧ್ಯಯನ ಮಾಡುವ ಅಭ್ಯಾಸವನ್ನು ರಚಿಸುವುದು ಮತ್ತು ಉತ್ತಮವಾಗಿ ರಚನಾತ್ಮಕ ವೇಳಾಪಟ್ಟಿಯನ್ನು ನಿರ್ವಹಿಸುವುದು ನಿರ್ಣಾಯಕವಾಗಿದೆ, ವಿಶೇಷವಾಗಿ JEE ನಂತಹ ಪರೀಕ್ಷೆಗಳಿಗೆ ಹೆಚ್ಚುವರಿಯಾಗಿ ಅಣಕು ಪರೀಕ್ಷೆಗಳೊಂದಿಗೆ ಅಭ್ಯಾಸ ಮಾಡುವುದು ಮತ್ತು ತಪ್ಪುಗಳನ್ನು ವಿಶ್ಲೇಷಿಸುವುದು ನಿಮ್ಮ ಕಾರ್ಯಕ್ಷಮತೆಯನ್ನು ಗಮನಾರ್ಹವಾಗಿ ಸುಧಾರಿಸುತ್ತದೆ. ಅಂತಿಮವಾಗಿ ವಿರಾಮಗಳನ್ನು ತೆಗೆದುಕೊಳ್ಳಲು ಮರೆಯದಿರಿ. ನೀವು ಆನಂದಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ, ಶೈಕ್ಷಣಿಕ ಮತ್ತು ವೈಯಕ್ತಿಕ ಯೋಗಕ್ಷೇಮದ ನಡುವೆ ಆರೋಗ್ಯಕರ ಸಮತೋಲನವನ್ನು ಕಾಪಾಡಿಕೊಳ್ಳಿ.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ಮತ್ತು NEET (UG) ನಲ್ಲಿ ಆಕಾಶ್ ಸಂಸ್ಥೆಯ ವಿದ್ಯಾರ್ಥಿಗಳ ಅಸಾಧಾರಣ ಫಲಿತಾಂಶಗಳು ಒಂದು ಪ್ರೀಮಿಯರ್ ಕೋಚಿಂಗ್ ಸಂಸ್ಥೆಯಾಗಿ ತನ್ನ ಸ್ಥಾನವನ್ನು ಗಟ್ಟಿಗೊಳಿಸಿದೆ. ಆಕಾಶ್ ಕರ್ನಾಟಕ ವಿದ್ಯಾರ್ಥಿಗಳ ಸತತ ಯಶಸ್ಸಿಗೆ ಸೂಕ್ಷ್ಮವಾಗಿ ವಿನ್ಯಾಸಗೊಳಿಸಿದ ಪಠ್ಯಕ್ರಮ ಮತ್ತು ವೈಜ್ಞಾನಿಕವಾಗಿ ರಚಿಸಲಾದ ಬೋಧನಾ ಶಿಕ್ಷಣಕ್ಕೆ ಸಾಕ್ಷಿಯಾಗಿದೆ. KCET, NEET ಮತ್ತು JEE ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸಂಪನ್ಮೂಲಗಳು, ಸಮಗ್ರ ಮಾರ್ಗದರ್ಶನ ಮತ್ತು ವೈಯಕ್ತಿಕ ಬೆಂಬಲವನ್ನು ಒದಗಿಸಲು ನಮ್ಮ ಸಂಸ್ಥೆಯು ಸಮರ್ಪಿತವಾಗಿದೆ. ಕರ್ನಾಟಕದ ಆಕಾಶ್ ವಿದ್ಯಾರ್ಥಿಗಳ ಗಮನಾರ್ಹ ಸಾಧನೆಗಳು ಅವರ ಅಚಲವಾದ ಬದ್ಧತೆಯನ್ನು ಮತ್ತು ಶೈಕ್ಷಣಿಕ ಉತ್ಕೃಷ್ಟತೆಯ ಸಂಸ್ಥೆಯ ನಿರಂತರ ಅನ್ವೇಷಣೆಯನ್ನು ಒತ್ತಿಹೇಳುತ್ತವೆ. ಅವರ ಅತ್ಯುತ್ತಮ ಸಾಧನೆಗಳಿಗಾಗಿ ನಾವು ಎಲ್ಲಾ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅವರ ಯಶಸ್ಸು ಭವಿಷ್ಯದ ಆಕಾಂಕ್ಷಿಗಳಿಗೆ ಸ್ಫೂರ್ತಿಯ ದಾರಿದೀಪವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಆಕಾಶ್ ಸಂಸ್ಥೆಯಲ್ಲಿ ಒದಗಿಸಲಾದ ಗುಣಮಟ್ಟದ ಶಿಕ್ಷಣಕ್ಕೆ ಸಾಕ್ಷಿಯಾಗಿದೆ.

ಆಕಾಶ್ ಇನ್ಸ್ಟಿಟ್ಯೂಟ್ – ಮತ್ತೊಮ್ಮೆ NEET ಮತ್ತು JEE ನಲ್ಲಿ ಅತ್ಯುತ್ತಮ ಫಲಿತಾಂಶಗಳನ್ನು ನೀಡುತ್ತಿದೆ! ಆಕಾಶ್ ಇನ್ಸ್ಟಿಟ್ಯೂಟ್ ಮತ್ತೊಮ್ಮೆ NEET (UG) 2023 ರಲ್ಲಿ ಮುಂಚೂಣಿಯಲ್ಲಿ ಹೊರಹೊಮ್ಮಿದೆ, ವೈದ್ಯಕೀಯ ಪ್ರವೇಶ ಪರೀಕ್ಷೆಗಳಿಗೆ ಪ್ರಮುಖ ಕೋಚಿಂಗ್ ಸಂಸ್ಥೆಯಾಗಿ ತನ್ನ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. 145 ವಿದ್ಯಾರ್ಥಿಗಳು 700 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಮತ್ತು ಒಟ್ಟು 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು NEET (UG) 2023 ರಲ್ಲಿ ಅರ್ಹತೆ ಪಡೆದಿದ್ದಾರೆ, ಆಕಾಶ್ ಇನ್ಸ್ಟಿಟ್ಯೂಟ್ ಅತ್ಯುತ್ತಮ ಫಲಿತಾಂಶಗಳನ್ನು ನೀಡುವ ತನ್ನ ಪರಂಪರೆಯನ್ನು ಉಳಿಸಿಕೊಂಡಿದೆ. ಗಮನಾರ್ಹವಾಗಿ, ಸಂಸ್ಥೆಯ ತರಗತಿಯ ವಿದ್ಯಾರ್ಥಿಗಳು ಅಖಿಲ ಭಾರತ ಶ್ರೇಯಾಂಕ 3, 5, 6, ಮತ್ತು 8 ಅನ್ನು ಅಗ್ರ 10 ಅಖಿಲ ಭಾರತ ಶ್ರೇಣಿಗಳಲ್ಲಿ ಪಡೆದುಕೊಂಡಿದ್ದಾರೆ. ಜೆಇಇ (ಅಡ್ವಾನ್ಸ್ಡ್) 2023 ರಲ್ಲಿಯೂ ಸಹ ಆಕಾಶ್ ವಿದ್ಯಾರ್ಥಿಗಳು ಗಮನಾರ್ಹವಾದ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿದ್ದಾರೆ. ನಮ್ಮ 8 ವಿದ್ಯಾರ್ಥಿಗಳು (ತರಗತಿ, ಡಿಜಿಟಲ್ ಮತ್ತು DLP ಕೋರ್ಸ್‌ಗಳ ವಿದ್ಯಾರ್ಥಿಗಳು ಸೇರಿದಂತೆ) ಟಾಪ್ 50 ಅಖಿಲ ಭಾರತ ಶ್ರೇಣಿಯನ್ನು ಪಡೆದುಕೊಂಡಿದ್ದಾರೆ ಮತ್ತು ಒಟ್ಟು 2340 ಆಕಾಶ್ ವಿದ್ಯಾರ್ಥಿಯರು ಜೆಇಇ (ಅಡ್ವಾನ್ಸ್ಡ್) 2023 ರಲ್ಲಿ ಅರ್ಹತೆ ಪಡೆದಿದ್ದಾರೆ.

ಈ ಗಮನಾರ್ಹ ಸಾಧನೆಯು ಗುಣಮಟ್ಟದ ಶಿಕ್ಷಣವನ್ನು ನೀಡಲು ಮತ್ತು ವೈದ್ಯಕೀಯದಲ್ಲಿ ಯಶಸ್ವಿ ವೃತ್ತಿಜೀವನಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಆಕಾಶ್ ಸಂಸ್ಥೆಯ ಬದ್ಧತೆಯನ್ನು ಒತ್ತಿಹೇಳುತ್ತದೆ. 30 ವರ್ಷಗಳ ಹಿಂದೆ ಸ್ಥಾಪಿತವಾದ ಆಕಾಶ್ ಸಂಸ್ಥೆಯು ಭಾರತದಾದ್ಯಂತ ಮಹತ್ವಾಕಾಂಕ್ಷಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ತರಬೇತಿ ಮತ್ತು ಮಾರ್ಗದರ್ಶನ ನೀಡುವಲ್ಲಿ ಮುಂಚೂಣಿಯಲ್ಲಿದೆ. ಅದರ ಸಾಬೀತಾದ ಬೋಧನಾ ವಿಧಾನ, ಅನುಭವಿ ಅಧ್ಯಾಪಕರು ಮತ್ತು ಸಮಗ್ರ ಶೈಕ್ಷಣಿಕ ವಸ್ತುಗಳು, ಆಕಾಶ್ ಶಿಕ್ಷಣ ವಲಯದಲ್ಲಿ ವಿಶ್ವಾಸಾರ್ಹ ಹೆಸರಾಗಿದೆ. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಪೋಷಿಸಲು ಮತ್ತು ಅವರ ಕನಸುಗಳನ್ನು ಸಾಧಿಸಲು ಅವರನ್ನು ಸಬಲೀಕರಣಗೊಳಿಸಲು ಸಂಸ್ಥೆಯ ಬದ್ಧತೆಯನ್ನು ಈ ಟಾಪರ್‌ಗಳ ಯಶಸ್ಸಿನ ಕಥೆಗಳ ಮೂಲಕ ನಿರೂಪಿಸಲಾಗಿದೆ.

ರೋಣ ತಾಲ್ಲೂಕಿನ ಮುಗಳಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಗ್ರಾಮಸ್ಥರು ಸರದಿ ಸಾಲಿನಲ್ಲಿ ಖಾಲಿ ಕೊಡ ಇಟ್ಟುಕೊಂಡು ಬಿರುಬಿಸಿಲಿನಲ್ಲಿ ನಿಂತುಕೊಂಡಿರುವುದು.

ಚಿತ್ರದುರ್ಗ ನಗರದ ಕರುವಿನಕಟ್ಟೆ ವೃತ್ತದ ಸಮೀಪ ಟ್ಯಾಂಕರ್ ನೀರಿಗೆ ಮುಗಿಬಿದ್ದ ಜನರು. ಪ್ರಜಾವಾಣಿ ಚಿತ್ರ: ವಿ.ಚಂದ್ರಪ್ಪ

ದಾರಿತಪ್ಪಿದ ಜಲಜೀವನ ಮಿಷನ್

ಒಂದನೇ ಪುಟದಿಂದ..

ಈ ನಡುವೆ, 'ದೇಶದಲ್ಲಿ ಯೋಜನೆ ಯನ್ನು ನಿಗದಿತ ಗುರಿಯಂತೆ ಅನುಷ್ಠಾನಗೊಳಿಸಿದಲ್ಲಿ ಕಲುಷಿತ ನೀರಿನಿಂದ ಬರುವ ವಾಂತಿ, ಭೇದಿ ಹಾಗೂ ಸಂಬಂಧಿತ ರೋಗಗಳಿಂದ ಸಂಭವಿಸುವ 4 ಲಕ್ಷ ಸಾವುಗಳನ್ನು ತಡೆಯಲು ಸಾಧ್ಯ' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ. ಅನುಷ್ಠಾನದಿಂದಾಗಿ ಆರೋಗ್ಯದ ದೃಷ್ಟಿಯಿಂದ ಆಗುವ ಪ್ರಯೋಜನಗಳ ಕುರಿತು ಅಧ್ಯಯನ ನಡೆಸುವಂತೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯವು ಡಬ್ಲ್ಯುಎಚ್‌ಒಗೆ ಮನವಿ ಮಾಡಿತ್ತು. 'ಭೇದಿಯಿಂದಾಗಿ ಹಲವು ಆರೋಗ್ಯ ಸಮಸ್ಯೆಗಳು ಕಂಡುಬರುತ್ತವೆ. ಬಾಧಿತ ವ್ಯಕ್ತಿಯ ಜೀವನ ಗುಣಮಟ್ಟ ಕುಸಿಯಲಿದೆ. ಆದರೆ, ಜಲಜೀವನ ಮಿಷನ್ ಪರಿಣಾಮ ಕಾರಿಯಾಗಿ ಜಾರಿಯಾದರೆ, ಜನರ ಆರೋಗ್ಯ ರಕ್ಷಣೆಗೆ ವಿನಿಯೋಗಿಸಬಹುದಾದ ₹ 8 ಲಕ್ಷ ಕೋಟಿಯನ್ನು ಉಳಿತಾಯ ಮಾಡಬ ಹುದು' ಎಂದು ಅಧ್ಯಯನದಲ್ಲಿ ಪ್ರಸ್ತಾಪಿಸಲಾಗಿದೆ. ಇಷ್ಟು ಮಹತ್ವದ ಯೋಜನೆಯ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲುಷಿತ ನೀರು ಹಲವರನ್ನು ಬಲಿ ಪಡೆದರೂ ದುರ್ಘಟನೆಗಳು ಮರುಕಳಿಸುತ್ತಿವೆ. ಬಳ್ಳಾರಿ ತಾಲ್ಲೂಕಿನ ಶಂಕರ ಬಂಡೆ, ತಿರುಮಲನಗರ ಕ್ಯಾಂಪ್, ಧನಲಕ್ಷ್ಮೀ ಕ್ಯಾಂಪ್, ವಿಘ್ನೇಶ್ವರ ನಗರ ಕ್ಯಾಂಪ್, ಮಾರಮ್ಮ ಕ್ಯಾಂಪ್‌ನಲ್ಲಿ ಕಾಸು ಕೊಟ್ಟರೂ ಒಂದು ಕೊಡ ನೀರು ಕೂಡ ಸಿಗದ ಸ್ಥಿತಿ ಇದೆ. ಟ್ಯಾಂಕರ್ ನೀರಿಗಾಗಿ ಕಿಲೋಮೀಟರುಗಟ್ಟಲೆ ಅಲೆಯಬೇಕು. ವೇಣಿವೀರಾಪುರದಲ್ಲಿ 2 ಕಿ.ಮೀ. ದೂರದಲ್ಲೇ ತುಂಗಭದ್ರಾ ಕಾಲುವೆ ಹರಿಯುತ್ತಿದ್ದರೂ ₹ 10ಕ್ಕೆ ಕೊಡ ನೀರು ಖರೀದಿಸಬೇಕಾದ ಪರಿಸ್ಥಿತಿಯಿದೆ.

ಶುಲ್ಕದ ಆತಂಕ: ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಬನ್ನಿಕುಪ್ಪೆಯಲ್ಲಿ ಮಾರ್ಚ್‌ನಲ್ಲಿ ಕಾಮಗಾರಿ ಶುರುವಾಗಿ ಪೈಪ್‌ಲೈನ್ ಹಾಕುತ್ತಿದ್ದಾರೆ. 2.5 ಸಾವಿರ ಮನೆಗಳ ಪೈಕಿ ಅರ್ಧದಷ್ಟು ಮನೆಗಳಿಗೆ ನಲ್ಲಿ, ಮೀಟರ್ ಬಂದಿದೆ. ಆದರೆ ನೀರು ಬಂದಿಲ್ಲ. ಬೆಳಗಾವಿ ತಾಲ್ಲೂಕು ಹೊಸವಂಟಮೂರಿ ಗ್ರಾಮದಲ್ಲಿ ಬಾವಿಯೇ ಗತಿ. ಬಿಂದಿಗೆ ಹೊತ್ತು ಗುಡ್ಡವೇರಲೇಬೇಕು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರತಿನಿಧಿಸುವ ಕ್ಷೇತ್ರದಲ್ಲಿ ಕಾಮಗಾರಿಯೇ ಶುರುವಾಗಿಲ್ಲ. 'ಚುನಾವಣೆ ನೀತಿ ಸಂಹಿತೆಯಿಂದ ಕಾಮಗಾರಿ ವಿಳಂಬ ವಾಗಿತ್ತು. ಇದೀಗ ಟ್ಯಾಂಕ್ ನಿರ್ಮಿಸಲಾಗುತ್ತಿದ್ದು, ಘಟಪ್ರಭಾ ನದಿಯಿಂದ ನೀರು ತರುತ್ತೇವೆ' ಎನ್ನುತ್ತಾರೆ ಕುಡಿಯುವ ನೀರು–ನೈರ್ಮಲ್ಯ ಇಲಾಖೆಯ ಬೆಳಗಾವಿ ತಾಲ್ಲೂಕು ಎಇಇ ಎಸ್.ಡಿ.ಕೋಳಿ.

ರಾಜ್ಯಕ್ಕೆ ಸ್ಥಾನವಿಲ್ಲ!: ಯೋಜನೆ ಅನುಷ್ಠಾನದ ವಿವಿಧ ವಿಭಾಗಗಳಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ರಾಜ್ಯಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಜೆಜೆಎಂ ಜಾಲತಾಣದಲ್ಲಿರುವ ಮಾಹಿತಿಯ ಪ್ರಕಾರ, ಒಟ್ಟಾರೆ ಪ್ರಗತಿಯಲ್ಲಿ ಉತ್ತರಪ್ರದೇಶ, ತಮಿಳುನಾಡು, ಹಿಮಾಚಲ ಪ್ರದೇಶ ಮುಂದಿವೆ. ಯೋಜನೆಯ ಜಾರಿ ಬಗ್ಗೆ ಜನಪ್ರತಿನಿಧಿಗಳ ಅಸಮಾಧಾನ ಮಾತಿಗಷ್ಟೇ ಸೀಮಿತವಾಗಿದೆ. ಅಧಿಕೃತ ದೂರು ಸಲ್ಲಿಸಿದ ನಿದರ್ಶನಗಳಿಲ್ಲ.

'ಇಚ್ಛಾಶಕ್ತಿ, ಸಮನ್ವಯದ ಕೊರತೆ, ಮೇಲ್ವಿಚಾರಣೆಯಲ್ಲಿ ನಿರ್ಲಕ್ಷ್ಯದಿಂದ ಯೋಜನೆ ಚುರುಕಾಗಿಲ್ಲ. ಕೋವಿಡ್ ಮತ್ತು ವಿಧಾನಸಭೆ ಚುನಾವಣೆಯ ನೀತಿಸಂಹಿತೆಯೂ ತೊಡಕಾಯಿತು. ಇದೀಗ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಯೋಜನೆಗೆ ಅಗತ್ಯವಾದ ಅನುದಾನವಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಕಲುಷಿತ ನೀರೇ ಆಸರೆ!: ಕಲ್ಯಾಣ ಕರ್ನಾಟಕದ ಬಹುತೇಕ ಕಡೆಗಳಲ್ಲಿ ದಕ್ಷತೆಯ ಕೊರತೆ, ಭ್ರಷ್ಟಾಚಾರ, ಎಂಜಿನಿಯರ್‌ಗಳ ವರ್ಗಾವಣೆ, ಸಮರ್ಪಕ ಜಲಮೂಲಗಳಿಲ್ಲದಿದ್ದರೂ ಕಾಟಾಚಾರಕ್ಕೆ ಪೈಪ್‌ಲೈನ್ ಅಳವಡಿಸಿದ ಪ್ರಕರಣಗಳಿವೆ. ಕಲುಷಿತ ನೀರು ಸೇವಿಸಿ ಕಮಲಾಪುರ ತಾಲ್ಲೂಕಿನ ದಸ್ತಾಪುರ, ಗೊಬ್ಬರವಾಡಿ, ಜೇವರ್ಗಿ ತಾಲ್ಲೂಕಿನ ಮಂದೇವಾಲ, ಯಾದಗಿರಿ ಜಿಲ್ಲೆ ಗುರುಮಠಕಲ್ ತಾಲ್ಲೂಕಿನ ಅನಪುರ, ರಾಯಚೂರು ಜಿಲ್ಲೆಯ ರೇಕಲಮರಡಿ ಗ್ರಾಮದಲ್ಲಿ ಕೆಲವರು ಸತ್ತರು. ಇಷ್ಟು ದುರ್ಘಟನೆಗಳು ನಡೆದರೂ ಯೋಜನೆ ಅನುಷ್ಠಾನ ಚುರುಕುಗೊಂಡಿಲ್ಲ. ಇದು, ಆ ಭಾಗದ ದುಸ್ಥಿತಿ.

'ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಮಂಡ್ಯ ಹಾಗೂ ಕೊಪ್ಪಳದಲ್ಲಿ ನೀರಿನ ಮೂಲ ಇದ್ದಲ್ಲೇ ಮತ್ತೊಮ್ಮೆ ಕಾಮಗಾರಿ ನಡೆಸಿದಂತೆ ತೋರಿಸಿ ಬೋಗಸ್ ಬಿಲ್ ಸೃಷ್ಟಿಸಲಾಗಿದೆ' ಎಂಬ ಆರೋಪಗಳಿವೆ. ಗುತ್ತಿಗೆದಾರರ ವಿಳಂಬ ನೀತಿ, ಗ್ರಾಮಸ್ಥರು ವಂತಿಗೆ ಕೊಡಬೇಕು ಎನ್ನುವ ಅಂಶವೂ ಜೆಜೆಎಂ ವೇಗಕ್ಕೆ ಅಡ್ಡಿಯಾಗಿದೆ. ಕಾರಂಜಾ ಜಲಾಶಯದಿಂದ ಔರಾದ್ ಪಟ್ಟಣಕ್ಕೆ ನೀರು ತರುವ ಯೋಜನೆ ಇದೆ. ಅಲ್ಲಿಂದ ನೀರೇ ಬಂದಿಲ್ಲ. ಆದರೆ, ನಲ್ಲಿ ಸಂಪರ್ಕ ಕಲ್ಪಿಸಲಾಗುತ್ತಿದೆ! ಕೆಲವೆಡೆ ರಸ್ತೆ ಮಧ್ಯೆಯೇ ಪೈಪ್‌ಗಳು ತುಂಡಾಗಿವೆ. ಇದರಿಂದ ಬೇಸತ್ತ ಗ್ರಾಮಸ್ಥರು ವಂತಿಕೆ ಕೊಡಲು ನಿರಾಕರಿಸುತ್ತಿದ್ದಾರೆ. ಪೈಪ್ ಅಳವಡಿಸಿದ ನಂತರ ಕೆಲವರು ಮೀಟರ್ ಕಿತ್ತು ಹಾಕಿದ್ದಾರೆ. ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಚುಂಚವಾಡ ಗ್ರಾಮದಲ್ಲಿ, 'ಗುತ್ತಿಗೆದಾರರು ಅರ್ಧಕ್ಕೆ ಕೆಲಸ ಬಿಟ್ಟು ಹೋಗಿದ್ದಾರೆ' ಎಂದು ಗ್ರಾಮಸ್ಥರು ಪಂಚಾಯ್ತಿಗೆ ಬೀಗ ಹಾಕಿ ಪ್ರತಿಭಟಿಸಿದ್ದರು.

ಕರಾವಳಿಯಲ್ಲೂ ಕುಂಠಿತ: 'ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ, ಚೇಳ್ಯಾರುನಲ್ಲಿ ಟ್ಯಾಂಕ್ ನಿರ್ಮಾಣ, ಪೈಪ್‌ಲೈನ್ ಆಗಿದೆ. ಮಧ್ಯ ಗ್ರಾಮದಲ್ಲಿ ಬಾವಿ, ಟ್ಯಾಂಕ್, ಪೈಪ್‌ಲೈನ್ ಕೆಲಸಗಳೆಲ್ಲವೂ ಅರ್ಧಕ್ಕೆ ನಿಂತಿವೆ' ಎನ್ನುತ್ತಾರೆ ಮುಖಂಡ ಪುಷ್ಪರಾಜ್ ಶೆಟ್ಟಿ. 'ಸೂರಿಂಜೆ ಗ್ರಾಮ ಪಂಚಾಯಿತಿಯ ದೇಲಂತಬೆಟ್ಟು ಗ್ರಾಮದಲ್ಲಿ 'ತಾಂತ್ರಿಕ' ಸಮಸ್ಯೆಗಳಿಂದ ಪಂಪ್ ಜೋಡಣೆ ಆಗಲಿಲ್ಲ' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿತೇಂದ್ರ ವಿವರಿಸಿದರು.

ಕೊಡಗು ಜಿಲ್ಲೆಯಲ್ಲಿ ನೀರಿನ ರಭಸ ಕಡಿಮೆ ಎಂದು 3 ಗ್ರಾಮ ಪಂಚಾಯಿತಿಗಳು ಯೋಜನೆಯ ಅನುಷ್ಠಾನವೇ ಬೇಕಿಲ್ಲ ಎನ್ನುವ ನಿರ್ಣಯವನ್ನು ತೆಗೆದುಕೊಂಡಿವೆ. 463 ಹಳ್ಳಿಗಳ ಪೈಕಿ 256 ಕಡೆ ಕಾಮಗಾರಿ ಪೂರ್ಣಗೊಂಡಿದೆ. 20 ಹಳ್ಳಿಗಳಲ್ಲಿ ಸ್ಥಗಿತಗೊಂಡಿದೆ. ₹ 184 ಕೋಟಿ ವೆಚ್ಚವಾಗಿದೆ' ಎಂದು ಕೊಡಗು ಜಿಲ್ಲಾ ಪಂಚಾಯಿತಿಯ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸುರೇಶ ತಿಳಿಸಿದರು.

ದಾವಣಗೆರೆ ಜಿಲ್ಲೆಯ 226 ಗ್ರಾಮಗಳಲ್ಲಿ 'ಹರ್ ಘರ್ ಜಲ್' ಘೋಷಣೆಯಾಗಿ, ನೀರಿನ ಸಮಸ್ಯೆಯಿಂದ ಮುಕ್ತವಾಗಿವೆ ಎಂದು ಘೋಷಿಸಿಕೊಂಡಿದ್ದರೂ 30ರಿಂದ 40 ಗ್ರಾಮಗಳಲ್ಲಿ ಪೈಪ್ ಹಾಕಿದರೆ ರಸ್ತೆಗಳು ಹಾಳಾಗುತ್ತವೆಂಬ ಕಾರಣಕ್ಕೆ ಗ್ರಾಮಸ್ಥರೇ ಕಾಮಗಾರಿಯನ್ನು ತಡೆದಿದ್ದಾರೆ.

ಹಾಸನ ಜಿಲ್ಲೆಯ ಆಲೂರು, ಸಕಲೇಶಪುರ, ಬೇಲೂರು, ಹಾಸನ ತಾಲ್ಲೂಕುಗಳಲ್ಲಿ ತನ್ನ ಜಾಗದಲ್ಲಿ ಪೈಪ್‌ಲೈನ್ ಅಳವಡಿಸಲು ಅರಣ್ಯ ಇಲಾಖೆ ಅಡ್ಡಿಪಡಿಸಿದೆ. 'ಟ್ಯಾಂಕ್, ಜಲಮೂಲವಿದ್ದರೂ ಕೆಲಸ ಮಾಡಲಾಗದೆ ಅಸಹಾಯಕರಾಗಿದ್ದೇವೆ. ಇಂತಹ ಅಡೆತಡೆ ಇದ್ದರೂ 620 ಜನವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುದ್ಧ ನೀರಿನ ಪೂರೈಕೆ ಜೊತೆಗೆ ಜಲ ಸಂರಕ್ಷಣೆ, ಉತ್ತಮ ಗುಣಮಟ್ಟ ನಿರ್ವಹಣೆ, ಜಲಮರುಪೂರಣ, ಮರುಬಳಕೆ, ಮಳೆನೀರು ಸಂಗ್ರಹಕ್ಕೂ ಒತ್ತು ನೀಡಬೇಕೆಂಬುದು ಯೋಜನೆಯ ಆಶಯ. ಸಮುದಾಯ ಕೇಂದ್ರಿತ ನೆಲೆಯಲ್ಲಿ ಜಾಗೃತಿ ಮೂಡಿಸುವುದು ಮತ್ತು ಮಾಹಿತಿಗಳ ವಿತರಣೆಯೂ ಯೋಜನೆಯ ಭಾಗವೇ. ಇದೂ ನಿರೀಕ್ಷಿತ ಮಟ್ಟದಲ್ಲಿ ನಡೆದಿಲ್ಲ. ಬೆಳಗಾವಿ ವಿಭಾಗದಲ್ಲಿ 917 ಕಾಮಗಾರಿಗಳಲ್ಲಿ ಮುಗಿದಿರುವುದು ಶೇ 40ರಷ್ಟು ಮಾತ್ರ!

2023ರ ಅಂತ್ಯಕ್ಕೆ ಯೋಜನೆ ಮುಗಿಯಬೇಕಿತ್ತು. ಆದರೆ, 2024ರ ಡಿಸೆಂಬರ್‌ವರೆಗೆ ರಾಜ್ಯ ಸರ್ಕಾರವು ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶ ಕೇಳಿದೆ. ಕೇಂದ್ರ ತಾತ್ವಿಕವಾಗಿ ಒಪ್ಪಿಗೆಯನ್ನೂ ನೀಡಿದೆ. ಸಂಪೂರ್ಣ ಅನುಷ್ಠಾನಕ್ಕೆ ಇರುವುದು ಇನ್ನೊಂದು ವರ್ಷವಷ್ಟೇ! ಮೂರು ವರ್ಷದಲ್ಲಿ ಆಗದ್ದು ವರ್ಷದಲ್ಲಿ ಆದೀತೇ ಎನ್ನುವುದು ಜನರ ಪ್ರಶ್ನೆ.

(ಪೂರಕ ಮಾಹಿತಿ: ಬ್ಯೂರೋಗಳಿಂದ)

ಜೆಜೆಎಂ ಅನುಷ್ಠಾನದ ಜಿಲ್ಲಾವಾರು ಸ್ಥಿತಿ–ಗತಿ

ಅತ್ಯುನ್ನತ ಸ್ಥಾನದಲ್ಲಿರುವ 5 ಜಿಲ್ಲೆಗಳು	(ಶೇಕಡವಾರು)
1. ಗದಗ	99.33
2. ಧಾರವಾಡ	98.57
3. ಕೊಪ್ಪಳ	88.07
4. ದಕ್ಷಿಣ ಕನ್ನಡ	86.86
5. ಚಾಮರಾಜನಗರ	86.77

ಅನುಷ್ಠಾನದಲ್ಲಿ ಅತಿ ಕೆಳಗಿರುವ 5 ಜಿಲ್ಲೆಗಳು	(ಶೇಕಡವಾರು)
1. ಬೆಂಗಳೂರು ನಗರ	27.31
2. ಕೋಲಾರ	35.26
3. ಚಿಕ್ಕಬಳ್ಳಾಪುರ	41.22
4. ಬೆಂಗಳೂರು ಗ್ರಾ.	49.47
5. ಉತ್ತರ ಕನ್ನಡ	49.89



ಹಲಕನಾಳ್, ಐನೂರು ಮಾದರಿ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹಲಕನಾಳ್ ಹಾಗೂ ಐನೂರು ಗ್ರಾಮದ ಎಲ್ಲಾ ಮನೆಗಳಿಗೂ ನಳ ಸಂಪರ್ಕವಿದೆ.

ಮರಂವಂಜಿಯಲ್ಲಿರುವ ಎಲ್ಲ 175 ಮನೆಗಳಿಗೂ ಎಫ್.ಎಚ್.ಟಿ.ಸಿ (ಕಾರ್ಯಾತ್ಮಕ ನಳ ಸಂಪರ್ಕ) ತಂತ್ರಾಂಶ ಅಳವಡಿಸಲಾಗಿದೆ. 'ಹರ್ ಘರ್ ಜಲ್' ಗ್ರಾಮ ಸಭೆ ನಡೆಸಿ ನೀರಿನ ಸದ್ಬಳಕೆಯ ಅರಿವು ಮೂಡಿಸಲಾಗುತ್ತಿದೆ.

ಗ್ರಾಮದ ಎತ್ತರದ ಪ್ರದೇಶಕ್ಕೆ ಮೊದಲು ನೀರು ಹೋಗುತ್ತಿರಲಿಲ್ಲ. ಈಗ ಎಲ್ಲಾ ಮನೆಗಳಿಗೆ ಏಕಕಾಲಕ್ಕೆ ಹೆಚ್ಚಿನ ಪ್ರಮಾಣದ ನೀರು ಬರುತ್ತಿದೆ. 2 ಕೊಳವೆ ಬಾವಿಗಳಿದ್ದು, ನೀರಿನ ಅಭಾವ ತಪ್ಪಿದೆ. 1,505 ಜನಸಂಖ್ಯೆಯುಳ್ಳ ಐನೂರಿನಲ್ಲಿ 341 ಮನೆಗಳಿಗೆ ನಳ ಸಂಪರ್ಕ ಕಲ್ಪಿಸಿದ್ದು, 50ಸಾವಿರ ಲೀಟರ್ ಸಂಗ್ರಹ ಸಾಮರ್ಥ್ಯದ ಟ್ಯಾಂಕ್ ಇದೆ. ಯೋಜನೆಗೂ ಮುಂಚೆ 5 ಕೊಳವೆ ಬಾವಿಗಳ ಮೂಲಕ ಮುಂಜಾನೆ 6ರಿಂದ 11ರವರೆಗೆ ಪೂರೈಸಿದರೂ ಸಾಕಾಗುತ್ತಿರಲಿಲ್ಲ. ಆಗ ತಿಂಗಳಿಗೆ ₹35,000 ಕರೆಂಟ್ ಬಿಲ್ ಬರುತ್ತಿತ್ತು. ಈಗ ಮನೆಯ ಪ್ರತಿಯೊಂದು ನಲ್ಲಿಗೂ ಮೋಟರ್ ಮತ್ತು ಕಂಟ್ರೋಲ್ ವಾಲ್ವ್ ಅಳವಡಿಸಲಾಗಿದೆ. ಕೇವಲ 50 ಸೆಕೆಂಡ್‌ಗಳಲ್ಲಿ 10 ಲೀಟರ್ ನೀರು ಬರುತ್ತಿರುವುದು ವಿಶೇಷ.

ಈಗ ಎಲ್ಲಾ ಕಾಲದಲ್ಲೂ ನೀರು ಬರುತ್ತಿರುವುದರಿಂದ ಹೆಣ್ಣುಮಕ್ಕಳು, ಗ್ರಾಮಸ್ಥರು ಹಿಂದಿನಂತೆ ಕೊಡ ನೀರಿಗಾರಿ ಪರದಾಡುವುದು ತಪ್ಪಿದಂತಾಗಿದೆ.

ಪ್ರಶಾಂತ್, ಗ್ರಾಮಸ್ಥ, ಐನೂರು ಗ್ರಾಮ, ದಾವಣಗೆರೆ ಜಿಲ್ಲೆ

ಜಲಜೀವನ್ ಮಿಷನ್‌ನಲ್ಲಿ ಕಾಮಗಾರಿ ನಡೆದಿದ್ದರೂ, ಗುಣಮಟ್ಟದ ಕೆಲಸವಾಗದೆ ನಾನಾ ರೀತಿಯ ಸಮಸ್ಯೆ ಹೆಚ್ಚಿದೆ.

ಕೆ.ಬಿ.ಸುಖೇಶ್, ಹೊಸತೋಟ, ಕೊಡಗು ಜಿಲ್ಲೆ

ಕೇಂದ್ರ–ರಾಜ್ಯ ಸಹಯೋಗದ ಜೆಜೆಎಂ

ಯೋಜನೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದ್ದು ಎಂದು ಬಿಜೆಪಿ ಬಿಂಬಿಸಿಕೊಳ್ಳುತ್ತಿದೆ. ಆದರೆ, ಗ್ರಾಮದ ಹೊರಗೆ ಯೋಜನೆಯನ್ನು ಶೇ 50:50 ಅನುಪಾತದಲ್ಲಿ ಕೇಂದ್ರ –ರಾಜ್ಯ ಸರ್ಕಾರದ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಗ್ರಾಮದ ಒಳಗೆ ನೀರು ಸರಬರಾಜಿಗೆ ಮೂಲಸೌಕರ್ಯ ಕೈಗೊಳ್ಳಲು ಪ್ರತಿ ಗ್ರಾಮದಿಂದ 'ಸಮುದಾಯ ವಂತಿಗೆ'ಯ ರೂಪದಲ್ಲಿ ಹಣ ಸಂಗ್ರಹಿಸಲಾಗುತ್ತದೆ.

'ಗ್ರಾಮದ ಒಳಗೆ ಅನುಷ್ಠಾನಕ್ಕೆ ಕೇಂದ್ರ– ರಾಜ್ಯ ಸರ್ಕಾರ ತಲಾ ಶೇ 42.5 ಹಣ ನೀಡುತ್ತದೆ. 15ನೇ ಹಣಕಾಸು ಆಯೋಗ ಅನುದಾನದಲ್ಲಿ ಶೇ 5 ಮತ್ತು ಸಮುದಾಯ ವಂತಿಗೆ ರೂಪದಲ್ಲಿ ಶೇ 10ರಷ್ಟು ಹಣವನ್ನು ಸಂಗ್ರಹಿಸಲಾಗುತ್ತದೆ. ಅನುಷ್ಠಾನಕ್ಕೆ ಈವರೆಗೆ ₹ 7ಸಾವಿರ ಕೋಟಿ ವೆಚ್ಚ ಮಾಡಲಾಗಿದೆ' ಎಂದೂ ಇಲಾಖೆ ಹೇಳಿದೆ.

ಶಾಲೆಗೆ ಜೀವಕಳೆ ತುಂಬಿದ ಹಳೆ ವಿದ್ಯಾರ್ಥಿ

ಒಂದನೇ ಪುಟದಿಂದ

ಅಂಗನವಾಡಿ ಕೇಂದ್ರಕ್ಕೂ ಇಲ್ಲಿಯೇ ಕೊಠಡಿ ಒದಗಿಸಲಾಗಿದೆ. 1 ಪ್ರೊಜೆಕ್ಟರ್, 4 ಕಂಪ್ಯೂಟರ್‌ಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಟೇಬಲ್, ಕುರ್ಚಿ, ಕಪಾಟು, ತರಗತಿಗಳಿಗೆ ಫ್ಯಾನ್, ಶುದ್ಧ ಕುಡಿಯುವ ನೀರಿನ ಘಟಕ, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಕಲ್ಪಿಸಿದ್ದಾರೆ.

ಕಳೆದ 17 ವರ್ಷಗಳಿಂದ, ಶಾಲೆ ಆರಂಭದ ಸಮಯದಲ್ಲಿ ಎಲ್ಲ ಮಕ್ಕಳಿಗೂ ಲೇಖನ ಸಾಮಗ್ರಿ, 7ನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಗೆ ತಲಾ ₹ 5,000 ಪ್ರೋತ್ಸಾಹ ಧನ ನೀಡುತ್ತಿದ್ದಾರೆ. ಇವರ ಕೆಲಸದಿಂದ ಸ್ಫೂರ್ತಿಗೊಂಡ ಶಾಲೆಯ ಶಿಕ್ಷಕಿ ಮಂಜುಳಾ ಅವರು ತಮ್ಮ ಸ್ವಂತ ಹಣದಲ್ಲಿ ನಲಿ–ಕಲಿ ಕೊಠಡಿಯನ್ನು ವಿದ್ಯಾರ್ಥಿಗಳ ಕಲಿಕೆಗೆ ನೆರವಾಗುವಂತೆ ರೂಪಿಸಿದ್ದಾರೆ.

'ಶಾಲೆಯು 1956ರಲ್ಲಿ ನಿರ್ಮಾಣಗೊಂಡಿತ್ತು. ಕಟ್ಟಡದ ಗೋಡೆಗಳು ಬಿರುಕು ಬಿಟ್ಟಿದ್ದವು. ಮಳೆ ಬಂದರೆ ಸೋರುತ್ತಿತ್ತು. ಇದರಿಂದ ಪಾಠ ಮಾಡಲು ತುಂಬಾ ತೊಂದರೆಯಾಗುತ್ತಿತ್ತು. ಇದನ್ನು ಬಸವನಗೌಡರ ಗಮನಕ್ಕೆ ತಂದಿದ್ದೆವು. ಪದೇ ಪದೇ ದುರಸ್ತಿ ಮಾಡಿಸುವುದಕ್ಕಿಂತ ಹೊಸದಾಗಿಯೇ ಶಾಲೆ ಕಟ್ಟಿಸಿ ಕೊಡುವುದಾಗಿ ತಿಳಿಸಿದ್ದರು. ನಿರ್ಮಾಣ ಕಾಮಗಾರಿಯನ್ನು ಕೇವಲ 11 ತಿಂಗಳುಗಳಲ್ಲಿ ಪೂರ್ಣಗೊಳಿಸಿದರು' ಎಂದು ಮುಖ್ಯ ಶಿಕ್ಷಕ ಅಶೋಕ್ ವಾಜಂತ್ರಿ ತಿಳಿಸಿದರು.

ಬಸವನಗೌಡರು ಈ ಶಾಲೆಯಲ್ಲಿ ಒಂದನೇ ತರಗತಿಯಷ್ಟೇ ಓದಿದ್ದರೂ ಅಭಿಮಾನದಿಂದ ನೆರವು ನೀಡಿದ್ದಾರೆ. ಇದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ

ಜಿ.ಆರ್.ತಿಪ್ಪೇಶಪ್ಪ, ಉಪನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ದಾವಣಗೆರೆ

'ನೂತನ ಶಾಲಾ ಕಟ್ಟಡ ಕಾರ್ಯಾರಂಭವಾಗಿ ವರ್ಷವಾಯಿತು. ಕಾಮಗಾರಿ ನಡೆಯುವ ವೇಳೆ ಅವರೇ ಕಟ್ಟಿಸಿರುವ ಸಮುದಾಯ ಭವನದಲ್ಲಿ ಮಕ್ಕಳಿಗೆ ಪಾಠ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಬಡವರು, ಕೂಲಿಕಾರ್ಮಿಕರ ಮಕ್ಕಳು ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಕಲಿಕೆಗೆ ಅನುಕೂಲವಾಗಿದೆ' ಎಂದು ಅವರು ಹೇಳಿದರು.

ಸಮುದಾಯ ಭವನ ನಿರ್ಮಾಣ: 'ಬಸವನಗೌಡರು ಗ್ರಾಮಸ್ಥರು ತಮ್ಮ ಮಕ್ಕಳ ಮದುವೆಗಾಗಿ ಸಮುದಾಯ ಭವನ ನಿರ್ಮಿಸಿಕೊಟ್ಟಿದ್ದಾರೆ. ಗ್ರಾಮಸ್ಥರಿಗಾದರೆ ಎರಡು ದಿನಕ್ಕೆ ₹10 ಸಾವಿರ ಬಾಡಿಗೆ. ಹೊರ ಊರಿನವರಿಗೆ ₹20 ಸಾವಿರ. ಈ ಹಣವನ್ನು ಗ್ರಾಮ ಹಾಗೂ ಶಾಲೆಯ ಅಭಿವೃದ್ಧಿ ಕೆಲಸಗಳಿಗೇ ವಿನಿಯೋಗಿಸುತ್ತಾರೆ. ಪರಿಶಿಷ್ಟರ ಕಾಲೊನಿಯವರಿಗೆ ದೇವಸ್ಥಾನ ನಿರ್ಮಿಸಿಕೊಟ್ಟಿದ್ದಾರೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಬಿ.ಜಿ.ನಾಗರಾಜಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಗಾಂಜಾ ಬೆಳೆದ ವೈದ್ಯ ವಿದ್ಯಾರ್ಥಿಗಳು

ಒಂದನೇ ಪುಟದಿಂದ

ವಿಚಾರಣೆ ವೇಳೆ ದೊರೆತ ಸುಳಿವಿನ ಮೇರೆಗೆ ಉಳಿದ ಮೂವರನ್ನು ಅಲ್ಲಿನ ಶಿವಗಂಗಾ ಲೇಔಟ್‌ನ ಮನೆಯೊಂದರಲ್ಲಿ ಶನಿವಾರ ಬಂಧಿಸಲಾಗಿದೆ.

ಕೊಠಡಿಯಲ್ಲಿ ಗಾಂಜಾ ಬೆಳೆ: ಶಿವಗಂಗಾ ಲೇಔಟ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಆರೋಪಿ ವಿಘ್ನರಾಜ್, ಮನೆಯ ಒಂದು ಕೊಠಡಿಯನ್ನು ಗಾಂಜಾ ಬೆಳೆಸಲು ಬಳಕೆ ಮಾಡಿಕೊಳ್ಳುತ್ತಿದ್ದ. ಆ ಕೊಠಡಿಯೊಳಗೆ ಟೆಂಟ್ ಹಾಕಿದ್ದ ಆತ ವಿಶೇಷ ಬಲ್ಬ್‌ಗಳನ್ನು ಬಳಸಿ ಅದರೊಳಗೆ ಕೃತಕ ಬೆಳಕು ಸೃಷ್ಟಿಸಿದ್ದ. ಒಳಗೆ ಕುಂಡಗಳನ್ನಿಟ್ಟು ಅವುಗಳಲ್ಲಿ ಗಾಂಜಾ ಗಿಡಗಳನ್ನು ಬೆಳೆಯುತ್ತಿದ್ದ.

'ವೈಜ್ಞಾನಿಕವಾಗಿ ಗಾಂಜಾ ಬೆಳೆಯುವ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿ ಪಡೆದಿದ್ದ ಈತ, ಇದಕ್ಕೆ ಬೇಕಿದ್ದ ಬೀಜಗಳನ್ನು ಆನ್‌ಲೈನ್ ಮೂಲಕ ತರಿಸಿಕೊಂಡಿದ್ದ. ಆರೋಪಿಗಳಾದ ವಿನೋದ್ ಹಾಗೂ ಪಾಂಡಿದೊರೈ ಈತನಿಂದ ಗಾಂಜಾ ಖರೀದಿಸುತ್ತಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

'ಆರೋಪಿಗಳಿಂದ ₹5,800 ಮೌಲ್ಯದ 227 ಗ್ರಾಂ ಒಣ ಗಾಂಜಾ, ₹30 ಸಾವಿರ ಮೌಲ್ಯದ 1.53 ಕೆ.ಜಿ. ಹಸಿ ಗಾಂಜಾ, 10 ಗ್ರಾಂ ಚರಸ್, ಗಾಂಜಾ ಬೀಜ, ಕೆನಾಬಿಸ್ ಎಣ್ಣೆ, ಗಾಂಜಾ ಪುಡಿ ಮಾಡಲು ಬಳಸುವ ಎರಡು ಡಬ್ಬಿಗಳು, ಎಲೆಕ್ಟ್ರಾನಿಕ್ ತೂಕದ ಯಂತ್ರ, ಎಕ್ಸಾಸ್ಟ್ ಫ್ಯಾನ್, ಆರು ಟೇಬಲ್ ಫ್ಯಾನ್, ರೋಲಿಂಗ್ ಪೇಪರ್, ಎರಡು ಸ್ಟೆಬಿಲೈಸರ್, ಎಲ್ಇಡಿ ದೀಪ, ಹುಕ್ಕಾ ಕೊಳವೆ ಹಾಗೂ ₹19 ಸಾವಿರ ನಗದು ವಶಪಡಿಸಿಕೊಳ್ಳಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು. ವೈದ್ಯಕೀಯ ಕಾಲೇಜು ಯಾವುದು ಎಂಬುದನ್ನು ಎಸ್ಪಿ ಅವರು ಬಹಿರಂಗಪಡಿಸಲಿಲ್ಲ.

ಕುಕ್ಕೆಶ್ರೀ: ಹಿರಿಯರಿಗೆ ಸಹಾಯ ಕೇಂದ್ರ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಹಿರಿಯ ನಾಗರಿಕರಿಗೆ ಶೀಘ್ರ ದರ್ಶನಕ್ಕೆ ಅನುಕೂಲ ಆಗುವಂತೆ ಸಹಾಯ ಕೇಂದ್ರ ತೆರೆಯಲಾಗಿದೆ. ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಸೂಚನೆಯಂತೆ ದೇವಸ್ಥಾನದ ರಾಜಗೋಪುರ ಬಳಿ ಕೇಂದ್ರ ಇದೆ.

65 ವರ್ಷಕ್ಕೂ ಮೇಲಿನವರಿಗೆ ಇದರ ಅನುಕೂಲ ಸಿಗಲಿದೆ. ಸಹಾಯ ಕೇಂದ್ರದ ಮೂಲಕ ಹಿರಿಯರು ವಿಶೇಷ ಸರತಿ ಸಾಲಿನ ವ್ಯವಸ್ಥೆಯಲ್ಲಿ ಮುಂದೆ ಸಾಗಬಹುದಾಗಿದೆ. ದೇವರ ದರ್ಶನ, ಸೇವೆ ಮತ್ತು ಪ್ರಸಾದ ಭೋಜನವನ್ನು ಅವರು ಬೇಗ ಸ್ವೀಕರಿಸಬಹುದಾಗಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜೂನ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ಸಪ್ತಮಿ ಗಂ. 24-26 ನಕ್ಷತ್ರ: ಪೂರ್ವಫಲ್ಗುಣಿ ಗಂ. 10-11 ಯೋಗ: ಸಿದ್ಧಿ (ಆಸ್ರಿಕ್) ಗಂ. 05-26 ಕರಣ: ಗರ ಗಂ. 11-24, ಮಿಥುನ ಮಾಸದ 09 ನೇ ದಿನ, ಮಳೆನಕ್ಷತ್ರ: ಆರ್ದ್ರಾ 1.
ರಾಹುಕಾಲ: ಸಾಯಂಕಾಲ 04-30 - 06-00,
ಸೂರ್ಯೋದಯ: 06-09 ಸೂರ್ಯಾಸ್ತ: 06-56, ಮುಸ್ಲಿಂ ದಿನಾಂಕ: 06 ಜುಲ್‌ಹಿಜಾ
ದಿನ ಭವಿಷ್ಯ: ವಿವಸ್ವತ ಸಪ್ತಮಿ
ಅದೃಷ್ಟ ಸಂಖ್ಯೆ: 6, 10

ಮೇಷ: ಬುದ್ಧಿವಂತಿಕೆ ಹಾಗೂ ಯೋಜನೆ ನಿಮ್ಮ ವ್ಯವಹಾರವನ್ನು ಸುಲಭಗೊಳಿಸುತ್ತವೆ. ನಿಮ್ಮ ಕೆಲಸಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮದ ಅಗತ್ಯವಿದೆ. ಜಾಗ ಖರೀದಿಸಲು ಅಥವಾ ಒಪ್ಪಂದಕ್ಕೆ ಸಹಿ ಹಾಕಲು ಸುದಿನ.

ವೃಷಭ: ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸದ ಸಮಯ ಅಥವಾ ವಿಸ್ತೀರ್ಣವೂ ಹೆಚ್ಚುವುದು. ಪ್ರಯಾಣದಲ್ಲಿ ಆಪತ್ತುಗಳು ಎದುರಾಗಬಹುದು, ಜಾಗ್ರತರಾಗಿರಿ. ಅಧಿಕಾರಿಗಳ ವಿಶ್ವಾಸಗಳಿಸಲು ಪ್ರಯತ್ನಿಸಿ.

ಮಿಥುನ: ವಾಣಿಜ್ಯೋದ್ಯಮ ಮಂದಿಗೆ ಇಂದು ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನ. ಚಿತ್ರಕಲೆ, ಗಣಿತದಂತಹ ವಿಚಾರದಲ್ಲಿ ಆಸಕ್ತಿ ಮೂಡುವುದು. ಉನ್ನತ ಪೊಲೀಸ್ ಅಧಿಕಾರಿಗಳು ಸಂತಸದ ಸುದ್ದಿ ಕೇಳುವರು.

ಕರ್ಕಾಟಕ: ಮನೆ ದೇವರ ಪೂಜೆಯ ಹರಕೆಯ ಫಲವಾಗಿ ಮಗ/ ಮಗಳಿಗೆ ಉದ್ಯೋಗ ದೊರಕುವುದು. ಸಹೋದರರಲ್ಲಿ ಬರಬೇಕಿದ್ದ ಹಣ ಹಿಂತಿರುಗಿ ಬಂದು ಕೈ ಸೇರುವುದು. ಮುಖ್ಯ ಕೆಲಸಗಳಿಗೆ ಆಪ್ತರ ಸಲಹೆ ಅಗತ್ಯ.

ಸಿಂಹ: ಷೇರುಗಳನ್ನು ಕೊಳ್ಳುವಲ್ಲಿ ನಿಮ್ಮ ಸ್ನೇಹಿತರು ಉಪಕಾರವನ್ನು ಮಾಡಬಹುದು. ಗೃಹ ನಿರ್ಮಾಣ ಕಾರ್ಯವು ಆಮೆಯ ವೇಗದಲ್ಲಿ ಸಾಗುವುದರಿಂದ ಮನಸ್ಸಿಗೆ ತುಸು ತಳಮಳ, ಹೆದರಿಕೆ, ಆತಂಕ ಮೂಡಲಿದೆ.

ಕನ್ಯಾ: ಹಿರಿಯರು ಮೊದಲಿನಿಂದ ಕುಟುಂಬದಲ್ಲಿ ನಡೆಸಿಕೊಂಡು ಬಂದ ಧಾರ್ಮಿಕ ವಿಧಿವಿಧಾನ ಆಚರಿಸುವ ಬಗ್ಗೆ ತೀರ್ಮಾನಿಸಿ. ಉತ್ತಮ ಆದಾಯದ ಕಾರಣ ಹಣಕಾಸಿನ ತೊಂದರೆ ನಿಮಗೆ ಕಾಣಿಸದು.

ತುಲಾ: ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ. ಅವರಿಂದ ಸಿಗುವ ಸಹಕಾರ ಜೀವನಪರ್ಯಂತ ನೆನಪಿನಲ್ಲಿ ಇಟ್ಟುಕೊಳ್ಳುವಂತೆ ಇರುವುದು. ನವ ವಿವಾಹಿತರಿಗೆ ಸಂತತಿಯ ವಿಚಾರದಲ್ಲಿ ಶುಭ ಸೂಚನೆ ಕಾಣಲಿದೆ.

ವೃಶ್ಚಿಕ: ನಿರುದ್ಯೋಗಿಗಳಿಗೆ ಪ್ರತಿಷ್ಠಿತರ ಪರಿಚಯದಿಂದ ಉದ್ಯೋಗ ಪ್ರಾಪ್ತಿಯಾಗಲಿದೆ. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಕೆಲಸಗಳಲ್ಲಿ ಆಸಕ್ತಿ ವೃದ್ಧಿಯಾಗುವುದು.

ಧನು: ಹೆತ್ತವರೊಂದಿಗೆ ವಾಗ್ವಾದಕ್ಕಿಳಿಯುವುದು ಅಶ್ರೇಯಸ್ಸಿಗೆ ಕಾರಣವಾಗುತ್ತದೆ. ನಿಮ್ಮ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಕಷ್ಟವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದಿಂದ ಲಾಭ ಸಿಗುವುದು.

ಮಕರ: ನೀವು ಕೆಲಸಮಾಡುವ ಸ್ಥಳದಲ್ಲಿ ಕೆಲವು ಬದಲಾವಣೆ ಮಾಡುವುದು ಉತ್ತಮ. ಜನಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಕೆಲಸದ ಒತ್ತಡ ಇರುವುದು. ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ಜಾಗ್ರತೆ ಇರಲಿ.

ಕುಂಭ: ಕಾರ್ಯಕ್ಷೇತ್ರದಲ್ಲಿ ಎಚ್ಚರ ವಹಿಸದೆ ಅತಿಯಾದ ವಿಶ್ವಾಸದಿಂದ ಮುಂದುವರಿದರೆ ನಿಮ್ಮ ಮೇಲಧಿಕಾರಿಗಳಿಂದ ಮುಖಭಂಗವಾಗಬಹುದು. ಬಟ್ಟೆ ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದ್ದು ಅಧಿಕ ಲಾಭವಿರುವುದು.

ಮೀನ: ನಿಮ್ಮ ಉದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿದೆ. ಇಂದಿನ ದಿನದ ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ.

25 ವರ್ಷಗಳ ಹಿಂದೆ

ಗುರುವಾರ, 25-6-1998

● **ಮುಲಾಯಂ, ಲಾಲೂ ನೇತೃತ್ವದಲ್ಲಿ ಹೊಸ ರಂಗ ರಚನೆ**

ನವದೆಹಲಿ, ಜೂನ್ 24 (ಪಿಟಿಐ, ಯುಎನ್‌ಐ)– ರಾಜಧಾನಿಯಲ್ಲಿ ಇಂದು ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ 'ರಾಷ್ಟ್ರೀಯ ಲೋಕ ತಾಂತ್ರಿಕ ಮೋರ್ಚಾ' ಎಂಬ ಹೊಸ ರಂಗವನ್ನು ರಚಿಸಿಕೊಂಡಿರುವ ರಾಷ್ಟ್ರೀಯ ಜನತಾದಳ ಹಾಗೂ ಸಮಾಜವಾದಿ ಪಕ್ಷಗಳು ಕೇಂದ್ರದಲ್ಲಿ ಪರ್ಯಾಯ ಸರ್ಕಾರ ಸ್ಥಾಪನೆಗೆ ಕಾಂಗ್ರೆಸ್‌ಗೆ ಬೆಂಬಲ ನೀಡಲು ಮುಂದೆ ಬಂದಿದೆ.

ರಾಷ್ಟ್ರೀಯ ಲೋಕತಾಂತ್ರಿಕ ಮೋರ್ಚಾಕ್ಕೆ ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್ ಅವರು ಸಂಚಾಲಕರಾಗಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 25-6-1973

● **ವಿಶ್ವಾಸಚ್ಯುತ ಕೇದಾರ ಪಾಂಡೆ ರಾಜೀನಾಮೆ**

ಪಟ್ನಾ, ಜೂನ್ 24– ಕಾಂಗ್ರೆಸ್ ಶಾಸಕರ ಪಕ್ಷ ತಮ್ಮ ನಾಯಕತ್ವದಲ್ಲಿ ಭಾರಿ ಬಹುಮತದಿಂದ ಅವಿಶ್ವಾಸ ವ್ಯಕ್ತಪಡಿಸಿದ ಕೆಲವೇ ಕಾಲದ ನಂತರ ಇಂದು ಮಧ್ಯಾಹ್ನ ಬಿಹಾರ ಮುಖ್ಯಮಂತ್ರಿ ಕೇದಾರ ಪಾಂಡೆ ಅವರು ರಾಜ್ಯಪಾಲರಿಗೆ ತಮ್ಮ ಸಂಪುಟ ರಾಜೀನಾಮೆ ಸಲ್ಲಿಸಿದರು.

ಪಾಂಡೆ ರಾಜೀನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿ, ಪರ್ಯಾಯ ವ್ಯವಸ್ಥೆಯಾಗುವವರೆಗೆ ಅಧಿಕಾರದಲ್ಲಿ ಮುಂದುವರಿಯುವಂತೆ ಕೋರಿದ್ದಾರೆಂದು ಗೊತ್ತಾಗಿದೆ.

ಪದಬಂಧ 5360

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಆಜ್ಞೆ ಮಾಡುವವನು (4)
3. ದೇಗುಲದ ಕಂಬಗಳ ಮೇಲೆ ಕೆತ್ತಿರುವ ಸುಂದರ ವಿಗ್ರಹ (4)
5. ತಿರುಗಿಸಿದರೂ ಇದು ಹೊಸತು! (3)
6. ನಯವಿಲ್ಲದೆ ಒರಟಾದುದು (4)
8. ಗರಳದಿಂದ ಕೂಡಿರುವ ಸಂಗತಿ (3)
10. ದ್ವಾದಶ ರಾಶಿಯಲ್ಲಿರುವ ಜೋಡಿ (3)
12. ಸರಸ ವಿರಸ ಸಮನಾಗಿರುವಿಕೆ (4)
15. ಒಳ್ಳೆಯ ಸ್ವರವಿದು (3)
16. ಅಂಗೈನಿಂದ ಕೆನ್ನೆಗೆ ಕೊಡುವ ಏಟು (4)
17. ಕೊನೆಗೆ ಬರ ಬಂದಾಗ ಬೆತ್ತಲೆಯಾಗಿರುವುದು (4)

ಮೇಲಿಂದ ಕೆಳಕ್ಕೆ

1. ನಿರ್ಣಯವಾದುದು ಇದು (3)
2. ಹೀಗೆ ಕೋಪಗೊಳ್ಳು (3)
3. ಮನದಿಂದ ಮಾಡಿಕೊಂಡ ಅರಿಕೆ (3)
4. ಕೆರಳಿದವನ ಮೆಟ್ಟು! (2)
7. ಮಾಘಶುದ್ಧ ಸಪ್ತಮಿಯಂದು ಆಚರಿಸುವ ಹಬ್ಬ (5)
9. ಈತ ನರಕಾಧಿಪತಿಯ ಸೇವಕ (5)
11. ಬೆಳಗಿನ ಜಾವ (3)
12. ಸರ ಹಿಡಿದವ ಹಚ್ಚಿರುವ ಪಾಳಿ! (3)
13. ಮರದ ಬಳಿ ನಡೆದ ಕಾಳಗ (3)
14. ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)



5359ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

3.ನಕ್ಷತ್ರಿಕ 5.ರಮಣಿ
6.ಸುಧಾರಕ 8.ಸಮಾಗಮ
12.ಅಂತರ್ಧಾನ 14.ಪರಹಿತ
15.ಕಣಜ 16.ತರಗತಿ.

ಮೇಲಿಂದ ಕೆಳಕ್ಕೆ:

1.ಮೆರವಣಿಗೆ 2.ರಾಣಿವಾಸ
3.ನವಸುಮ 4.ಕಣಕ
7.ರಫ್ತು 9.ಗಣಿತ
10.ಅಪ್ರಯೋಜಕ 11.ಕ್ಷಾರ
12.ಅಂತರ್ಜ್ಯೋತಿ 13.ನವ್ಯಕವಿ
14.ಪರಾತ

ಸುಡೊಕು 5746

6		4				7		8
		5		7	1		4	
1	3			4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5745 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೆಚ್ಚುವರಿ ಮೊತ್ತ ನೀಡಲು ಸರ್ಕಾರ ನಕಾರ • ಬಾಕಿ ಇತ್ಯರ್ಥಕ್ಕೆ ಗಿರಣಿ ಮಾಲೀಕರ ಪಟ್ಟು: ಹಲ್ಲಿಂಗ್ ಆಗದೇ ಉಳಿದ ಧಾನ್ಯ

ಗೋದಾಮಿನಲ್ಲಿ ಉಳಿದ 1.90 ಲಕ್ಷ ಟನ್ ಭತ್ತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹಿಂದಿನ ಸರ್ಕಾರದ ಅವಧಿಯಲ್ಲಿ ನೀಡಬೇಕಿದ್ದ ಬಾಕಿ ಮೊತ್ತ ಇತ್ಯರ್ಥವಾಗದ ಕಾರಣ 2022–23ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ರೈತರಿಂದ ಖರೀದಿಸಿದ್ದ ಭತ್ತವನ್ನು ಹಲ್ಲಿಂಗ್ ಮಾಡಲು (ಭತ್ತವನ್ನು ಅಕ್ಕಿ ಮಾಡಿಕೊಡುವ ಪ್ರಕ್ರಿಯೆ) ಅಕ್ಕಿ ಗಿರಣಿಗಳ ಮಾಲೀಕರು ನಿರಾಕರಿಸಿದ್ದು, 1.90 ಲಕ್ಷ ಟನ್ ಭತ್ತ ಗೋದಾಮುಗಳಲ್ಲೇ ಉಳಿದಿದೆ.

2019–22ನೇ ಸಾಲಿನಲ್ಲಿ ಭತ್ತ ಹಲ್ಲಿಂಗ್ ಮಾಡಿದ್ದ ಸುಮಾರು ₹23 ಕೋಟಿ ಬಾಕಿ ಇರುವ ಕಾರಣಕ್ಕೆ ಕಳೆದ ವರ್ಷ ಪಡಿತರ ಅಕ್ಕಿ ಪೂರೈಕೆಯ ಹೊಣೆ ನಿಭಾಯಿಸಲು ರಾಜ್ಯದ ಅಕ್ಕಿ ಗಿರಣಿಗಳ ಮಾಲೀಕರು ನಿರಾಕರಿಸಿದ್ದರು. ‘ಕೇಂದ್ರದ ಮಾರ್ಗಸೂಚಿ ನಿಯಮಗಳಂತೆ ಹಣ ನೀಡಲಾಗಿದೆ. ಹೆಚ್ಚುವರಿ ಹಣ ನೀಡಲು ಸಾಧ್ಯವಿಲ್ಲ’ ಎಂದು ಆಹಾರ ಇಲಾಖೆ ಗಿರಣಿಗಳ ಮಾಲೀಕರ ಸಂಘಕ್ಕೆ ವರ್ಷದ ಹಿಂದೆಯೇ ಲಿಖಿತವಾಗಿ ಉತ್ತರವನ್ನೂ ನೀಡಿತ್ತು. ನಂತರ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮವೇ ನೇರವಾಗಿ ರೈತರಿಂದ ಭತ್ತ ಖರೀದಿಸಿತ್ತು. ಖರೀದಿಸಿದ ಭತ್ತ ಸಂಗ್ರಹಕ್ಕೆ ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಕರ್ನಾಟಕ ಸಹಕಾರ ಮಹಾಮಂಡಲದ ಸಹಕಾರ ಪಡೆಯಲಾಗಿತ್ತು.

ಈಗ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಹೊಸ ಸರ್ಕಾರದ ಮೇಲೂ ಒತ್ತಡ ತಂತ್ರ ಅನುಸರಿಸುತ್ತಿರುವ ಗಿರಣಿಗಳ ಮಾಲೀಕರು, ಹಲ್ಲಿಂಗ್ ಮಾಡಿಕೊಡದಿರುವ ನಿರ್ಧಾರಕ್ಕೆ ಬಂದಿದ್ದಾರೆ.

> **ಅಕ್ಕಿ ಗಿರಣಿಗಳಿಗೆ ಬಾಕಿ ಹಣ ನೀಡುವ ಜತೆಗೆ ಪಡಿತರ ಅಕ್ಕಿ ಪೂರೈಸುವ ಹೊಣೆಯನ್ನು ರಾಜ್ಯದ ಗಿರಣಿಗಳಿಗೆ ನೀಡಬೇಕು. ತಕ್ಷಣ ಮಾತುಕತೆಗೆ ಆಹ್ವಾನಿಸಬೇಕು**
> **ಪರಣ್ಣ ಮುನವಳ್ಳಿ,** ಅಧ್ಯಕ್ಷ, ರಾಜ್ಯ ಅಕ್ಕಿ ಗಿರಣಿಗಳ ಮಾಲೀಕರ ಸಂಘ

> **ರಾಜ್ಯ ಸರ್ಕಾರ ಪಡಿತರ ಅಕ್ಕಿ ಪೂರೈಕೆಯ ಹೊಣೆಯನ್ನು ರಾಜ್ಯದ ಅಕ್ಕಿ ಗಿರಣಿಗಳಿಗೆ ನೀಡಿದರೆ ಪರೋಕ್ಷವಾಗಿ ರೈತರಿಗೆ ಅನುಕೂಲ ಮಾಡಿದಂತೆ ಆಗುತ್ತದೆ**
> **ಎಚ್.ಆರ್.ಬಸವರಾಜಪ್ಪ,** ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ರಾಜ್ಯದ ಕುಟುಂಬಗಳಿಗೆ ಅಕ್ಕಿ ಪೂರೈಸಲು ಅಗತ್ಯವಿರುವ ಭತ್ತವನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ನೇರವಾಗಿ ಖರೀದಿಸಿ, ಹಲ್ಲಿಂಗ್ ಮಾಡಿಕೊಡಲು ಅಕ್ಕಿಗಿರಣಿಗಳಿಗೆ ಅವಕಾಶ ನೀಡಲಾಗಿತ್ತು. 2018–19ರಿಂದ ನಾಲ್ಕು ವರ್ಷ ಪಡಿತರ ವಿತರಣೆಗೆ ಅಗತ್ಯವಾದ ಅಕ್ಕಿ ಪೂರೈಕೆಯ ಕಾರ್ಯವನ್ನು ರಾಜ್ಯದ ಅಕ್ಕಿ ಗಿರಣಿಗಳು ನಿರ್ವಹಿಸಿದ್ದವು. ಪ್ರತಿ ವರ್ಷ ಸುಮಾರು 4 ಲಕ್ಷ ಟನ್ ಭತ್ತವನ್ನು ಹಲ್ಲಿಂಗ್ ಮಾಡಲಾಗುತ್ತಿತ್ತು. ರೈತರಿಂದ ಖರೀದಿಸಿದ ಪ್ರತಿ ಕ್ವಿಂಟಲ್ ಭತ್ತಕ್ಕೆ ಪರ್ಯಾಯವಾಗಿ ಗಿರಣಿಗಳು 67 ಕೆ.ಜಿ. ಅಕ್ಕಿ ಪೂರೈಸಿದ್ದವು.

‘ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ರೈತರು ನೇರವಾಗಿ ಅಕ್ಕಿಗಿರಣಿಗಳಿಗೆ ಭತ್ತ ನೀಡುತ್ತಿದ್ದರು. ನಾವು ಹಲ್ಲಿಂಗ್ ಮಾಡಿದ ನಂತರ ಸರ್ಕಾರ ನಿಗದಿ ಮಾಡಿದಂತೆ ಪ್ರತಿ ಕ್ವಿಂಟಲ್‌ಗೆ 67 ಕೆ.ಜಿ. ಅಕ್ಕಿ ಪೂರೈಸಿದ್ದೇವೆ. ಕೇಂದ್ರ ಸರ್ಕಾರದ ನಿಯಮಗಳಂತೆ ಪ್ರತಿ ಕ್ವಿಂಟಲ್ ಭತ್ತ ಹಲ್ಲಿಂಗ್ ಮಾಡಲು ₹120 ನಿಗದಿ ಮಾಡಲಾಗಿತ್ತು. 2019ರಲ್ಲಿ ರಾಜ್ಯ ಸರ್ಕಾರದ ಜತೆ ಮಾಡಿಕೊಂಡ ಒಪ್ಪಂದಂತೆ ಸಾಗಣೆ ವೆಚ್ಚ, ಸಂಗ್ರಹ ವೆಚ್ಚ ಸೇರಿ ₹42 ಹೆಚ್ಚುವರಿ ನೀಡಲು ಒಪ್ಪಂದವಾಗಿತ್ತು. ಆದರೆ, ಕೇಂದ್ರ ನಿಗದಿ ಮಾಡಿದಷ್ಟೇ ಹಣ ನೀಡಲಾಗಿದೆ. ಬಾಕಿ ಮೊತ್ತ ಇದುವರೆಗೂ ಪಾವತಿಸಿಲ್ಲ. ಬಾಕಿ ಇತ್ಯರ್ಥಕ್ಕೆ ಆಗ್ರಹಿಸಿ ಕಳೆದ ಬಾರಿ ರೈತರಿಂದ ನೇರವಾಗಿ ಭತ್ತ ಪಡೆಯಲು ನಿರಾಕರಿಸಿದ್ದೆವು. ಸರ್ಕಾರ ಖರೀದಿಸಿದ ಭತ್ತ ಗೋದಾಮುಗಳಲ್ಲೇ ಇದೆ. ಸಮಸ್ಯೆ ಬಗೆಹರಿಸದಿದ್ದರೆ ಹಲ್ಲಿಂಗ್ ಮಾಡದಿರಲು ನಿರ್ಧರಿಸಿದ್ದೇವೆ’ ಎನ್ನುತ್ತಾರೆ ಕರ್ನಾಟಕ ರಾಜ್ಯ ಅಕ್ಕಿಗಿರಣಿಗಳ ಮಾಲೀಕರ ಸಂಘದ ಅಧ್ಯಕ್ಷ ಹಾಗೂ ಬಿಜೆಪಿ ಶಾಸಕ ಪರಣ್ಣ ಮುನವಳ್ಳಿ.

ರಾಜ್ಯ	ಭತ್ತದ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)
ಕರ್ನಾಟಕ	36.9
ಪಶ್ಚಿಮ ಬಂಗಾಳ	143.4
ಪಂಜಾಬ್	112.4
ತಮಿಳುನಾಡು	56.7
ಛತ್ತೀಸಗಢ	41.1
ಬಿಹಾರ	36
ಜಾರ್ಖಂಡ್	15.4
ಆಂಧ್ರಪ್ರದೇಶ	105.4
ತೆಲಂಗಾಣ	58.6

‘ಪಡಿತರ ವ್ಯವಸ್ಥೆಗೆ ಅಗತ್ಯವಾದ ಅಕ್ಕಿಯನ್ನು ಕೇಂದ್ರ ಸರ್ಕಾರದ ಭಾರತೀಯ ಆಹಾರ ನಿಗಮದ ನಿಯಮಗಳಿಗೆ ಅನುಗುಣವಾಗಿ ನಿರ್ವಹಿಸಲಾಗುತ್ತದೆ. ಹಾಗಾಗಿ, ಕೇಂದ್ರ ನಿಗದಿಪಡಿಸಿದ ಮೊತ್ತವನ್ನಷ್ಟೇ ಪಾವತಿಸಿದ್ದೇವೆ. ನಿಯಮ ಮೀರಿ ಮಾಡಿಕೊಳ್ಳಲಾದ ಹೆಚ್ಚುವರಿ ಹಣ ಪಾವತಿಯ ಒಪ್ಪಂದ ಪಾಲಿಸಲು ಸಾಧ್ಯವಿಲ್ಲ. ಅದನ್ನು ಈಗಾಗಲೇ ಲಿಖಿತವಾಗಿ ಸ್ಪಷ್ಟಪಡಿಸಿದ್ದೇವೆ. ಕೆಲ ಗಿರಣಿಗಳ ಮಾಲೀಕರ ಮನವೊಲಿಸಲಾಗಿದೆ. ಅದೂ ಸಾಧ್ಯವಾಗದಿದ್ದರೆ ಬೇರೆ ರಾಜ್ಯಗಳಿಗೆ ಕಳುಹಿಸಿ ಹಲ್ಲಿಂಗ್ ಮಾಡಿಸಲಾಗುವುದು’ ಎನ್ನುತ್ತಾರೆ ಆಹಾರ ಇಲಾಖೆಯ ಉನ್ನತಾಧಿಕಾರಿಗಳು.

ಬಿತ್ತನೆಗೆ ಕೃಷಿ ಇಲಾಖೆ ಸರ್ವಸನ್ನದ್ಧ– ಸಿ.ಎಂ

ಬೆಂಗಳೂರು: ‘ಬೀಜ, ಗೊಬ್ಬರ, ಕೀಟನಾಶಕ ಸಂಗ್ರಹಿಸಿರುವ ಕೃಷಿ ಇಲಾಖೆ, ಬಿತ್ತನೆಗೆ ಅಗತ್ಯ ನೆರವು ನೀಡಲು ಸರ್ವಸನ್ನದ್ಧವಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ರಾಜ್ಯದಲ್ಲಿ ಮಳೆ ಆರಂಭವಾಗಿದ್ದು, ಕೆಲವೆಡೆ ಬಿತ್ತನೆ ಶುರುವಾಗಿದೆ. ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಈಗಾಗಲೇ ಎರಡು ಬಾರಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದರು.

ಬಜೆಟ್ ನಂತರ ಪರಿಶೀಲನೆ: ‘ಸಣ್ಣ ಕೈಗಾರಿಕೆಗಳು ಮತ್ತು ಕಾಸಿಯಾ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ತಿಳಿಸಿದ್ದಾರೆ. ಬಜೆಟ್ ಮಂಡನೆ ಬಳಿಕ ಅವರ ಸಮಸ್ಯೆಗಳನ್ನು ಪರಿಶೀಲಿಸುವ ಭರವಸೆ ನೀಡಲಾಗಿದೆ’ ಎಂದರು.

‘ಕೈಗಾರಿಕೆಗಳಿಗೆ ಒಂಬತ್ತು ತಿಂಗಳ ವಿದ್ಯುತ್ ತೆರಿಗೆ ವಿಧಿಸಲಾಗಿದೆ. ಇದರಿಂದ ತಮಗೆ ಹೊರೆಯಾಗಿದೆ ಎಂದು ಕೈಗಾರಿಕೋದ್ಯಮಿಗಳು ತಿಳಿಸಿದ್ದಾರೆ. ಕೆಇಆರ್‌ಸಿ ಪ್ರತಿವರ್ಷ ದರ ಪರಿಷ್ಕರಿಸುತ್ತದೆ. ದರ ಏರಿಕೆಗೂ ನಮ್ಮ ಸರ್ಕಾರಕ್ಕೂ ಸಂಬಂಧವಿಲ್ಲ. ಅದೊಂದು ಸ್ವಾಯತ್ತ ಸಂಸ್ಥೆ’ ಎಂದರು.

‘ಹಾಲಿನ ದರ ಹೆಚ್ಚಳ ಕುರಿತ ಪ್ರಸ್ತಾವನೆ ಬಗ್ಗೆ ಸಂಬಂಧಪಟ್ಟವರ ಜೊತೆ ಮಾತನಾಡುತ್ತೇನೆ’ ಎಂದೂ ಮುಖ್ಯಮಂತ್ರಿ ತಿಳಿಸಿದರು.

ಯಾವ ನೈತಿಕತೆ ಇದೆ?: ‘ಬಡವರ ಕಾರ್ಯಕ್ರಮಕ್ಕೆ ತೊಂದರೆ ನೀಡಬೇಕೆಂದು ಅಕ್ಕಿ ಕೊಡಲು ಕೇಂದ್ರ ಸರ್ಕಾರ ನಿರಾಕರಿಸಿದೆ. ದ್ವೇಷದ ರಾಜಕಾರಣ ಮಾಡುವವರನ್ನು ಬಡವರ ವಿರೋಧಿ ಎನ್ನಬೇಕು. ಅಕ್ಕಿ ನೀಡದಿದ್ದರೆ ಧರಣಿ ಮಾಡುವುದಾಗಿ ಹೇಳಿರುವ ಯಡಿಯೂರಪ್ಪ ಅವರಿಗೆ ಧರಣಿ ಮಾಡುವ ಸ್ವಾತಂತ್ರ್ಯವಿದೆ. ಆದರೆ, ಅವರಿಗೆ ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದರು.

ಬೇಡಿಕೆ ಕುಸಿತ: ಸಿವಿಲ್ ಎಂಜಿನಿಯರಿಂಗ್ ವಿಭಾಗ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳ ಕೊರತೆಯ ಕಾರಣ ಕಳೆದ ಐದು ವರ್ಷಗಳಲ್ಲಿ ರಾಜ್ಯದ 15 ಕಾಲೇಜುಗಳು ಸಿವಿಲ್ ಎಂಜಿನಿಯರಿಂಗ್ ವಿಭಾಗವನ್ನು ಮುಚ್ಚಿವೆ.

ಬೆಳಗಾವಿಯ ತಾಂತ್ರಿಕ ವಿಶ್ವವಿದ್ಯಾಲಯದ ಮಾಹಿತಿಯಂತೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೇ ರಾಜ್ಯದ 4 ಕಾಲೇಜುಗಳು ಸಿವಿಲ್ ಎಂಜಿನಿಯರಿಂಗ್ ವಿಭಾಗವನ್ನು ಮುಚ್ಚಿವೆ. ವಿದ್ಯಾರ್ಥಿಗಳ ಬೇಡಿಕೆ ಪರಿಗಣಿಸಿ ಆ ಸೀಟುಗಳನ್ನು ‘ಕಂಪ್ಯೂಟರ್ ಸೈನ್ಸ್’ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಕೋವಿಡ್ ಸಂಕಷ್ಟ ಆರಂಭವಾದ ನಂತರ ಸಿವಿಲ್ ಕೋರ್ಸ್‌ಗಳಿಗೆ ಬೇಡಿಕೆ ತಗ್ಗಿತ್ತು. ಸಿವಿಲ್ ಎಂಜಿನಿಯರಿಂಗ್ ವೃತ್ತಿಯು ಕ್ಷೇತ್ರಕಾರ್ಯವನ್ನು ಹೆಚ್ಚಾಗಿ ಅವಲಂಬಿಸಿರುವ ಕಾರಣ ವಿದ್ಯಾರ್ಥಿಗಳು ಕೋರ್ಸ್ ಆಯ್ಕೆ ಮಾಡಿಕೊಳ್ಳಲು ಹಿಂದೇಟು ಹಾಕಿದ್ದರು. ಮನೆಯಲ್ಲೇ ಕುಳಿತು ಕೆಲಸ ಮಾಡಬಹುದಾಗಿದ್ದ ಕಂಪ್ಯೂಟರ್ ಸೈನ್ಸ್ ಮತ್ತಿತರ ಕೋರ್ಸ್‌ಗಳತ್ತ ಚಿತ್ತ ಹರಿಸಿದ್ದರು. ವಿದ್ಯಾರ್ಥಿಗಳ ಕೊರತೆಯಿಂದಾಗಿ 2020–21ರಲ್ಲಿ ಮೊದಲ ಬಾರಿ ನಾಲ್ಕು ಕಾಲೇಜುಗಳು ಸಿವಿಲ್ ಎಂಜಿನಿಯರಿಂಗ್ ವಿಭಾಗವನ್ನು ಮುಚ್ಚಿದ್ದವು. ನಂತರವೂ ಅದೇ ಪ್ರವೃತ್ತಿ ಮುಂದುವರಿದು ಪ್ರತಿ ವರ್ಷವೂ ಮೂರ್‍ನಾಲ್ಕು ಕಾಲೇಜುಗಳಲ್ಲಿ ಕೋರ್ಸ್ ಸ್ಥಗಿತಗೊಳಿಸಲಾಗುತ್ತಿದೆ. ಕೆಲವು ಕಾಲೇಜುಗಳು ಸೀಟುಗಳ ಸಂಖ್ಯೆ ಕಡಿತಗೊಳಿಸಿವೆ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಮಾಹಿತಿ ನೀಡಿದರು.

‘ಬೇಡಿಕೆಗಳಿಗೆ ತಕ್ಕಂತೆ ಕೆಲ ಕೋರ್ಸ್‌ಗಳು ಮಹತ್ವ ಕಳೆದುಕೊಳ್ಳುವುದು, ಕೆಲ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚುವುದು ಸಹಜ. ನಿರ್ಮಾಣ ಕ್ಷೇತ್ರ ಸೇರಿದಂತೆ ಉದ್ಯಮದ ಬೆಳವಣಿಗೆಗೆ ಪೂರಕವಾಗಿ ಭವಿಷ್ಯದಲ್ಲಿ ಮತ್ತೆ ಬೇಡಿಕೆ ಬರಬಹುದು’ ಎನ್ನುತ್ತಾರೆ ವಿಟಿಯು ಕುಲಪತಿ ವಿದ್ಯಾಶಂಕರ್.

ಕೆಇಎ: ‘ಪರೀಕ್ಷಾ ಶುಲ್ಕ’ದ ಹೊರೆ!

ಐದು ನಿಗಮಗಳ 700ಕ್ಕೂ ಹೆಚ್ಚು ಹುದ್ದೆಗಳ ಭರ್ತಿಗೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಅಡಿಯಲ್ಲಿರುವ ಐದು ನಿಗಮಗಳಲ್ಲಿ ಖಾಲಿ ಇರುವ ವಿವಿಧ ವೃಂದಗಳ 700ಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿ ಆಹ್ವಾನಿಸಿದ್ದು, ಈ ಹುದ್ದೆಗಳಿಗೆ ನಿಗದಿಪಡಿಸಿದ ‘ಪರೀಕ್ಷಾ ಶುಲ್ಕ’ ಕಂಡು ಉದ್ಯೋಗಾಕಾಂಕ್ಷಿಗಳು ಬೆಚ್ಚಿದ್ದಾರೆ.

ಪ್ರತಿ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುವ ಸಾಮಾನ್ಯ ವರ್ಗ ಮತ್ತು ಇತರ ಪ್ರವರ್ಗಗಳ (ಪ್ರವರ್ಗ 2ಎ, 2ಬಿ, 3ಎ, 3ಬಿ) ಅಭ್ಯರ್ಥಿಗಳು ಪರೀಕ್ಷಾ ಶುಲ್ಕವಾಗಿ ₹1,000 ಪಾವತಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1ರ ಅಭ್ಯರ್ಥಿಗಳು ₹750, ಅಂಗವಿಕಲ ಮತ್ತು ಮಾಜಿ ಸೈನಿಕರು ₹250 ಶುಲ್ಕ ಕಟ್ಟಬೇಕು.

ಆಹಾರ ಮತ್ತು ನಾಗಕರಿಕ ಸರಬರಾಜು ನಿಗಮ, ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್), ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಲ್ಲಿ (ಎಂಎಸ್‌ಐಎಲ್) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೆಇಎ ಅಧಿಸೂಚನೆ ಹೊರಡಿಸಿದೆ. ಅರ್ಜಿ ಸಲ್ಲಿಸಲು ಜುಲೈ 22 ಕೊನೆ ದಿನ.

ಪರೀಕ್ಷಾ ಶುಲ್ಕ ಕಡಿಮೆ ಮಾಡುವಂತೆ ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವರು ಮತ್ತು ಕೆಇಎಗೆ ಉದ್ಯೋಗಾಕಾಂಕ್ಷಿಗಳು ಸರಣಿ ಟ್ವೀಟ್ ಮಾಡಿದ್ದಾರೆ.

ಮುಖ್ಯಾಂಶಗಳು
- ಶುಲ್ಕ ಕಂಡು ಬೆಚ್ಚಿದ ಅಭ್ಯರ್ಥಿಗಳು
- ಸಾಮಾನ್ಯ ವರ್ಗ ಮತ್ತು ಇತರ ಪ್ರವರ್ಗದವರಿಗೆ ₹1,000 ಶುಲ್ಕ
- ಶುಲ್ಕ ಕಡಿಮೆ ಮಾಡುವಂತೆ ಸರಣಿ ಟ್ವೀಟ್ ಮೂಲಕ ಸಿ.ಎಂಗೆ ಒತ್ತಾಯ

‘ಸ್ಪರ್ಧಾರ್ಥಿಗಳಲ್ಲಿ ಬಡವರೇ ಅತೀ ಹೆಚ್ಚು. ₹10 ಖರ್ಚು ಮಾಡಲು ಹತ್ತು ಬಾರಿ ಯೋಚಿಸುವ ಪರಿಸ್ಥಿತಿ ಇರುವಾಗ ಪ್ರತಿ ಹುದ್ದೆಯ ಪರೀಕ್ಷೆಗೆ ₹1,000 ಶುಲ್ಕ ವಿಧಿಸಿರುವುದು ದೊಡ್ಡ ಹೊರೆ’ ಎಂದು ಅಭ್ಯರ್ಥಿಗಳು ಅಲವತ್ತುಕೊಂಡಿದ್ದಾರೆ.

‘ಏನಿದು ಲೂಟಿ. ನಾಚಿಕೆ ಆಗಲ್ಲವೇ? ಬಡವರು ಎಲ್ಲಿಂದ ಹಣ ತುರುವುದು’ ಎಂದು ಆರ್. ರವಿ ಎಂಬವರು ಪ್ರಶ್ನಿಸಿದರೆ, ‘ಮಹಿಳೆಯರಿಗೆ ಉಚಿತ ಬಸ್ ಪಾಸ್ ನೀಡಲು ಬಡ ವಿದ್ಯಾರ್ಥಿಗಳಿಂದ ಹೆಚ್ಚು ಪರೀಕ್ಷಾ ಶುಲ್ಕ ವಸೂಲಿಗೆ ಸರ್ಕಾರ ಇಳಿದಿದೆ. ಕಳೆದ ವರ್ಷ ನಡೆಸಿದ್ದ ಕೆಪಿಟಿಸಿಎಲ್ ಪರೀಕ್ಷೆಗೆ ₹500 ಶುಲ್ಕ ವಿಧಿಸಿದ್ದ ಕೆಇಎ, ಒಂದೇ ವರ್ಷದಲ್ಲಿ ಶುಲ್ಕವನ್ನು ಇಮ್ಮಡಿ ಮಾಡಿದೆ’ ಎಂದು ನವೀನ್‌ಕುಮಾರ್ ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ಶುಲ್ಕ ಇಲ್ಲ. ಈ ಅಭ್ಯರ್ಥಿಗಳು ₹35 ಅರ್ಜಿ ಪ್ರೊಸೆಸಿಂಗ್ ಶುಲ್ಕ ಮಾತ್ರ ಕಟ್ಟಬೇಕು. ಆದರೆ, ಕೆಇಎ ಬಡ ಅಭ್ಯರ್ಥಿಗಳಿಂದ ಹಣ ಕಿತ್ತುಕೊಳ್ಳಲು ಮುಂದಾಗಿದೆ. ಸಾಮಾನ್ಯ ಅಭ್ಯರ್ಥಿಯೊಬ್ಬ ಬೇರೆ ಬೇರೆ ವೃಂದದ 10 ಹುದ್ದೆಗಳಿಗೆ ಅರ್ಜಿ ಸಲ್ಲಿಸಬೇಕಿದ್ದರೆ ₹10 ಸಾವಿರ ಪರೀಕ್ಷಾ ಶುಲ್ಕ ಪಾವತಿಸಬೇಕಾಗುತ್ತದೆ. ಇದು ಸುಲಿಗೆ ಅಲ್ಲವೇ’ ಎಂದು ವಿನಯ್ ಕುಮಾರ್ ಕೇಳಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ@75 www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಸೆಲೆಬ್ರಿಟಿ PREMIERE
ರಿತ್ವಿಕ್ ಕೃಪಾಕರ್
ಕಿರುತೆರೆ ನಟ

ಪ್ರಜಾವಾಣಿ ಜೊತೆ ರಿತ್ವಿಕ್ ಕೃಪಾಕರ್ | ಬೆಳಿಗ್ಗೆ 11 ಕ್ಕೆ
Prajavani.net Prajavani Prajavani
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಸಮಾಲೋಚನೆ: ವಿಎಚ್‌ಪಿ ಸ್ವಾಗತ

ನವದೆಹಲಿ: ಏಕರೂಪ ನಾಗರಿಕ ಸಂಹಿತೆಯ ವಿಚಾರವಾಗಿ ಕಾನೂನು ಆಯೋಗವು ಸಮಾಲೋಚನಾ ಪ್ರಕ್ರಿಯೆ ಆರಂಭಿಸಿರುವುದನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಶನಿವಾರ ಸ್ವಾಗತಿಸಿದೆ.

ಸಾರ್ವಜನಿಕರ ಅಭಿಪ್ರಾಯಗಳನ್ನು ಆಹ್ವಾನಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ‘ಏಕರೂಪ ನಾಗರಿಕ ಸಂಹಿತೆಯನ್ನು ಶೀಘ್ರ ಜಾರಿಗೊಳಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಭಾರತೀಯ ನಾಗರಿಕರಿಗೆ ಸಾಮಾನ್ಯ ಕಾನೂನುಗಳು ಇರುವಾಗ ಇದಕ್ಕೆ ಅಪವಾದವಾಗಿ ಕುಟುಂಬ ಕಾನೂನುಗಳು ಯಾಕೆ ಇರಬೇಕು ಎಂದೂ ಅವರು ಪ್ರಶ್ನಿಸಿದ್ದಾರೆ.

ಅಕ್ಕಿ: ದರ ಸಂಧಾನಕ್ಕೆ ಯತ್ನ

ಒಂದನೇ ಪುಟದಿಂದ...

‘ಇದಕ್ಕಾಗಿ ಒಂದು ವಾರ ಕಾಲಾವಕಾಶ ನೀಡಲಾಗಿದೆ. ಪರಿಷ್ಕೃತ ದರ ಪಟ್ಟಿ ಸಲ್ಲಿಕೆಯಾದ ಬಳಿಕ ಪುನಃ ಸಭೆ ನಡೆಸಿ ನಿರ್ಧಾರಕ್ಕೆ ಬರಲಾಗುವುದು’ ಎಂದಿವೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುನಿಯಪ್ಪ, ‘ಅಕ್ಕಿ ಖರೀದಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯನ್ನು ವಾರದೊಳಗೆ ಅಂತಿಮಗೊಳಿಸಲು ಸೂಚಿಸಲಾಗಿದೆ. ವರ್ತಕರು ಮತ್ತು ಅಕ್ಕಿ ಗಿರಣಿ ಮಾಲೀಕರ ಜತೆ ಚರ್ಚಿಸುವಂತೆ ಕೇಂದ್ರೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ’ ಎಂದರು.

ರಾಗಿ, ಜೋಳದ ದಾಸ್ತಾನು ಸೀಮಿತ: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರೈತರಿಂದ ಖರೀದಿಸಿರುವ ರಾಗಿ ಮತ್ತು ಜೋಳದ ದಾಸ್ತಾನು ಕೂಡ ಸೀಮಿತವಾಗಿದೆ. ಈ ಧಾನ್ಯಗಳ ದಾಸ್ತಾನನ್ನು ಅನ್ನ ಭಾಗ್ಯ ಯೋಜನೆ ಅನುಷ್ಠಾನಕ್ಕೆ ನೆಚ್ಚಿಕೊಳ್ಳುವ ಸ್ಥಿತಿ ಇಲ್ಲ ಎಂದು ಆಹಾರ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಪ್ರತಿ ಕೆ.ಜಿ.ಗೆ ₹ 32.09ರ ದರದಲ್ಲಿ ಪೂರೈಸಲು ಪತ್ರ

‘ರಾಜ್ಯ ಸರ್ಕಾರ ಅಕ್ಕಿಗಾಗಿ ಬೇರೆ ರಾಜ್ಯಗಳ ಮೊರೆ ಹೋಗುತ್ತಿದೆ. ರಾಜ್ಯದ ಅಕ್ಕಿಗಿರಣಿಗಳಿಗೇ ಹೊಣೆ ನೀಡಿದರೆ ಪ್ರತಿ ಕೆ.ಜಿ.ಗೆ ₹32.09ರ ದರದಲ್ಲಿ ಅಕ್ಕಿ ಪೂರೈಸಲು ಸಿದ್ಧ’ ಎಂದು ಕೆಲವು ಜಿಲ್ಲೆಗಳ ಅಕ್ಕಿ ಗಿರಣಿಗಳ ಮಾಲೀಕರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

‘ರಾಜ್ಯದಲ್ಲಿ ಪ್ರತಿ ಕ್ವಿಂಟಲ್ ಭತ್ತದ ದರ ₹2,000ದಿಂದ ₹2,500 ಇದೆ. ಭತ್ತ ಹಲ್ಲಿಂಗ್ ಮಾಡುವುದು, ಸಂಗ್ರಹ ಸೇರಿದಂತೆ ಎಲ್ಲ ಖರ್ಚು ಸೇರಿ ಕನಿಷ್ಠ ಲಾಭಕ್ಕೆ ಅಕ್ಕಿ ಪೂರೈಸುತ್ತೇವೆ. ಸಮೀಪದ ಗಿರಣಿಗಳಿಗೆ ಭತ್ತ ಪೂರೈಸುವುದರಿಂದ ಸಾಗಣೆ ವೆಚ್ಚ ಉಳಿದು, ರಾಜ್ಯದ ರೈತರಿಗೂ ಅನುಕೂಲವಾಗುತ್ತದೆ. ಭತ್ತದ ಉಪ ಉತ್ಪನ್ನಗಳಾದ ನುಚ್ಚು, ತೌಡುಗಳಿಂದ ಕುಕ್ಕುಟೋದ್ಯಮ, ಮೀನುಗಾರಿಕೆ, ಇಟ್ಟಿಗೆ ಬಟ್ಟಿಗಳಿಗೂ ಅನುಕೂಲವಾಗುತ್ತದೆ ಎಂದು ಮನವಿ ನೀಡಿದ್ದೇವೆ’ ಎಂದು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ಅಕ್ಕಿ ಗಿರಣಿ ಮಾಲೀಕ ಶಿವಕುಮಾರ್ ಪಾಟೀಲ ಮಾಹಿತಿ ನೀಡಿದರು.

‘ನಾಲ್ಕು ಲಕ್ಷ ಟನ್ ರಾಗಿ ದಾಸ್ತಾನು ಮಾಡಲಾಗಿತ್ತು. ಆಯ್ದ ಜಿಲ್ಲೆಗಳಲ್ಲಿ ತಲಾ 2 ಕೆ.ಜಿ. ರಾಗಿ ವಿತರಿಸುತ್ತಿದ್ದು, ಮೂರು ತಿಂಗಳಲ್ಲಿ 1.20 ಲಕ್ಷ ಟನ್ ಖಾಲಿಯಾಗಿದೆ. 1 ಲಕ್ಷ ಟನ್ ಜೋಳ ಖರೀದಿಸಿದ್ದು, 20 ಸಾವಿರ ಟನ್‌ಗೂ ಹೆಚ್ಚು ವಿತರಣೆಯಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

ಕಂಡಕ್ಟರ್ ಮೇಲೆ ಹಲ್ಲೆ: ಮಹಿಳೆಯರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಸವದತ್ತಿ (ಬೆಳಗಾವಿ ಜಿಲ್ಲೆ): ಬಸ್ ಕಂಡಕ್ಟರ್ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ಮೂವರು ಮಹಿಳೆಯರ ವಿರುದ್ಧ ಇಲ್ಲಿನ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸವದತ್ತಿ ಘಟಕದ ಬಸ್ ನಿರ್ವಾಹಕ ವಿ.ಎಸ್. ಭದ್ರಣ್ಣವರ ಅವರ ಮೇಲೆ ಹಲ್ಲೆ ಮಾಡಿದ ಆರೋಪದ ಮೇಲೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಜತಿಹಾಳದ ಶಂಕರಮ್ಮ ಶಿವಶಂಕರ ಬೊಮ್ಮನಾಶ, ಶಾಂತಮ್ಮ ಬಸವಂತಯ್ಯ ಚೌಧರಿ, ಬೂದಿಹಾಳದ ಮಹಾದೇವಿ ಬಸವರಾಜ ಕೊಣ್ಣೂರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಶುಕ್ರವಾರ ಸಂಜೆ ಸವದತ್ತಿ ಸಮೀಪದ ದಡೇರಕೊಪ್ಪಕ್ಕೆ ಬಸ್ ಬಂದಾಗ, ಬೇಗ ಬೇಗ ಬಸ್ ಹತ್ತುವಂತೆ ಕಂಡಕ್ಟರ್ ಜನರಿಗೆ ಕೂಗಿ ಹೇಳಿದರು. ಆಗ ಮಹಿಳೆಯರು ಕಂಡಕ್ಟರ್ ಜೊತೆ ಜಗಳ ತೆಗೆದು, ಕೊರಳಪಟ್ಟಿ ಹಿಡಿದು ಹಲ್ಲೆ ಮಾಡಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಹಿಳೆಯರೊಂದಿಗೆ ಇದ್ದ ಪುರುಷನೊಬ್ಬ ನನಗೆ ಅವಾಚ್ಯ ಪದ ಬಳಸಿದರು. ಅದನ್ನು ಪ್ರಶ್ನಿಸಿದ್ದಕ್ಕೆ ಮಹಿಳೆಯರಿಗೆ ಹೇಳಿ ಹಲ್ಲೆ ಮಾಡಿಸಿದರು. ಮಹಿಳೆಯರು ಬಸ್ ಒಳಗೆ ಎಳೆದು ನನ್ನನ್ನು ಸೀಟ್ ಮೇಲೆ ಕೂಡ್ರಿಸಿ ಒದ್ದರು’ ಎಂದೂ ಕಂಡಕ್ಟರ್ ವಿ.ಎಸ್.ಭದ್ರಣ್ಣವರ ದೂರಿನಲ್ಲಿ ತಿಳಿಸಿದ್ದಾರೆ.

ತಮ್ಮ ಮೇಲೆಯೇ ಕಂಡಕ್ಟರ್ ಹಲ್ಲೆ ಮಾಡಿದ್ದಾರೆ ಎಂದು ಮಹಿಳೆಯರು ಹೇಳುವುದು ವಿಡಿಯೊದಲ್ಲಿದೆ.

ವರುಣನಿಗಾಗಿ ಸಾಮೂಹಿಕ ಪ್ರಾರ್ಥನೆ, ಪಾದಯಾತ್ರೆ

ಕಲ್ಯಾಣ ಕರ್ನಾಟಕ ಸೇರಿ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಾಗಲಕೋಟೆ, ಹಾವೇರಿ, ವಿಜಯನಗರ, ಗದಗ, ರಾಮನಗರ, ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ, ಬೀದರ್, ಕೊಪ್ಪಳ, ರಾಯಚೂರು, ವಿಜಯಪುರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಶನಿವಾರ ಮಳೆಯಾಗಿದೆ.

(ರಾಮನಗರ ವರದಿ): ಬಿಸಿಲಿನಿಂದ ಬಸವಳಿದಿದ್ದ ನಗರದಲ್ಲಿ ಧಾರಾಕಾರವಾಗಿ ಮಳೆ ಸುರಿಯಿತು. ರಾಮನಗರದಲ್ಲಿ ಕುಡಿಯುವ ನೀರು ಪೂರೈಕೆ ಕಾಮಗಾರಿ ನಡೆಯುತ್ತಿರುವ ವಿವಿಧೆಡೆ ರಸ್ತೆಗಳು ಕೆಸರು ಗದ್ದೆಯಂತಾದವು. ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಪರದಾಡಿದರು.

(ಕಲಬುರಗಿ ವರದಿ): ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಯಾದಗಿರಿ, ಬೀದರ್, ಕೊಪ್ಪಳ, ರಾಯಚೂರು ಜಿಲ್ಲೆಗಳ ಹಲವು ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಶನಿವಾರ ಉತ್ತಮ ಮಳೆಯಾಗಿದೆ. ಎರಡು ದಿನಗಳಿಂದ ಮಳೆಯಾಗುತ್ತಿರುವುದರಿಂದ ಉಡುಪಿ ನಗರಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಬಜೆ ಜಲಾಶಯಕ್ಕೆ ಒಳ ಹರಿವು ಶುರುವಾಗಿದೆ.

ಉಡುಪಿ ಜಿಲ್ಲೆ ಚಿತ್ತೂರಲ್ಲಿ ಅತ್ಯಧಿಕ 11.2 ಸೆಂ.ಮೀ., ಇದುರುಕುಂಚಾಡಿ ಮತ್ತು ಹಕ್ಲಾಡಿಯಲ್ಲಿ 10 ಸೆಂ.ಮೀ., ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿಯಲ್ಲಿ 6.5 ಸೆಂ.ಮೀ. ಮೂಡುಬಿದಿರೆಯಲ್ಲಿ 5.9 ಸೆಂ.ಮೀ. ಮಳೆ ದಾಖಲಾಗಿದೆ.

ಬೆಳಗಾವಿಯ ಅಂಜುಮನ್ ಎ ಇಸ್ಲಾಂ ಸಂಸ್ಥೆಯ ಮೈದಾನದಲ್ಲಿ ಶನಿವಾರ ಮಳೆಗಾಗಿ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು

ಮಳೆಗಾಗಿ ಸಾಮೂಹಿಕ ಪ್ರಾರ್ಥನೆ- (ಬೆಳಗಾವಿ ವರದಿ): ಮಳೆಗಾಗಿ ಪ್ರಾರ್ಥಿಸಿ ಇಲ್ಲಿನ ಅಂಜುಮನ್ ಎ- ಇಸ್ಲಾಂ ಸಂಸ್ಥೆಯ ಮೈದಾನದಲ್ಲಿ ಮುಸ್ಲಿಮರು ಶನಿವಾರ ಧರ್ಮಗುರು ಮುಫ್ತಿ ಅಬ್ದುಲ್ ಅಜೀಜ್ ಖಾಜಿ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಶಾಸಕ ಆಸೀಫ್ ಸೇಠ್ ಮಾತನಾಡಿ, ‘ಮೇ ತಿಂಗಳಲ್ಲೇ ಬೆಳಗಾವಿ ಮತ್ತು ಉತ್ತರ ಕರ್ನಾಟಕದಲ್ಲಿ ಮಳೆ ಆರಂಭವಾಗುತ್ತಿತ್ತು. ಅದರೆ, ಜೂನ್ ಕೊನೆಯ ವಾರವಾದರೂ ಮಳೆ ಆಗುತ್ತಿಲ್ಲ. ರಕ್ಕಸಕೊಪ್ಪ ಮತ್ತು ಹಿಡಕಲ್ ಜಲಾಶಯ ಬರಿದಾಗುತ್ತಿವೆ. ಅದಕ್ಕೆ ಮಳೆಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುತ್ತಿದ್ದೇವೆ’ ಎಂದರು.

ಪಾದಯಾತ್ರೆ: ಬಸವಕಲ್ಯಾಣ ತಾಲ್ಲೂಕಿನ ಚಿಟ್ಟಾ (ಕೆ) ಗ್ರಾಮಸ್ಥರು ಶನಿವಾರ ಮಳೆಗಾಗಿ ಪ್ರಾರ್ಥಿಸಿ 11 ಗ್ರಾಮಗಳಿಗೆ ಭಜನೆ ಮಾಡುತ್ತ ಪಾದಯಾತ್ರೆ ನಡೆಸಿದರು.

ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚನೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಧಾರಾಕಾರ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ವ್ಯಾಪ್ತಿಯಲ್ಲಿ ಬಿರುಗಾಳಿ ವೇಗವು ಗಂಟೆಗೆ 45 ಕಿ.ಮೀನಿಂದ 55 ಕಿ.ಮೀ ವೇಗದಲ್ಲಿ ಬೀಸಲಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಮಳೆ ಆಗಲಿದೆ. ಶನಿವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆ ಅವಧಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ 14 ಸೆಂ.ಮೀ ಹಾಗೂ ಹೊನ್ನಾವರದಲ್ಲಿ 12 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಸಿಡಿಲು ಬಡಿದು ರೈತ ಸಾವು

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಆಲಗುಂಡಿ ಬಿ.ಕೆ. ಗ್ರಾಮದಲ್ಲಿ ಶನಿವಾರ ಸಿಡಿಲು ಬಡಿದು ರೈತ ಬಸಪ್ಪ ಮಾದರ (36) ಎಂಬುವರು ಮೃತಪಟ್ಟಿದ್ದಾರೆ. ವಿಠ್ಠಲ ಮಾದರ ಎಂಬುವರಿಗೆ ಗಾಯವಾಗಿದೆ.

19 ಕುರಿ ಸಾವು: ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಸಿಡಿಲು ಬಡಿದು 19 ಕುರಿಗಳು ಮೃತಪಟ್ಟಿವೆ.

ಮಣಿಪುರ: ಸರ್ವಪಕ್ಷ ನಿಯೋಗಕ್ಕೆ ಪಟ್ಟು

ಒಂದನೇ ಪುಟದಿಂದ...

‘ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆ ಅನ್ವಯ ಮಣಿಪುರದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ಅಗತ್ಯವಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಹೇಳಿದರು.

ಮಣಿಪುರ ಜನರ ಸ್ಥಿತಿಗತಿ ಬಗ್ಗೆ ಕಳವಳ ವ್ಯಕ್ತಪಡಿಸಿದ ಪ್ರತಿಪಕ್ಷಗಳು, ಶಾಂತಿ ಮತ್ತು ಸಾಮರಸ್ಯ ಪುನರ್ ಸ್ಥಾಪಿಸುವಲ್ಲಿ ವೈಫಲ್ಯ ಕಂಡಿರುವ ಸಿ.ಎಂ ಎನ್. ಬಿರೇನ್ ಸಿಂಗ್ ಅವರ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸಬೇಕು ಎಂದು ಪಟ್ಟುಹಿಡಿದವು.

ಸಂಘರ್ಷ ಪೀಡಿತ ನೆಲದಲ್ಲಿ ಶಾಂತಿ ಸ್ಥಾಪಿಸಲು ಕೇಂದ್ರ ಕೈಗೊಂಡಿರುವ ಯೋಜನೆಗಳ ಬಗ್ಗೆ ಸ್ಪಷ್ಟಪಡಿಸಬೇಕು. ಜೊತೆಗೆ, ಸಾಮರಸ್ಯ ನೆಲೆಗೊಳಿಸಲು ಅಗತ್ಯವಿರುವ ಯೋಜನೆಯ ಜಾರಿಗೆ ಸಮಯ ನಿಗದಿಪಡಿಸಬೇಕು ಎಂದು ಆಗ್ರಹಿಸಿದವು.

‘ಹಿಂಸಾಚಾರ ಆರಂಭವಾದ ದಿನದಿಂದಲೂ ಮೋದಿ ಅವರಿಗೆ ವಸ್ತುಸ್ಥಿತಿಯನ್ನು ವಿವರಿಸುತ್ತಿದ್ದೇನೆ. ಈ ಬಗ್ಗೆ ಮಾತನಾಡದೆ ಇರುವ ಒಂದು ದಿನವೂ ಇಲ್ಲ. ಪ್ರಧಾನಿ ಕೂಡ ಪ್ರತಿದಿನ ಸೂಚನೆಗಳನ್ನು ನೀಡುತ್ತಲೇ ಇದ್ದಾರೆಂದು ಗೃಹ ಸಚಿವರು ಸಭೆಯಲ್ಲಿ ತಿಳಿಸಿದರು’ ಎಂದು ಮೂಲಗಳು ಹೇಳಿವೆ.

ಮತ್ತೊಂದು ಕಾಶ್ಮೀರ ಮಾಡಲು ಯತ್ನ- ಟಿಎಂಸಿ: ‘ಬಿಜೆಪಿಯು ಮಣಿಪುರವನ್ನು ಮತ್ತೊಂದು ಕಾಶ್ಮೀರ ಮಾಡಲು ಹೊರಟಿದೆ’ ಎಂದು ತೃಣಮೂಲ ಕಾಂಗ್ರೆಸ್‌ನ ನಾಯಕ ಡೆರೆಕ್ ಒಬ್ರಯಾನ್ ದೂರಿದರು. .

ಆರ್‌ಜೆಡಿ ನಾಯಕ ಮನೋಜ್ ಕೆ. ಝಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಿಂಗ್, ಎಐಎಡಿಎಂಕೆಯ ಎಂ. ತಂಬಿದೊರೈ, ಬಿಜೆಡಿಯ ಪಿನಾಕಿ ಮಿಶ್ರಾ, ಎಎಪಿಯ ಸಂಜಯ್ ಸಿಂಗ್, ಶಿವಸೇನೆಯ ಪ್ರಿಯಾಂಕ ಚತುರ್ವೇದಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಭೆಯಲ್ಲಿ ಇದ್ದರು.

ಮಣಿಪುರದ ಹಿಂಸಾಚಾರ ಕುರಿತು ನವದೆಹಲಿಯಲ್ಲಿ ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಭೆ ನಡೆಯಿತು –ಪಿಟಿಐ ಚಿತ್ರ

ಬಿರೇನ್ ಸಿಂಗ್ ಬದಲಾವಣೆಗೆ ಆಗ್ರಹ

ಹಿಂಸಾಚಾರ ಆರಂಭವಾಗಿ ಐವತ್ತು ದಿನಗಳು ಕಳೆದರೂ ಪರಿಸ್ಥಿತಿ ನಿಭಾಯಿಸುವಲ್ಲಿ ಸೋತಿರುವ ಮುಖ್ಯಮಂತ್ರಿ ಬಿರೇನ್ ಸಿಂಗ್ ವಿರುದ್ಧ ಸಭೆಯಲ್ಲಿ ಪ್ರತಿಪಕ್ಷಗಳು ಹರಿಹಾಯ್ದವು.

ಕಾಂಗ್ರೆಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಒಕ್ರಾಂ ಐಬೋಬಿ ಸಿಂಗ್ ಮಾತನಾಡಿ, ‘ಬಿರೇನ್ ಸಿಂಗ್ ಅವರನ್ನು ಬದಲಾವಣೆ ಮಾಡದ ಹೊರತು ರಾಜ್ಯದಲ್ಲಿ ಶಾಂತಿ ಸ್ಥಾಪನೆ ಸಾಧ್ಯವಿಲ್ಲ’ ಎಂದರು.

ಸಚಿವರ ಖಾಸಗಿ ಗೋದಾಮು ಭಸ್ಮ

ಮಣಿಪುರದಲ್ಲಿ ಮತ್ತೆ ಬಿಜೆಪಿ ಸಚಿವರನ್ನು ಗುರಿಯಾಗಿಸಿಕೊಂಡು ದಾಳಿ ಮುಂದುವರಿದಿದ್ದು, ಶುಕ್ರವಾರ ಮಧ್ಯರಾತ್ರಿ ದುಷ್ಕರ್ಮಿಗಳ ಗುಂಪೊಂದು ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ ಎಲ್. ಸುಸಿಂದ್ರೋ ಅವರಿಗೆ ಸೇರಿದ ಖಾಸಗಿ ಗೋದಾಮಿಗೆ ಬೆಂಕಿ ಹಚ್ಚಿದ್ದು, ಸಂಪೂರ್ಣ ಭಸ್ಮವಾಗಿದೆ.

ಪೂರ್ವ ಇಂಫಾಲ್ ಜಿಲ್ಲೆಯ ಚಿಂಗಾರೆಲ್‌ನಲ್ಲಿದ್ದ ಸಚಿವರಿಗೆ ಸೇರಿದ ಗೋದಾಮು ಸುಟ್ಟು ಹೋಗಿದೆ. ಅಲ್ಲದೇ, ಇದೇ ಜಿಲ್ಲೆಯ ಖುರೈ ಪ್ರದೇಶದಲ್ಲಿ ಇರುವ ಸಚಿವರ ಮನೆಯ ಬಳಿ ಆಸ್ತಿಯೊಂದಕ್ಕೆ ಬೆಂಕಿ ಹಚ್ಚಲು ಗುಂಪೊಂದು ಯತ್ನಿಸಿದೆ. ಸಕಾಲದಲ್ಲಿ ಭದ್ರತಾ ಪಡೆಯ ಯೋಧರು ಸ್ಥಳಕ್ಕೆ ತೆರಳಿ ಅನಾಹುತವನ್ನು ತಪ್ಪಿಸಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಐದು ವರ್ಷಗಳಿಂದ ಮುಚ್ಚಲಾಗಿದ್ದ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯ ದಕ್ಷಿಣ ದ್ವಾರ

‘ವಾಸ್ತು ಸರಿ ಇಲ್ಲ’ದ ದ್ವಾರ ತೆರೆಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಸ್ತು ಸರಿ ಇಲ್ಲ’ ಎಂಬ ಕಾರಣಕ್ಕೆ ಐದು ವರ್ಷಗಳಿಂದ ಮುಚ್ಚಲಾಗಿದ್ದ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಯ ದಕ್ಷಿಣ ದ್ವಾರವನ್ನು ಶನಿವಾರ ತೆರೆಸಿ, ಅದರ ಮೂಲಕವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಕಚೇರಿಯ ಒಳಗೆ ಪ್ರವೇಶಿಸಿದರು.

ಅನ್ನಭಾಗ್ಯ ಯೋಜನೆ ಅನುಷ್ಠಾನ ಕುರಿತಂತೆ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಲು ವಿಧಾನಸೌಧಕ್ಕೆ ಬಂದಿದ್ದ ಮುಖ್ಯಮಂತ್ರಿ, ತಮ್ಮ ಕಚೇರಿಯ ದಕ್ಷಿಣ ದ್ವಾರ ಮುಚ್ಚಿರುವುದನ್ನು ಗಮನಿಸಿದರು. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ‘ವಾಸ್ತು ಕಾರಣಕ್ಕೆ ಆ ದ್ವಾರವನ್ನು ಬಂದ್ ಮಾಡಲಾಗಿದೆ’ ಎಂದು ಉತ್ತರ ಬಂತು.

ಆ ದ್ವಾರದಲ್ಲಿ ನಿಂತ ಮುಖ್ಯಮಂತ್ರಿ, ಕಚೇರಿಯ ಪಶ್ಚಿಮ ದ್ವಾರದ ಮೂಲಕ ಸಿಬ್ಬಂದಿಯನ್ನು ಒಳಗೆ ಕಳುಹಿಸಿ ದಕ್ಷಿಣ ದ್ವಾರವನ್ನು ತೆರೆಸಿದರು. ಬಳಿಕ ಅದೇ ದ್ವಾರದ ಮೂಲಕ ಅವರು ಒಳಗೆ ತೆರಳಿದರು. ಅಲ್ಲಿಯೇ ಸಭೆಯನ್ನೂ ನಡೆಸಿದರು.

‘ಆರೋಗ್ಯಕರ ಮನಸ್ಸು, ಸ್ವಚ್ಛ ಹೃದಯ, ಜನಪರ ಕಾಳಜಿ, ಒಳ್ಳೆಯ ಗಾಳಿ, ಬೆಳಕು ಬರುವಂತಿದ್ದರೆ ಅದೇ ಉತ್ತಮ ವಾಸ್ತು’ ಎಂದು ಅಧಿಕಾರಿಗಳ ಜತೆ ಮುಖ್ಯಮಂತ್ರಿ ತಮ್ಮ ನಿಲುವು ಹಂಚಿಕೊಂಡರು. ಸಭೆ ಮುಗಿದ ಬಳಿಕವೂ ದಕ್ಷಿಣ ದ್ವಾರದ ಮೂಲಕವೇ ಮುಖ್ಯಮಂತ್ರಿ ಹೊರಗೆ ಬಂದರು.

ಈ ವಿಚಾರವನ್ನು ಟ್ವೀಟ್‌ನಲ್ಲಿಯೂ ಮುಖ್ಯಮಂತ್ರಿ ಹಂಚಿಕೊಂಡಿದ್ದಾರೆ.

ವಿಧಾನಸೌಧದಲ್ಲಿರುವ ಮುಖ್ಯಮಂತ್ರಿ ಕಚೇರಿಯ ದಕ್ಷಿಣ ದ್ವಾರದ ಮೂಲಕ ಒಳಗೆ ಪ್ರವೇಶಿಸಿದ ಸಿದ್ದರಾಮಯ್ಯ, ಸಭೆ ಮುಗಿಸಿ ಆದೇ ದ್ವಾರದ ಮೂಲಕ ಹೊರಗೆ ಬಂದರು

ಸಿದ್ದರಾಮಯ್ಯ ಮತಾಂತರದ ರಾಯಭಾರಿ: ಅಶೋಕ

ಚಿಕ್ಕಮಗಳೂರು: ‘ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಮತಾಂತರ ನಿಷೇಧ ಕಾಯ್ದೆಯನ್ನು ಕಾಂಗ್ರೆಸ್ ಸರ್ಕಾರ ವಾಪಸ್ ಪಡೆದಿದೆ. ಈಗ ಮತಾಂತರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ರಾಯಭಾರಿ’ ಎಂದು ಶಾಸಕ ಆರ್. ಅಶೋಕ ಹೇಳಿದರು.

ಬಿಜೆಪಿ ಜಿಲ್ಲಾ ಘಟಕ ನಗರದಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾಮಟ್ಟದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಮತಾಂತರ ಹೆಚ್ಚಾದಷ್ಟು ಕಾಂಗ್ರೆಸ್‌ಗೆ ಹೆಚ್ಚು ಮತಗಳು ಬೀಳುತ್ತವೆ. ಆದ್ದರಿಂದಲೇ ಮತಾಂತರಕ್ಕೆ ಸಿದ್ದರಾಮಯ್ಯ ಮುಕ್ತ ಅವಕಾಶ ಕೊಟ್ಟಿದ್ದಾರೆ’ ಎಂದರು.

‘ಈ ದೇಶ ನಮ್ಮ ಕೈಯಲ್ಲಿ ಉಳಿಯಬೇಕೆಂದರೆ ಮತಾಂತರ ಹೆಚ್ಚಾಗಬೇಕು ಎಂದು ಬ್ರಿಟಿಷರು ಹೇಳಿದ್ದರು. ಬಾಬರ್ ಮತ್ತು ಔರಂಗಜೇಬ್ ಕೂಡ ಅದನ್ನೇ ಬಯಸಿದ್ದರು. ಟಿಪ್ಪು ಕೂಡ ಕೊಡಗಿನಲ್ಲಿ ಮತಾಂತರ ಮಾಡಿದ. ಸಿದ್ದರಾಮಯ್ಯ ಟಿಪ್ಪುವಿನ ರಾಯಭಾರಿ ಆಗಲು ಹೊರಟಿದ್ದಾರೆ’ ಎಂದು ಟೀಕಿಸಿದರು.

‘ಇನ್ನು ಮುಂದೆ ಲವ್ ಜಿಹಾದ್ ಹೆಚ್ಚಾಗುತ್ತದೆ. ಲವ್ ಜಿಹಾದ್ ಎಂದರೆ ಲವ್ ಅಟ್ ಫಸ್ಟ್ ಸೈಟ್ ಅಲ್ಲ. ಲವ್ ಅಟ್ ಬ್ಯಾಕ್ ಸೈಟ್. ಪ್ರೀತಿ ಮಾಡುವುದು ಹೇಗೆ ಎಂದು ತರಬೇತಿ ನೀಡಿ ಕಳುಹಿಸುತ್ತಾರೆ. ಮುಸ್ಲಿಂ ಯುವಕರಿಗೆ ಬೈಕ್ ಕೊಡಿಸುತ್ತಾರೆ, ಜಿಮ್‌ಗೆ ಕಳುಹಿಸಿ ಫಿಟ್ ಆಗುವಂತೆ ಮಾಡುತ್ತಾರೆ. ಬಳಿಕ ಹಿಂದೂ ಯುವತಿಯರನ್ನು ಪ್ರೀತಿಸಿ ಎಂದು ಕಳುಹಿಸುತ್ತಾರೆ. ನಂತರ ಯುವತಿಯರನ್ನು ಮತಾಂತರ ಮಾಡಿಸುತ್ತಾರೆ. ಬಿಜೆಪಿ ಸರ್ಕಾರ ಇದಕ್ಕೆಲ್ಲಾ ಬಾಗಿಲು ಹಾಕಿತ್ತು. ಕಾಂಗ್ರೆಸ್ ಸರ್ಕಾರ ಈಗ ಗೇಟ್ ತೆರೆದುಬಿಟ್ಟಿದೆ’ ಎಂದರು.

ಸರ್ಕಾರ ಪತನ: ‘ರಾಜ್ಯದಲ್ಲಿ ಇರುವುದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಸಮ್ಮಿಶ್ರ ಸರ್ಕಾರ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಗೆದ್ದರೆ, ಈ ಸಮ್ಮಿಶ್ರ ಸರ್ಕಾರ ಪತನವಾಗುವುದು ಗ್ಯಾರಂಟಿ’ ಎಂದು ಅಶೋಕ ಹೇಳಿದರು.

ಸಂಕ್ಷಿಪ್ತ ಸುದ್ದಿ

ಟೋಲ್ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ

ರಾಮನಗರ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ದರ ಹೆಚ್ಚಿಸಿರುವುದನ್ನು ವಿರೋಧಿಸಿ, ಜಿಲ್ಲೆಯ ಕುಂಬಳಗೋಡು ಸಮೀಪದ ಕಣಮಿಣಕಿ ಟೋಲ್ ಪ್ಲಾಜಾ ಬಳಿ, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಶನಿವಾರ ಪ್ರತಿಭಟಿಸಿದರು.

ಟೋಲ್ ಪ್ಲಾಜಾ ಬಳಿ ಜಮಾಯಿಸಿದ ವಿವಿಧ ಸಂಘಟನೆಗಳ ಕಾರ್ಯಕರ್ತರು ತಮಟೆ ಬಾರಿಸುತ್ತಾ ಪ್ರಾಧಿಕಾರ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ವಾಹನಗಳ ಸವಾರರಿಗೆ ಹೊರೆಯಾಗಿರುವ ಟೋಲ್ ದರ ಇಳಿಸಬೇಕು ಎಂದು ಆಗ್ರಹಿಸಿದರು. ಕೆಲವರು ಹೆದ್ದಾರಿಯಲ್ಲಿ ಮಲಗಿ ಆಕ್ರೋಶ ಹೊರ ಹಾಕಿದರು.

ನಾಗರಿಕರ ಹತ್ಯೆ: ಪಾಕ್ ಆರೋಪ

ಇಸ್ಲಾಮಾಬಾದ್ (ರಾಯಿಟರ್ಸ್): ಕಾಶ್ಮೀರದ ಸತ್ವಾಲ್ ಪ್ರದೇಶದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ)ಯ ಬಳಿ ಭಾರತೀಯ ಪಡೆಗಳು ಇಬ್ಬರು ನಾಗರಿಕರನ್ನು ಹತ್ಯೆ ಮಾಡಿವೆ ಎಂದು ಪಾಕಿಸ್ತಾನದ ಸೇನೆ ಶನಿವಾರ ಆರೋಪಿಸಿದೆ.

ಕುರಿಗಾಹಿಗಳ ಗುಂಪಿನ ಮೇಲೆ ಭಾರತೀಯ ಸೇನೆ ಯೋಧರು ಗುಂಡಿನ ದಾಳಿ ನಡೆಸಿ, ಇಬ್ಬರನ್ನು ಹತ್ಯೆ ಮಾಡಿದ್ದಾರೆ ಎಂದೂ ಹೇಳಿಕೆಯಲ್ಲಿ ತಿಳಿಸಿದೆ.

ಪಾಕಿಸ್ತಾನದ ಆರೋಪಕ್ಕೆ ಭಾರತೀಯ ಸೇನೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಕೈ’ ಗೆಲ್ಲಿಸಲು ಶ್ರಮ

ಹುಬ್ಬಳ್ಳಿ: ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲ ಕಡೆ ಪ್ರವಾಸ ಮಾಡುವೆ. ಉತ್ತರ ಕರ್ನಾಟಕ ಭಾಗದ 11 ಕ್ಷೇತ್ರಗಳ ಪೈಕಿ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಿಸಲು ಶ್ರಮಿಸುವೆ. ನನ್ನ ಅನುಭವವನ್ನು ಪಕ್ಷವು ಬಳಸಿಕೊಳ್ಳಲಿದ್ದು, ಇದರ ಬಗ್ಗೆ ವರಿಷ್ಠರ ಜೊತೆ ಚರ್ಚಿಸಿದ್ದೇನೆ’ ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ತಿಳಿಸಿದರು.

‘ನನ್ನ ರಾಜಕೀಯ ಜೀವನದಲ್ಲಿ ಈಗ ಹೊಸ ಅಧ್ಯಾಯ ಆರಂಭವಾಗಿದೆ. ಕೊಟ್ಟ ಮಾತಿನಂತೆ ಪಕ್ಷವು ನಡೆದುಕೊಂಡಿದೆ. ನನ್ನನ್ನು ಗೌರವದಿಂದ ಕಾಣಲಾಗುತ್ತಿದೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

2024ರ ಜೂನ್ 30ರವರೆಗೆ ಗಡುವು; ಪ್ರಗತಿಯಲ್ಲಿ ₹300 ಕೋಟಿ ಮೊತ್ತದ ಕಾಮಗಾರಿಗಳು

‘ಸ್ಮಾರ್ಟ್ ಸಿಟಿ’ ಮತ್ತೊಂದು ವರ್ಷ ವಿಳಂಬ

• ಆರ್.ಮಂಜುನಾಥ್

ಬೆಂಗಳೂರು: ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ಸುಮಾರು ₹ 300 ಕೋಟಿ ಮೊತ್ತದ ಕಾಮಗಾರಿಗಳು ಇನ್ನೂ ನಡೆದಿವೆ.

ಸ್ಮಾರ್ಟ್ ಸಿಟಿ ಯೋಜನೆ ಅಧಿಕಾರಿಗಳು ಜೂನ್ 23ರೊಳಗೆ ಎಲ್ಲ ಕಾಮಗಾರಿ ಮುಗಿಯುತ್ತವೆ ಎಂದು ಹೇಳುತ್ತಿದ್ದರು. ಆದರೆ, ಆ ಗಡುವು ಮುಗಿದಿದ್ದರೂ ಏಳು ಕಾಮಗಾರಿ ನಡೆಯುತ್ತಿವೆ. ಇನ್ನೂ 1 ವರ್ಷ ಕಾಲಾವಕಾಶ ಸಿಕ್ಕಿರುವುದರಿಂದ ಕ್ಷಿಪ್ರಗತಿ ಪಡೆದುಕೊಳ್ಳುವ ಸಾಧ್ಯತೆ ಕ್ಷೀಣಿಸಿದೆ.

ರಾಜಧಾನಿ ಬೆಂಗಳೂರನ್ನು ‘ಸ್ಮಾರ್ಟ್ ಸಿಟಿ ಯೋಜನೆಗೆ’ ಸಾಕಷ್ಟು ಹೋರಾಟ ಮಾಡಿ ಸೇರಿಸಲಾಗಿತ್ತು. ನಗರದಲ್ಲಿ ‘ಐಕಾನ್’ ಕಾಮಗಾರಿಗಳು ನಡೆಯುವ ನಿರೀಕ್ಷೆ ಇತ್ತು. ಆದರೆ, ಟೆಂಡರ್‌ಶ್ಯೂರ್‌ಗೆ ಅರ್ಧಕ್ಕಿಂತ ಹೆಚ್ಚಿನ ಹಣ ವ್ಯಯ ಮಾಡಲಾಗಿದೆ. 32 ರಸ್ತೆಗಳಲ್ಲಿ ಇನ್ನೂ 5 ರಸ್ತೆಗಳ ಕಾಮಗಾರಿ ಮುಗಿದಿಲ್ಲ.

ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಅತ್ಯಾಧುನಿಕ ಸಭಾಂಗಣ ಹಾಗೂ ಇತರೆ ಸೌಲಭ್ಯ ಒದಗಿಸುವ ಕಾಮಗಾರಿ ಇನ್ನೂ ತೆವಳುತ್ತಿದೆ. ಮುಕ್ಕಾಲು ಭಾಗ ಕಾಮಗಾರಿ ಮುಗಿದಿದೆ ಎಂದು ಹೇಳಲಾಗುತ್ತಿದ್ದರೂ; ವಾಸ್ತವದ ಚಿತ್ರಣ ವ್ಯತಿರಿಕ್ತವಾಗಿದೆ. ಇನ್ನು ಕೆ.ಆರ್. ಮಾರುಕಟ್ಟೆಯ ಆರ್ಥಿಕ ಕೇಂದ್ರದ ಮರು ಅಭಿವೃದ್ಧಿ ಕಾರ್ಯ ವರ್ಷಗಳಿಂದಲೂ ನಡೆಯುತ್ತಿದೆ. ಸ್ಥಳದಲ್ಲಿನ ಅವ್ಯವಸ್ಥೆ ಅಲ್ಲಿನ ಕಾಮಗಾರಿಯ ಆಮೆಗತಿಗೆ ಕೈಗನ್ನಡಿಯಾಗಿದೆ.

ಪ್ರಜಾವಾಣಿ ವಿಶೇಷ

ಅತ್ಯಂತ ನಿರೀಕ್ಷೆಯ ಸಮಗ್ರ ನಿಯಂತ್ರಣ ಕೇಂದ್ರ (ಐಸಿಸಿಸಿ) ನಗರಕ್ಕೆ ಸುರಕ್ಷತೆ ಒದಗಿಸುವ, ಸಂಚಾರ, ಪಾದಚಾರಿ, ಕುಂದುಕೊರತೆ ಸಮಸ್ಯೆಗಳಿಗೂ ಒಂದೇ ವೇದಿಕೆಯಲ್ಲಿ ಪರಿಹಾರ ಕಲ್ಪಿಸುವ ಯೋಜನೆಯಾಗಿದೆ. ಇದು ಇನ್ನೂ ಆರಂಭಿಕ ಹಂತದಲ್ಲೇ ಇದೆ. ಗಾಂಧಿಬಜಾರ್‌ನಲ್ಲಿ ಕಾರು ಪಾರ್ಕಿಂಗ್ ಕಾಮಗಾರಿ ಆರಂಭವೇ ಆಗಿಲ್ಲ.

ಕೆ.ಆರ್.ಮಾರ್ಕೆಟ್‌ನಲ್ಲಿ ನಡೆಯುತ್ತಿರುವ ಆರ್ಥಿಕ ಕೇಂದ್ರದ ಕಾಮಗಾರಿಯ ದೃಶ್ಯ –ಪ್ರಜಾವಾಣಿ ಚಿತ್ರ:ಎಂ.ಎಸ್.ಮಂಜುನಾಥ್

‘ಸ್ಮಾರ್ಟ್ ಸಿಟಿ’ ಬಹುತೇಕ ಪೂರ್ಣ...

‘ಸ್ಮಾರ್ಟ್ ಸಿಟಿ ಯೋಜನೆಗಳು ಬಹುತೇಕ ಪೂರ್ಣಗೊಂಡಿವೆ. ಸ್ಥಳೀಯ ಸಮಸ್ಯೆಗಳಿಂದ ಕೆಲವು ಕಾಮಗಾರಿಗಳು ವಿಳಂಬವಾಗಿವೆ. ಶೀಘ್ರ ಮುಗಿಸಲಾಗುವುದು. ಹೊಸ ಯೋಜನೆ ತೆಗೆದುಕೊಳ್ಳುವಂತಿಲ್ಲ’ ಎಂದು ಸ್ಮಾರ್ಟ್ ಸಿಟಿ ಯೋಜನೆಯ ಪ್ರಭಾರ ವ್ಯವಸ್ಥಾಪಕ ನಿರ್ದೇಶಕಿ ಸುಶೀಲಮ್ಮ ತಿಳಿಸಿದರು.

₹928.57 ಕೋಟಿ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳ ವೆಚ್ಚ

₹629.73 ಕೋಟಿ ಪೂರ್ಣಗೊಂಡ ಕಾಮಗಾರಿಗಳ ಮೊತ್ತ

₹298.84 ಕೋಟಿ ಆರಂಭವಾಗದ, ಪ್ರಗತಿಯಲ್ಲಿರುವ ಕಾಮಗಾರಿಗಳ ಮೌಲ್ಯ

44 ಒಟ್ಟು ಯೋಜನೆಗಳು

37 ಪೂರ್ಣಗೊಂಡ ಕಾಮಗಾರಿಗಳು

7 ಬಾಕಿ ಯೋಜನೆ

ಪ್ರಗತಿಯಲ್ಲಿರುವ ಕಾಮಗಾರಿಗಳು

ಕಾಮಗಾರಿ	ವೆಚ್ಚ (₹ಕೋಟಿಗಳಲ್ಲಿ)	ಭೌತಿಕ ಪ್ರಗತಿ (ಶೇಕಡವಾರು)
ಸ್ಮಾರ್ಟ್ ಟೆಂಡರ್‌ಶ್ಯೂರ್ ರಸ್ತೆ– ಮಿಲ್ಲರ್ಸ್ ರಸ್ತೆ, ಕಂಟೋನ್ಮೆಂಟ್ ರಸ್ತೆ, ಎಚ್‌ಕೆಪಿ ರಸ್ತೆ	41.40	95
ಸ್ಮಾರ್ಟ್ ಟೆಂಡರ್‌ಶ್ಯೂರ್ ರಸ್ತೆ– ಅವೆನ್ಯೂ ರಸ್ತೆ, ರೀನಸ್ ಸ್ಟ್ರೀಟ್	34.21	92
ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಸಭಾಂಗಣ ಬ್ಲಾಕ್	42	73
ಕೆ.ಆರ್. ಮಾರುಕಟ್ಟೆ– ಮಾಂಸ ಮಾರುಕಟ್ಟೆ ಮರುಅಭಿವೃದ್ಧಿ	6.70	80
ಕೆ.ಆರ್. ಮಾರುಕಟ್ಟೆ– ಆರ್ಥಿಕ ಕೇಂದ್ರದ ಮರುಅಭಿವೃದ್ಧಿ	40.05	85
ಇಂಟಗ್ರೇಟೆಡ್ ಕಮ್ಯಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್ (ಐಸಿಸಿಸಿ)	112.35	85
ಗಾಂಧಿಬಜಾರ್‌ನಲ್ಲಿ ಬಹುಅಂತಸ್ತಿನ ಕಾರ್ ಪಾರ್ಕಿಂಗ್	22.13	0

‘ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗೆ ಬದ್ಧ’

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ, ಅಸಮಾನತೆ ನಿವಾರಣೆಗೆ ಸರ್ಕಾರ ಬದ್ಧವಾಗಿದೆ. ಸಾಹಿತಿಗಳು, ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಆತಂಕ ಪಡಬೇಕಿಲ್ಲ ಎಂದು ಸಿ.ಎಂ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಶನಿವಾರ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಲೇಖಕರ ಬರವಣಿಗೆಗಳು ಸಮಾಜಮುಖಿಯಾಗಿರಬೇಕು. ನ್ಯೂನತೆಗಳನ್ನು ಹೋಗಲಾಡಿಸಲು ಶ್ರಮಿಸಬೇಕು. ಜಾತಿಯ ಕಾರಣಕ್ಕಾಗಿಯೇ ಹಲವರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಆರ್ಥಿಕ, ಸಾಮಾಜಿಕ ಅಸಮಾನತೆ ಸೃಷ್ಟಿಯಾಗಿದೆ. ಇದನ್ನು ಹೋಗಲಾಡಿಸಿದರೆ ಸಮಾಜದಲ್ಲಿ ಶಾಂತಿ, ಸೌಹಾರ್ದ ನೆಲೆಸುತ್ತದೆ. ಸರ್ವರ ಅಭಿವೃದ್ಧಿಯಾಗುತ್ತದೆ ಎಂದರು.

ಕಲಬುರಗಿಯ ಡಾ.ಪಿ.ಎಸ್. ಶಂಕರ್ ಅವರಿಗೆ ‘ಸಾಹಿತ್ಯ ರತ್ನ’, ಸಕಲೇಶಪುರದ ಕೌಶಿಕ್ ಕೂಡುರಸ್ತೆ ಅವರಿಗೆ ‘ಯುವ ಸಾಹಿತ್ಯ ರತ್ನ’, ಮೈಸೂರಿನ ಪುಸ್ತಕ ಪ್ರಕಾಶನದ ಬಿ.ಎನ್.ಶ್ರೀರಾಮ ಅವರಿಗೆ ‘ಪುಸ್ತಕ ರತ್ನ’ ಹಾಗೂ ಮೈಸೂರು ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್‌ನ ಜಿ.ಎಚ್. ಕೃಷ್ಣಮೂರ್ತಿ ಅವರಿಗೆ ‘ಮುದ್ರಣ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಶೋಧಕ ಹಂಪ. ನಾಗರಾಜಯ್ಯ, ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ, ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ಆರ್. ದೊಡ್ಡೇಗೌಡ ಉಪಸ್ಥಿತರಿದ್ದರು.

ನಗರದಲ್ಲಿ ಶನಿವಾರ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ವಾರ್ಷಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಬಿ.ಎನ್. ಶ್ರೀರಾಮ (ಪುಸ್ತಕ ರತ್ನ ಪ್ರಶಸ್ತಿ), ಪಿ.ಎಸ್. ಶಂಕರ್ (ಸಾಹಿತ್ಯ ರತ್ನ), ಕೌಶಿಕ್ ಕೂಡುರಸ್ತೆ (ಯುವ ಸಾಹಿತ್ಯ ರತ್ನ) ಮತ್ತು ಜಿ.ಎಚ್. ಕೃಷ್ಣಮೂರ್ತಿ (ಮುದ್ರಣ ರತ್ನ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ, ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಸಂಶೋಧಕ ಹಂಪ ನಾಗರಾಜಯ್ಯ, ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಇದ್ದಾರೆ ಪ್ರಜಾವಾಣಿ ಚಿತ್ರ

ಶೇ 18 ಜಿಎಸ್‌ಟಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಟ್ ಫಂಡ್‌ಗಳ ಮೇಲೆ ಕೇಂದ್ರ ಸರ್ಕಾರ ಶೇ 18ರಷ್ಟು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ವಿಧಿಸುತ್ತಿರುವುದು ಖಂಡನೀಯ. ಕೂಡಲೇ ತೆರಿಗೆ ವಿನಾಯಿತಿ ನೀಡಬೇಕು. ಇಲ್ಲವಾದರೆ ಹೋರಾಟದ ಚಿಂತನೆ ನಡೆಸಲಾಗುವುದು’ ಎಂದು ಕರ್ನಾಟಕ ಚಿಟ್‌ಫಂಡ್ಸ್ ಒಕ್ಕೂಟದ ಪದಾಧಿಕಾರಿಗಳು ಎಚ್ಚರಿಸಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಚಿಟ್ ಫಂಡ್ ಉತ್ಸವ–2023’ ಕಾರ್ಯಕ್ರಮದಲ್ಲಿ ಪದಾಧಿಕಾರಿಗಳು ಎಂಟು ಪ್ರಮುಖ ನಿರ್ಣಯ ತೆಗೆದುಕೊಂಡರು.

ಒಕ್ಕೂಟದ ಅಧ್ಯಕ್ಷ ವಿಜಯ್‌ಕುಮಾರ್ ಟಿ.ಸಿ, ‘ಸಹಕಾರ ಸಚಿವ ಕೆ.ಎಂ. ರಾಜಣ್ಣ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು. ನೋಂದಾಯಿತ ಚಿಟ್ ಫಂಡ್ ಸಂಸ್ಥೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಕೋರಲಾಗುವುದು’ ಎಂದು ಹೇಳಿದರು.

ರೂಪದರ್ಶಿಯರ ಹೆಜ್ಜೆ... ನಗರದ ಅರಮನೆ ಮೈದಾನದಲ್ಲಿ ಕರ್ನಾಟಕ ವಿಡಿಯೊ ಮತ್ತು ಫೋಟೊ ಅಸೋಸಿಯೇಷನ್ ವತಿಯಿಂದ ನಡೆಯುತ್ತಿರುವ ‘ಫೋಟೊ ಟುಡೆ’ ವಿಶೇಷ ಪ್ರದರ್ಶನದ ವೇದಿಕೆಯಲ್ಲಿ ರೂಪದರ್ಶಿಯರು ಶನಿವಾರ ‘ರ್‍ಯಾಂಪ್ ವಾಕ್’ ನಡೆಸಿದರು

ಭಾರತ–ಅಮೆರಿಕ ನೂತನ ಪಯಣ ಆರಂಭ: ಮೋದಿ

ವಾಷಿಂಗ್ಟನ್ (ಪಿಟಿಐ): ಭಾರತ–ಅಮೆರಿಕದ ನೂತನ ಮತ್ತು ವೈಭಯಯುತ ಪಯಣವು ಆರಂಭವಾಗಿದೆ. ಉತ್ತಮ ಜಗತ್ತಿಗಾಗಿ ಎರಡು ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳು ತಮ್ಮ ಬಾಂಧವ್ಯ ವೃದ್ಧಿಸಿಕೊಳ್ಳುತ್ತಿರುವುದನ್ನು ವಿಶ್ವವೇ ನೋಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶುಕ್ರವಾರ ರೋನಾಲ್ಡ್ ರೇಗನ್ ಕಟ್ಟಡ ಮತ್ತು ಅಂತರರಾಷ್ಟ್ರೀಯ ವಾಣಿಜ್ಯ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದ ಅವರು, ‘ಉಭಯ ದೇಶಗಳ ಪಾಲುದಾರಿಕೆಯ ಸಂಪೂರ್ಣ ಸಾಮರ್ಥ್ಯ ಇನ್ನಷ್ಟೇ ಅನಾವರಣಗೊಳ್ಳಬೇಕಿದೆ’ ಎಂದರು.

‘ಭಾರತ ಪ್ರಜಾಪ್ರಭುತ್ವದ ತಾಯಿ ಮತ್ತು ಅಮೆರಿಕ ಆಧುನಿಕ ಪ್ರಜಾಪ್ರಭುತ್ವದ ಚಾಂಪಿಯನ್. ಉಭಯ ದೇಶಗಳು ಒಂದಾಗಿ ಬದುಕು, ಕನಸು ಮತ್ತು ಭವಿಷ್ಯಕ್ಕೆ ರೂಪ ಕೊಡುತ್ತಿವೆ’ ಎಂದು ಬಣ್ಣಿಸಿದರು.

‘21ನೇ ಶತಮಾನದಲ್ಲಿ ಮತ್ತೊಮ್ಮೆ ಜಗತ್ತನ್ನು ಸಮೃದ್ಧಿಗೊಳಿಸುವುದು ಈ ಪಾಲುದಾರಿಕೆಯ ಮುಖ್ಯ ಉದ್ದೇಶ. ಜಾಗತಿಕ ವಿಷಯಗಳಿಗೆ ಸಂಬಂಧಿಸಿದಂತೆ ಉಭಯ ರಾಷ್ಟ್ರಗಳು ಒಮ್ಮತಕ್ಕೆ ಬಂದಿವೆ. ಎರಡು ದೇಶಗಳ ನಡುವಣ ಬಾಂಧವ್ಯ ವೃದ್ಧಿಯಿಂದ ‘ಭಾರತದಲ್ಲಿಯೇ ತಯಾರಿಸಿ ಮತ್ತು ಜಗತ್ತಿಗಾಗಿ ತಯಾರಿಸಿ’ (ಮೇಕ್ ಇನ್ ಇಂಡಿಯಾ ಆ್ಯಂಡ್ ಮೇಕ್ ಫಾರ್ ದಿ ವರ್ಲ್ಡ್) ನೀತಿಗೆ ಮತ್ತಷ್ಟು ಉತ್ತೇಜನ ದೊರಕಲಿದೆ’ ಎಂದು ಹೇಳಿದರು.

ಪ್ರಧಾನಿ ಮೋದಿ, ‘ಭಾರತೀಯರು ಎಚ್–1ಬಿ ವೀಸಾ ನವೀಕರಣಕ್ಕಾಗಿ ಅಮೆರಿಕ ಬಿಟ್ಟು ಬರಬೇಕಾಗಿಲ್ಲ. ಹೊಸ ಯೋಜನೆಯಿಂದ ಭಾರತದ ಐಟಿ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ’ ಎನ್ನುತ್ತಿದ್ದಂತೆಯೇ ನೆರೆದಿದ್ದ ಜನರಿಂದ ಕರತಾಡನ ಕೇಳಿಬಂತು.

‘ಮೋದಿ... ಮೋದಿ...’ ಎಂಬ ಉದ್ಗಾರದ ನಡುವೆಯೇ, ‘ಭಾರತದ ಪ್ರಗತಿಗೆ ಮುಖ್ಯ ಕಾರಣವೇ ಅದರ ಆತ್ಮವಿಶ್ವಾಸ. ನೂರಾರು ವರ್ಷಗಳ ಗುಲಾಮಗಿರಿಯು ದೇಶದ ಆತ್ಮವಿಶ್ವಾಸವನ್ನೇ ಕುಗ್ಗಿಸಿತ್ತು. ಆದರೆ ಈಗ ಆತ್ಮವಿಶ್ವಾಸದಿಂದ ಮೇಲಕ್ಕೆ ಎದ್ದು ನಿಂತಿದೆ. ಹೊಸ ಭಾರತಕ್ಕೆ ತಲುಪಬೇಕಾದ ಹಾದಿಯ ಸ್ಪಷ್ಟತೆ ಇದೆ. ನಿರ್ಧಾರಗಳಲ್ಲಿ ಗೊಂದಲಗಳಿಲ್ಲ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಕೊಳೆಗೇರಿ ಮಕ್ಕಳ ಶಿಕ್ಷಣದತ್ತ ರಾಷ್ಟ್ರೋತ್ಥಾನ ಪರಿಷತ್ ಚಿತ್ತ

ಬೆಂಗಳೂರು: ರಾಜಧಾನಿ ಸೇರಿದಂತೆ ರಾಜ್ಯದ ವಿವಿಧ ನಗರಗಳ ಕೊಳೆಗೇರಿ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಸೇವೆ ಒದಗಿಸಲು ವಿಸ್ತೃತ ಯೋಜನೆ ರೂಪಿಸಿದೆ ಎಂದು ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ.ಕುಮಾರ್ ಹೇಳಿದರು.

ಪರಿಷತ್‌ನ ಕೇಂದ್ರ ಕಾರ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ 200ಕ್ಕೂ ಹೆಚ್ಚು ಕೊಳೆಗೇರಿಗಳ ಮಕ್ಕಳಿಗೆ ಉಚಿತ ಮನೆಪಾಠ ವ್ಯವಸ್ಥೆ ಮಾಡಲಾಗಿದೆ. ಅಲ್ಲಿನ ನಿವಾಸಿಗಳಿಗೆ ಸ್ವಚ್ಛತೆಯ ಅರಿವು ಮೂಡಿಸಲಾಗುತ್ತಿದೆ. ಅವರ ಮಕ್ಕಳ ಶಿಕ್ಷಣಕ್ಕೆ ಇನ್ನಷ್ಟು ಆದ್ಯತೆ ನೀಡಲಾಗುವುದು. ಜೀವನಮಟ್ಟದಲ್ಲಿ ಗುಣಾತ್ಮಕ ಬದಲಾವಣೆ ತರಲಾಗುವುದು. ಅದಕ್ಕಾಗಿ ಕೊಳೆಗೇರಿಗಳ ಸೇವೆ ವಿಸ್ತರಿಸಲಾಗುವುದು ಎಂದರು.

ಪರಿಷತ್ತಿನ ಪ್ರಮುಖರಾದ ಮಲ್ಲೇಪುರಂ ವೆಂಕಟೇಶ್, ನಾ.ದಿನೇಶ್ ಹೆಗ್ಡೆ, ಮಂಜುನಾಥ ಅಜ್ಜಂಪುರ, ಡಾ.ಎಸ್.ಆರ್. ರಾಮಸ್ವಾಮಿ, ಅಜಕ್ಕಳ ಗಿರೀಶ್ ಭಟ್ ಹಾಜರಿದ್ದರು.

‘ಎನ್‌ಇಪಿ ವಿರೋಧಿಸಿ’

ಬೆಂಗಳೂರು: ‘ಮಾನವೀಯತೆ, ಸಾಮಾಜಿಕ ನ್ಯಾಯದ ಸಮಾಜ ನಿರ್ಮಾಣವಾಗಬೇಕಾದರೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು(ಎನ್‌ಇಪಿ) ವಿರೋಧಿಸಿ’ ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಸಲಹೆ ನೀಡಿದರು.

ಪುಸ್ತಕ ಪ್ರೀತಿ ಶನಿವಾರ ಆಯೋಜಿಸಿದ್ದ ತಿಂಗಳ ಮಾತುಕತೆ ಕಾರ್ಯಕ್ರಮದಲ್ಲಿ ‘ಕಣ್ಕಟ್ಟು ಪುಸ್ತಕ ಮತ್ತು ಎನ್‌ಇಪಿ 2020’ರ ಕುರಿತು ನಡೆದ ಚರ್ಚೆ ಸಂವಾದದಲ್ಲಿ ಮಾತನಾಡಿದ ಅವರು, ‘ಎನ್‌ಇಪಿಯಲ್ಲಿರುವ ಅನಾಹುತಗಳಿಂದ ದೇಶದಲ್ಲಿರುವ ಶೇ 80ರಷ್ಟು ಸಾಕ್ಷರತಾ ಪ್ರಮಾಣವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಲಾಗುತ್ತಿದೆ’ ಎಂದರು.

‘ಕಾಂಗ್ರೆಸ್ ಸರ್ಕಾರ ತನ್ನ ಪ್ರಣಾಳಿಕೆಯಲ್ಲಿ ಹೇಳಿದಂತೆ ಎನ್‌ಇಪಿಯನ್ನು ಕಿತ್ತೊಗೆಯಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟ ಅನಿವಾರ್ಯವಾಗಲಿದೆ’ ಎಂದು ಎಚ್ಚರಿಸಿದರು.

ಕಣ್ಕಟ್ಟು ಪುಸ್ತಕದ ಕುರಿತು ಬರಹಗಾರ್ತಿ ವಿನುತಾ ಮಾತನಾಡಿದರು. ಎನ್‌ಇಪಿ ಸಾಧಕ–ಬಾಧಕಗಳ ಬಗ್ಗೆ ಎಚ್.ಡಿ. ಉಮಾಶಂಕರ್, ರವಿಕುಮಾರ್ ಬಾಗಿ, ವಿ.ಎಲ್.ನರಸಿಂಹಮೂರ್ತಿ, ಭೀಮನಗೌಡ ಸುಂಕೇಶ್ವರಹಾಳ ಚರ್ಚಿಸಿದರು. ಶ್ರೀಪಾದ ಭಟ್, ಕೆ.ಎಸ್.ವಿಮಲ ನಿರೂಪಿಸಿದರು.

ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ರಕ್ಷಾ ಫೌಂಡೇಷನ್ ವತಿಯಿಂದ ಮಕ್ಕಳಿಗೆ ನೋಟ್‌ಬುಕ್ ವಿತರಣೆ ಮಾಡಲಾಯಿತು

1.5 ಲಕ್ಷ ನೋಟ್‌ಬುಕ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳಿಗೆ ಜ್ಞಾನಾರ್ಜನೆ ಮುಖ್ಯ. ಜ್ಞಾನ ಪಡೆಯಬೇಕಾದರೆ ಶಿಕ್ಷಣ ಮುಖ್ಯ’ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ರಕ್ಷಾ ಫೌಂಡೇಷನ್ ವತಿಯಿಂದ 10 ಸಾವಿರ ಮಕ್ಕಳಿಗೆ 1.5 ಲಕ್ಷ ನೋಟ್‌ಬುಕ್ ವಿತರಣೆ ಮತ್ತು ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿದರು.

‘ದೇಶ, ಭಾಷೆ ಮತ್ತು ಸಂಸ್ಕೃತಿ, ಸಂಪ್ರದಾಯ ಮರೆಯಬಾರದು. ಮಕ್ಕಳು ರಾಷ್ಟ್ರಭಕ್ತಿ, ದೇಶಪ್ರೇಮ ಬೆಳೆಸಿಕೊಳ್ಳಬೇಕು’ ಎಂದರು.

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ‘ಶಿಕ್ಷಣಕ್ಕೆ ಪ್ರೋತ್ಸಾಹ, ಸಹಕಾರ ನೀಡುವುದು ಮುಖ್ಯ. ಈ ನಿಟ್ಟಿನಲ್ಲಿ ರಕ್ಷಾ ಫೌಂಡೇಷನ್ ದಿಟ್ಟ ಹೆಜ್ಜೆ ಇಟ್ಟಿದೆ’ ಎಂದರು.

ಜಯದೇವ ಸಂಸ್ಥೆಯ ನಿರ್ದೇಶಕ ಡಾ.ಮಂಜುನಾಥ್ ಮಾತನಾಡಿ, ‘ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು. ಮಕ್ಕಳಿಗೆ ಆಸ್ತಿ ಮಾಡುವುದಕ್ಕಿಂತ ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು’ ಎಂದು ಹೇಳಿದರು.

ಶಾಸಕ ಬಿ.ವೈ.ವಿಜಯೇಂದ್ರ, ರಕ್ಷಾ ಫೌಂಡೇಷನ್ ಸಂಸ್ಥಾಪಕ, ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿದರು.

ಆರ್‌ಎಸ್‌ಎಸ್‌ನ ಸಹ ಕಾರ್ಯವಾಹ ತಿಪ್ಪೇಸ್ವಾಮಿ, ಸತೀಶ್ ರೆಡ್ಡಿ, ಮಾಜಿ ಮೇಯರ್ ಎಸ್.ಕೆ.ನಟರಾಜ್, ಪಾಲಿಕೆ ಮಾಜಿ ಸದಸ್ಯರಾದ ಸೋಮಶೇಖರ್, ನಾಗರತ್ನ ರಾಮಮೂರ್ತಿ ಇದ್ದರು.

‘ಡಯಾಲಿಸಿಸ್: 2 ವಾರದಲ್ಲಿ ವೇತನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಯಾಲಿಸಿಸ್ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಬಾಕಿ ವೇತನವನ್ನು ಎರಡು ವಾರದೊಳಗೆ ಪಾವತಿಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಇದರಿಂದಾಗಿ ಸಿಬ್ಬಂದಿ ಮುಷ್ಕರದ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ.

ಇಲ್ಲಿನ ಆರೋಗ್ಯ ಸೌಧದಲ್ಲಿ ಡಯಾಲಿಸಿಸ್ ಕೇಂದ್ರದ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿ, ಸಮಸ್ಯೆಗಳನ್ನು ಆಲಿಸಿದರು.

‘ಕೇಂದ್ರಗಳನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಯು ಸಮಯಕ್ಕೆ ಸರಿಯಾಗಿ ವೇತನ ನೀಡುತ್ತಿಲ್ಲ. ಅಲ್ಲದೇ, ಹೆಚ್ಚುವರಿ ಭತ್ಯೆಗಳು ವರ್ಷದಿಂದ ಬಾಕಿಯಿದೆ. ಭವಿಷ್ಯನಿಧಿಯೂ ಪಾವತಿಯಾಗಿಲ್ಲ. ಸಮಸ್ಯೆ ನಿವಾರಣೆಯಾಗದಿದ್ದರೆ ಕಾರ್ಯ ಸ್ಥಗಿತಗೊಳಿಸಿ, ಮುಷ್ಕರ ಕೈಗೊಳ್ಳುವುದು ಅನಿವಾರ್ಯ’ ಎಂದು ಡಯಾಲಿಸಿಸ್ ಕೇಂದ್ರಗಳ ಪ್ರತಿನಿಧಿಗಳು ತಿಳಿಸಿದರು.

ಇದಕ್ಕೆ ಸ್ಪಂದಿಸಿದ ದಿನೇಶ್ ಗುಂಡೂರಾವ್, ‘ಡಯಾಲಿಸಿಸ್ ಕೇಂದ್ರಗಳಲ್ಲಿ ಸೇವೆ ಸ್ಥಗಿತ ಆಗಬಾರದು. ಸಂಸ್ಥೆಯ ಜತೆಗೆ ಮಾತುಕತೆ ನಡೆಸಿ, ಬಾಕಿ ಇರುವ ವೇತನ ಪಾವತಿಗೆ ಕ್ರಮವಹಿಸಲಾಗುವುದು’ ಎಂದು ಹೇಳಿದರು.

‘ತಲಾ ₹ 2 ಸಾವಿರದಂತೆ ಡಿಸೆಂಬರ್‌ವರೆಗಿನ ಭತ್ಯೆ ಕೊಡಿಸಲಾಗುವುದು. ಮೇ ಮತ್ತು ಜೂನ್ ತಿಂಗಳ ವೇತನ 15 ದಿನದೊಳಗೆ ಪಾವತಿಸಲಾಗುತ್ತದೆ. ಸಂಸ್ಥೆಯಿಂದ ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಒದಗಿಸುವ ಬಗ್ಗೆಯೂ ಮಾತುಕಡೆ ನಡೆಸಲಾಗಿದೆ’ ಎಂದರು.

ಇದರಿಂದಾಗಿ ಮುಷ್ಕರ ನಿರ್ಧಾರ ಕೈಬಿಟ್ಟು, ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವುದಾಗಿ ಡಯಾಲಿಸಿಸ್ ಸಿಬ್ಬಂದಿ ತಿಳಿಸಿದರು.

ನಗರದಲ್ಲಿ ಇಂದು

ಮೇಘಮೈತ್ರಿ 6ನೇ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷ: ಪ್ರಕಾಶ ಗ. ಖಾಡೆ, ಮೆರವಣಿಗೆಗೆ ಚಾಲನೆ: ಪೀರಸಾಬ ನದಾಫ, ಪುಸ್ತಕ ಮಳಿಗೆ ಉದ್ಘಾಟನೆ: ಬಿ. ಶಿವಕುಮಾರ್, ಸಾನ್ನಿಧ್ಯ: ಬಸವಜಯ ಮೃತ್ಯುಂಜಯ ಸ್ವಾಮೀಜಿ, ಶಿವಕುಮಾರ್ ಸ್ವಾಮೀಜಿ, ಆಶಯ ನುಡಿ: ಪ್ರಕಾಶ ನರಗುಂದ, ಪ್ರಾಸ್ತಾವಿಕ ನುಡಿ: ಎಂ. ರಮೇಶ ಕಮತಗಿ, ಉದ್ಘಾಟನೆ: ಎಸ್.ಜಿ. ಸುಶೀಲಮ್ಮ, ಪ್ರಶಸ್ತಿ ಪ್ರದಾನ: ವಿ. ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ: ಸುರೇಶ ಕೋರಕೊಪ್ಪ, ಪುಸ್ತಕ ಬಿಡುಗಡೆ: ವೀರಕಪುತ್ರ ಶ್ರೀನಿವಾಸ್, ಆಯೋಜನೆ: ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘ, ಸ್ಥಳ: ಡಿ. ದೇವರಾಜ ಅರಸು ಸಭಾಂಗಣ, ಚಿತ್ರಕಲಾ ಪರಿಷತ್ತು, ಶಿವಾನಂದ ವೃತ್ತದ ಹತ್ತಿರ, ಬೆಳಿಗ್ಗೆ 9ರಿಂದ

‘ರಿಪ್ಪಲ್ಸ್’ ಸುಸ್ಥಿರ ಬೆಂಗಳೂರಿಗಾಗಿ ಕಲಾ ಕಾರ್ಯಕ್ರಮ: ಆಯೋಜನೆ: ಆರ್ಟ್ ಮ್ಯಾಟರ್ಸ್, ಸ್ಥಳ: ಒರಿಯಾನ್ ಮಾಲ್, ಡಾ. ರಾಜ್ ಕುಮಾರ್ ರಸ್ತೆ, ರಾಜಾಜಿನಗರ, ಬೆಳಿಗ್ಗೆ 9

ಮಾಧವಾನಂದ ಪ್ರಭು ಪುಣ್ಯಸ್ಮರಣೆ, ನೂತನ ಸಚಿವರು, ಶಾಸಕರಿಗೆ ಅಭಿನಂದನೆ: ಸಾನ್ನಿಧ್ಯ: ರೇವಣಸಿದ್ಧೇಶ್ವರ ಸ್ವಾಮೀಜಿ, ಶಿವಕುಮಾರ ನಾಶಿಮಠ ಸ್ವಾಮೀಜಿ, ಗುರುಪಾದ ಸ್ವಾಮೀಜಿ, ತಾರಾಚಂದ ಸ್ವಾಮೀಜಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಉದ್ಘಾಟನೆ: ಕೃಷ್ಣ ಬೈರೇಗೌಡ, ಸನ್ಮಾನಿತರು: ಲಕ್ಷ್ಮಣ ಸವದಿ, ಯಶವಂತ್ರಾಯಗೌಡ ಪಾಟೀಲ, ವಿಠ್ಠಲ ಕಟಕದೊಂಡ, ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಬಿ.ಟಿ. ರುದ್ರೇಶ, ಆಯೋಜನೆ: ಕ್ಷೇತ್ರ ಇಂಚಗೇರಿ ಮಠ, ಸ್ಥಳ: ಬಂಜಾರ ಭವನ, ಕಂಟೋನ್ಮೆಂಟ್ ರೈಲು ನಿಲ್ದಾಣದ ಬಳಿ, ಬೆಳಿಗ್ಗೆ 10

ವಿಎಸ್‌ಕೆ ಮೀಡಿಯಾ ಮಾಧ್ಯಮ ಪ್ರಶಸ್ತಿ ಪ್ರದಾನ: ‘ತಿ.ತಾ ಶರ್ಮ ಪತ್ರಿಕೋದ್ಯಮ ಪ್ರಶಸ್ತಿ’: ರವಿಪ್ರಕಾಶ್ ಎಸ್., ಜಯಪ್ರಕಾಶ್ ಶೆಟ್ಟಿ, ‘ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ’: ಎಂ. ಶ್ರೀನಿವಾಸನ್, ‘ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ’: ಹೆಬ್ರಿ ಬಾಲಕೃಷ್ಣ ಮಲ್ಯ, ಕಾ. ರಮಾನಂದ ಆಚಾರ್ಯ, ‘ವಿ.ಎಸ್.ಕೆ. ಡಿಜಿಟಲ್ ಮಾಧ್ಯಮ ಪ್ರಶಸ್ತಿ’: ಎಂ.ಎಸ್. ರಾಘವೇಂದ್ರ, ಉಪಸ್ಥಿತಿ: ಶ್ರೀನಿವಾಸ್ ಬಳ್ಳಿ, ನಾ. ತಿಪ್ಪೇಸ್ವಾಮಿ, ಆಯೋಜನೆ: ವಿಶ್ವ ಸಂವಾದ ಕೇಂದ್ರ, ಸ್ಥಳ: ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30ರಿಂದ

ಸತೀಶ್ ಚಪ್ಪರಿಕೆ ಅವರ ‘ಘಾಂದ್ರುಕ್’ ಪುಸ್ತಕ ಬಿಡುಗಡೆ: ಶ್ರೀಧರ ಬಳಗಾರ, ಅತಿಥಿ: ರಂಜನಿ ರಾಘವನ್, ಲೇಖಕರೊಂದಿಗೆ ಸಂವಾದ: ಎಂ.ಎಸ್. ಆಶಾದೇವಿ, ಗಿರಿಜಾ ರೈಕ್ವಾ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ರಂಜನಿ

‘ಹಾಡುಬಾ ಕೋಗಿಲೆ’ ಧ್ವನಿಸುರುಳಿ ಬಿಡುಗಡೆ: ಸಾನ್ನಿಧ್ಯ: ರಂಭಾಪುರಿ ವೀರಸೋಮೇಶ್ವರ ಸ್ವಾಮೀಜಿ, ಅಧ್ಯಕ್ಷತೆ: ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಉಪದೇಶಾಮೃತ: ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಪಂಚಾಕ್ಷರಿ ಸ್ವಾಮೀಜಿ, ಅಭಿನವ ಪರ್ವತೇಶ್ವರ ಶಿವಾಚಾರ್ಯ ಸ್ವಾಮೀಜಿ, ಸಿದ್ಧರೇಣುಕ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಎಂ. ಕೃಷ್ಣಪ್ಪ, ಎಸ್. ರಾಜಶೇಖರ, ಗಂಗಾಬಿಕೆ ಮಲ್ಲಿಕಾರ್ಜುನ್, ಬಿ.ಎಲ್. ಸುಜಾತ ರಾಥೋಡ್, ವೇದಮೂರ್ತಿ ರುದ್ರಮುನಿ ಸ್ವಾಮಿ ಹಿರೇಮಠ, ಸ್ಥಳ: ಶಾರದ ಸ್ತ್ರೀ ಸಮಾಜ ಸಭಾಂಗಣ, ಚಾಮರಾಜಪೇಟೆ, ಸಂಜೆ 5

ರಂಭಾಪುರಿ ಶ್ರೀ

ಸಿಜಿಕೆ ಬೀದಿರಂಗ ದಿನ ಆಚರಣೆ, 3 ದಿನದ ಒಡಲಾಳ ನಾಟಕೋತ್ಸವ ಸಿಜಿಕೆ ರಂಗ ಪುರಸ್ಕಾರ: ಉದ್ಘಾಟನೆ: ಸಾಂಬಶಿವ ದಳವಾಯಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿಗಳು: ಎನ್. ಹರಿಕುಮಾರ್, ಜಯಶಂಕರ ಬೆಳಗುಂಬ, ‘ಸಂಜೀವಿನಿ’ ನಾಟಕ ಪ್ರದರ್ಶನ: ರಂಗವರ್ಣ, ಕಥೆ: ವಿಶ್ವಾಸ್ ಕೆ.ಎಂ., ನಿರ್ದೇಶನ: ಕೃಷ್ಣಮೂರ್ತಿ ಕವತ್ತಾರ್, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿ.ಇ.ಎಲ್. ಕಾರ್ಖಾನೆ, ಜಾಲಹಳ್ಳಿ, ಸಂಜೆ 6.30

ಕರ್ನಾಟಕದ ಕಸ್ತೂರಿಬಾ ಯಶೋಧರಮ್ಮ ದಾಸಪ್ಪ ಸಮಾಜರತ್ನ ಪ್ರಶಸ್ತಿ ಪ್ರದಾನ: ಬಿ.ಟಿ. ಲಲಿತಾ ನಾಯಕ್, ಪ್ರಶಸ್ತಿ ಪುರಸ್ಕೃತರು: ಕರೆಮ್ಮ ಜಿ. ನಾಯಕ್, ಅಧ್ಯಕ್ಷತೆ: ಪುಸ್ತಕಮನೆ ಹರಿಹರಪ್ರಿಯ, ಅತಿಥಿ: ಶಿವಾನಂದ ಬ. ಸಂಗಾಪೂರ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10.45

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಬಿಬಿಎಂಪಿ ಪಿ.ಯು ಕಾಲೇಜಿನ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭ: ಅತಿಥಿಗಳು: ಸಯ್ಯದ್ ಅಶ್ರಫ್, ಆನಂದ್, ಆಯೋಜನೆ ಮತ್ತು ಸ್ಥಳ: ಮಸ್ಜಿದ್–ತಾಹ ಬೈತುಲ್ ಮಾಲ್ ಕಮಿಟಿ, ಮತ್ತೀಕೆರೆ, ಬೆಳಿಗ್ಗೆ 11

ಎಂ.ಎಚ್. ಕೃಷ್ಣ ಸ್ಮಾರಕ ದತ್ತಿ ಉಪನ್ಯಾಸ, ಎಸ್. ಶ್ರೀಕಂಠಯ್ಯ ಸ್ಮಾರಕ ದತ್ತಿ ಉಪನ್ಯಾಸ: ‘ಹಂಪಿಯಲ್ಲಿನ ಪುರಾತತ್ವ ಉತ್ಖನನಗಳು ಅಂದು ಇಂದು ಮತ್ತು ಮುಂದು ಹಾಗೂ ಕನಗನಹಳ್ಳಿಯ ಮಹಾಸ್ತೂಪದ ಒಂದು ಇಣುಕುನೋಟ’: ಟಿ.ಎಂ. ಕೇಶವ, ‘ಕಲಬುರಗಿ ಜಿಲ್ಲೆಯ ಕೆಲವು ರಾಷ್ಟ್ರಕೂಟ ದೇವಾಲಯಗಳು’: ದೇವರಕೊಂಡಾರೆಡ್ಡಿ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಉಷಾ ಮೂಲಿ ಅವರ ‘ಕಥೆ–ರಂಗೋಲಿ’ ಪುಸ್ತಕ ಬಿಡುಗಡೆ: ಕೆ. ಗೋಕುಲನಾಥ, ಉಪನ್ಯಾಸ: ವಾಸುದೇವ ಅಗ್ನಿಹೋತ್ರಿ, ಉಪಸ್ಥಿತಿ: ಉಷಾ ಮೂಲಿ, ಅಧ್ಯಕ್ಷತೆ: ಮಹಾಲಕ್ಷ್ಮಿ ಎಸ್., ಆಯೋಜನೆ: ದಾಸಧೇನು ಟ್ರಸ್ಟ್, ಸ್ಥಳ: ವರಸಿದ್ಧಿ ವಿನಾಯಕ ದೇಗುಲದ ಸಭಾಂಗಣ, ಎಚ್.ಎಸ್.ಆರ್. ಬಡಾವಣೆ, ಸೆಕ್ಟರ್–1, ಬೆಳಿಗ್ಗೆ 11.10

ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ ಅವರ ‘ಸಹಸ್ರ ದೇವರ ನಾಮಗಳು’, ‘33 ಹರಿದಾಸರ 33 ದೇವರನಾಮಗಳು’ ದಾಸಸಾಹಿತ್ಯ ಪುಸ್ತಕಗಳ ಬಿಡುಗಡೆ: ಸುಜಯನಿಧಿತೀರ್ಥ ಶ್ರೀಪಾದ, ಅತಿಥಿಗಳು: ಅರಳುಮಲ್ಲಿಗೆ ಪಾರ್ಥ ಸಾರಥಿ, ಹ.ರಾ. ನಾಗರಾಜಾಚಾರ್ಯರು, ಆಯೋಜನೆ: ದಾಸವಾಣಿ ಕರ್ನಾಟಕ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಮತ್ತಿಕೆರೆ, ಬೆಳಿಗ್ಗೆ 11.30

‘ಕರಾಳ ನೆನಪಿನ ಕಹಿನೆನಪುಗಳ ಅವಲೋಕನ, ಜಯಪ್ರಕಾಶ್ ನಾರಾಯಣ್, ಜಾರ್ಜ್ ಫರ್ನಾಂಡಿಸ್ ಭಾವಚಿತ್ರಕ್ಕೆ ಪುಷ್ಪ ನಮನ: ಉಪಸ್ಥಿತಿ: ಕೆ.ಎಂ. ಫಾಲಾಕ್ಷ, ಆಯೋಜನೆ: ಜನತಾ ಪಾರ್ಟಿ, ಸ್ಥಳ: ಜನ ಪಾರ್ಟಿ ಕೇಂದ್ರ ಕಚೇರಿ, ಶೇಷಾದ್ರಿಪುರ ಮುಖ್ಯರಸ್ತೆ, ಬೆಳಿಗ್ಗೆ 11.30

ಬೆಳ್ಳಿ ಹಬ್ಬ ಸಂಭ್ರಮ, ಪ್ರಶಸ್ತಿ ಪ್ರದಾನ: ಅತಿಥಿಗಳು: ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಕೆ.ಜೆ. ಜಾರ್ಜ್, ಅಧ್ಯಕ್ಷತೆ: ಪೀಟರ್ ಮಚಾಡೋ, ಆಯೋಜನೆ: ಫೆಡರೇಷನ್ ಆಫ್ ಕೊಂಕಣಿ ಕ್ಯಾಥೋಲಿಕ್ ಅಸೋಸಿಯೇಷನ್ಸ್, ಪ್ರಶಸ್ತಿ ಪುರಸ್ಕೃತರು: ಕಿರಣ ಕಮಲ್ ಪ್ರಸಾದ್, ಸ್ಟೇಫನ್ ಕ್ವಾಡ್ರೋಸ್, ಮೈಕಲ್ ಡಿಸೋಜ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಮಧ್ಯಾಹ್ನ 3.30

ಆಲ್ ಇಂಡಿಯಾ ವುಮೆನ್ ಅಚೀವರ್ಸ್ ಅವಾರ್ಡ್ಸ್–2023: ಉದ್ಘಾಟನೆ: ತೇಜಸ್ವಿ ಸೂರ್ಯ, ಪ್ರಿಯಾಂಕ ಉಪೇಂದ್ರ, ಅನುಪ್ರಭಾಕರ್ ಮುಖರ್ಜಿ, ಜಗ್ಗೇಶ್, ಪರಿಮಳ ಜಗ್ಗೇಶ್, ಅಮೋಘವರ್ಷ, ಆಯೋಜನೆ: ಟೈಲ್ ಮೀಡಿಯಾ, ಸ್ಥಳ: ಗಾಯನ ಸಮಾಜ, ಮಲ್ಲೇಶ್ವರ, ಸಂಜೆ 4

ಪ್ರಿಯಾಂಕ

‘ಸಂಗೀತ ಸಂಧ್ಯಾ’ ವೃದ್ಧರಿಗಾಗಿ ವಿಶೇಷ ಕಾರ್ಯಕ್ರಮ: ಉದ್ಘಾಟನೆ: ಶ್ರೀನಿವಾಸ ಪ್ರಭು, ಸಂತೋಷ್ ಹೆಗ್ಡೆ, ಕಲಾವಿದರು: ವಾಗೀಶ್ ಭಟ್, ಸತೀಶ್ ಹಂಪಿಹೊಳಿ, ನಾಗೇಂದ್ರ ರಾಣಾಪೂರ್, ಆಶಿಶ್ ನಾಯಕ್, ಅಮೃತೇಶ ಕುಲಕರ್ಣಿ, ಉಮಾ ಕುಲಕರ್ಣಿ, ರಾಮನಾಥ್ ಪೈ, ಎಂ.ಆರ್. ಮಾಧವಮೂರ್ತಿ, ನಾಗಶಯನ ಬಿ., ವರುಣ್ ಹೆಗಡೆ, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಸ್ಥಳ: ಓಂಕಾರ್ ಚಾರಿಟಬಲ್ ಫೌಂಡೇಷನ್, ನಾಗರಬಾವಿ, ಸಂಜೆ 4

ಸಂತೋಷ್ ಹೆಗ್ಡೆ

ಜೀವನ್ಮುಖಿ ಪತ್ರಿಕೆಯ 13ನೇ ವಾರ್ಷಿಕೋತ್ಸವ ಜೀವನ್ಮುಖಿ ವಾರ್ಷಿಕ ಪ್ರಶಸ್ತಿ ಪ್ರದಾನ, ವಿಶೇಷ ಸ್ಮರಣ ಸಂಚಿಕೆ ಬಿಡುಗಡೆ, ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ಪ್ರದಾನ: ಉದ್ಘಾಟನೆ: ಎ.ಜೆ. ಸದಾಶಿವ, ಪ್ರಶಸ್ತಿ ಪ್ರದಾನ: ಪಿ.ಜಿ.ಆರ್ ಸಿಂಧ್ಯ, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಪುರಸ್ಕೃತರು: ದೊಡ್ಡರಂಗೇಗೌಡ, ವರುಣ್ ರಂಗಸ್ವಾಮಿ, ಲಕ್ಷ್ಮಣ ನಿಂಬರಗಿ, ಕೆ. ಬಾಗೇಗೌಡ, ಆಯೋಜನೆ: ಜೀವನ್ಮುಖಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4ರಿಂದ

ಗೋಪಾಲಕೃಷ್ಣ ನಾಯರಿ ಸಂಸ್ಮರಣೆ: ಉಪಸ್ಥಿತಿ: ನಿರಂಜ್ ಆರಾಧ್ಯ, ಸಿದ್ದನಗೌಡ ಪಾಟೀಲ್, ಸೂತ್ರಂ ಉಮೇಶ್, ನಾ. ಸೋಮೇಶ್ವರ್, ರಾಜಪ್ಪ ದಳವಾಯಿ, ರಮೇಶಚಂದ್ರ ದತ್ತ, ತಿರುಮಲ ರಾವ್, ಆರ್. ಶೋಭ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು ಆವರಣ, ಬಸವನಗುಡಿ, ಸಂಜೆ 4.30

ವಿಎಲ್‌ಎನ್ ಪ್ರಬುದ್ಧಾಲಯದ 15ನೇ ವಾರ್ಷಿಕೋತ್ಸವ, ‘ವಿಎಲ್‌ಎನ್ ನಿರ್ಮಾಣ್ ಹಿರಿಯ ನಾಗರಿಕರ ಅಜೀವ–ಸಾಧನಾ ಪ್ರಶಸ್ತಿ–2023’ ಪ್ರದಾನ: ಅಧ್ಯಕ್ಷತೆ: ಬಿ.ಎಸ್. ಪಾಟೀಲ್, ಅತಿಥಿ: ಶ್ರೀನಾಥ್, ಉಪಸ್ಥಿತಿ: ಎಸ್.ಎಂ. ಪಾಟೀಲ್, ಪ್ರಶಸ್ತಿ ಪುರಸ್ಕೃತರು: ತಾರಾ ಸಿ. ರಂಗನ್, ಬಿ.ವಿ. ತಿಮ್ಮಪ್ಪ, ರಾಧಾ ಶ್ರೀನಾಥ್, ಪ್ರನಬ್ ಕುಮಾರ್ ಬಸು, ರುಕ್ಮಿಣಿ ಶೇಷಾದ್ರಿ, ಆಯೋಜನೆ: ನವ ನಿರ್ಮಾಣ್–ವಿಎಲ್‌ಎನ್ ಪ್ರಬುದ್ಧಲಾಯ ಮತ್ತು ಆಯುರ್ಧಾಮ, ಸ್ಥಳ: ಪುರಂದರ ಮಂಟಪ, ಪ್ರಬುದ್ಧಾಲಯ ಕ್ಯಾಂಪಸ್, ನಿಸರ್ಗ ಬಡಾವಣೆ, ಬನ್ನೇರುಘಟ್ಟ, ಸಂಜೆ 5



ಶ್ರೀನಾಥ್

ಭಕ್ತಿ ಸಂಗೀತ: ಗಾಯನ: ಚಿ. ದತ್ತಪ್ರಸಾದ್ ಅವಧೂತ್, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ನಾಗೇಂದ್ರ ಪ್ರಸಾದ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5

ಸಂಗೀತ ಕಛೇರಿ: ಗಾಯನ: ಕೃತಿ ಭಟ್, ಪಿಟೀಲು: ಸಿಂಧು ಸುಚೇತನ್, ಮೃದಂಗ: ಬಿ.ಎಸ್. ಪ್ರಶಾಂತ್, ಆಯೋಜನೆ: ಬಿ.ಟಿ.ಎಂ. ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಜೆ.ಪಿ. ನಗರ, ಸಂಜೆ 5.30

ಅ ‘ಸಾಮಾನ್ಯ’ ಗೀತೆ: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಎಂ.ಜಿ. ಜನಾರ್ದನ ರಾವ್, ಶ್ಲೋಕ: ಅಕ್ಷಯ್ ಎಂ. ಭಾರದ್ವಾಜ್, ಶ್ಲೋಕಾರ್ಥ: ನವ್ಯ ಪಿ., ವಾಚನ: ಜಿ.ಎನ್. ನಾರಾಯಣ್, ಗಾಯನ: ಪ್ರತಿಭಾ ನಂದನ್, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯ ಆವರಣ, ದೊಡ್ಡಬೊಮ್ಮಸಂದ್ರ, ಸಂಜೆ 5.30

‘ಪೋಯಟ್ ಇನ್ ಫೋಕಸ್’: ಭಾಷಣಕಾರರು: ಚಾರು ಪ್ರಿಯನ್, ವಿನೋಧಿನಿ ಚಿನ್ನಸ್ವಾಮಿ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6

ಶಾಸಕರಿಗೆ ತರಬೇತಿ: ಗುರುರಾಜ ಕರಜಗಿ, ರವಿಶಂಕರ ಗುರೂಜಿ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಶಾಸಕರಿಗೆ ಸೋಮವಾರದಿಂದ (ಜೂನ್ 26) ಮೂರು ದಿನ ತರಬೇತಿ ಶಿಬಿರ ನಡೆಯಲಿದ್ದು, ಶಿಬಿರದ ಆಮಂತ್ರಣ ಪತ್ರದಲ್ಲಿ ಗುರುರಾಜ ಕರಜಗಿ ಮತ್ತು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಹೆಸರು ಇಲ್ಲ.

ಶಿಬಿರದಲ್ಲಿ ಸ್ಫೂರ್ತಿದಾಯಕ ಭಾಷಣ ಮಾಡಲು ಈ ಇಬ್ಬರು ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಜಮಾತೆ ಇಸ್ಲಾಮಿ ಹಿಂದ್‌ನ ಮಹಮ್ಮದ್ ಕುಂಞ, ರಾಜಯೋಗಿನಿ ಆಶಾ ದೀದಿ ಅವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದರು. ಆದರೆ, ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ವಲಯದಿಂದ ಆಕ್ಷೇಪ ವ್ಯಕ್ತವಾಗಿತ್ತು.

ನೆಲಮಂಗಲದಲ್ಲಿರುವ ಕ್ಷೇಮವನದಲ್ಲಿ (ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗಿಕ್ ಸೈನ್ಸ್) ಶಿಬಿರ ಆಯೋಜಿಸಲಾಗಿದೆ.

₹ 300 ಕೋಟಿ ಆಸ್ತಿಗಾಗಿ ತಂದೆಯ ಕೊಲೆಗೆ ಸುಪಾರಿ ನೀಡಿದ್ದ ಆರೋಪಿ

ಮಗು ಅಪಹರಿಸಿ ಸಿಕ್ಕಿಬಿದ್ದ ಉದ್ಯಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಜೀವನದಲ್ಲಿದ್ದ ಮಹಿಳೆಯ ಮಗುವನ್ನು ಅಪಹರಣ ಮಾಡಿದ್ದ ಪ್ರಕರಣದಲ್ಲಿ ಆರೋಪಿ ಹರಿಕೃಷ್ಣನನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಹರಿಕೃಷ್ಣ

‘ಬಳ್ಳಾರಿಯ ಉದ್ಯಮಿ ಹರಿಕೃಷ್ಣ, ಜೂನ್ 16ರಂದು ಮಗು ಅಪಹರಿಸಿದ್ದ. ಮಗುವಿನ ತಾಯಿ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಯನ್ನು ಗೋವಾದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಮಗು ಸುರಕ್ಷಿತವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಧಿತ ಹರಿಕೃಷ್ಣ, ಅಪರಾಧ ಹಿನ್ನೆಲೆಯುಳ್ಳವ. ₹ 300 ಕೋಟಿ ಆಸ್ತಿಗಾಗಿ ತನ್ನ ತಂದೆ ಸಿಂಗನಮಲ ಮಾಧವ ಅವರನ್ನು 2020ರಲ್ಲಿ ಕೊಲೆ ಮಾಡಿಸಿದ್ದ. ಕೊಲೆಗೆ ಸುಪಾರಿ ನೀಡಿದ್ದ ಆರೋಪದಡಿ ಹರಿಕೃಷ್ಣನನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದರು.’

‘ಕೆಲ ತಿಂಗಳು ಜೈಲಿನಲ್ಲಿದ್ದ ಆರೋಪಿ ಜಾಮೀನು ಮೇಲೆ ಹೊರ ಬಂದಿದ್ದ. ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ. ಅದರ ನಡುವೆಯೇ ಆರೋಪಿ ಮಗುವನ್ನು ಅಪಹರಿಸಿ ಸಿಕ್ಕಿಬಿದ್ದಿದ್ದಾನೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಂಟು ವರ್ಷಗಳಿಂದ ಸಹಜೀವನ: ‘ದೂರುದಾರ ಮಹಿಳೆ ಹಾಗೂ ಹರಿಕೃಷ್ಣ, ಪರಸ್ಪರ ಪ್ರೀತಿಸುತ್ತಿದ್ದರು. ಇಬ್ಬರೂ 8 ವರ್ಷಗಳಿಂದ ಸಹಜೀವನದಲ್ಲಿದ್ದರು. ಮದುವೆಯಾಗಿರಲಿಲ್ಲ. ಇವರಿಗೆ ಐದು ವರ್ಷಗಳ ಮಗನಿದ್ದಾನೆ. ಇತ್ತೀಚೆಗೆ ಇಬ್ಬರ ನಡುವೆ ಜಗಳ ಶುರುವಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಗು ನನಗೆ ಕೊಡು. ನಾನು ಬೇರೆಡೆ ಹೋಗುತ್ತೇನೆ’ ಎಂದು ಹರಿಕೃಷ್ಣ ಹೇಳಿದ್ದ. ಅದಕ್ಕೆ ಒಪ್ಪದ ಮಹಿಳೆ, ಮಗು ತಮಗೆ ಬೇಕೆಂದು ಪಟ್ಟು ಹಿಡಿದಿದ್ದರು. ಮಗುವಿನ ವಿಚಾರವಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ತಾಯಿಗೆ ಮಗು ಒಪ್ಪಿಸುವಂತೆ ನ್ಯಾಯಾಲಯ ಆದೇಶ ನೀಡಿತ್ತು. ಸಿಟ್ಟಾಗಿದ್ದ ಆರೋಪಿ, ಮಗು ಅಪಹರಿಸಲು ಸಂಚು ರೂಪಿಸಿದ್ದ. ತಾಯಿ ಶಾಲೆಗೆ ಕರೆದೊಯ್ಯುವ ವೇಳೆ ಹಿಂಬಾಲಿಸಿ ಮಗುವನ್ನ ಅಪಹರಿಸಿದ್ದ’ ಎಂದು ಹೇಳಿವೆ.

ಮುಜರಾಯಿ ದೇವಸ್ಥಾನಗಳಲ್ಲಿ 65 ವರ್ಷ ಮೇಲ್ಪಟ್ಟವರಿಗೆ ನೇರ ವಿಶೇಷ ದರ್ಶನ ವ್ಯವಸ್ಥೆ ಅನುಷ್ಠಾನ ಕಾರ್ಯಕ್ರಮಕ್ಕೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ನಗರದ ಬಸವನಗುಡಿಯ ದೊಡ್ಡ ಗಣಪತಿ ದೇವಸ್ಥಾನದಲ್ಲಿ ಶನಿವಾರ ಚಾಲನೆ ನೀಡಿ, ಕಾಂಗ್ರೆಸ್ ಮುಖಂಡ ಕೆ.ಚಂದ್ರಶೇಖರ್ ಮತ್ತು ಪ್ರೊ.ಕೆ.ಇ ರಾಧಾಕೃಷ್ಣ ಅವರೊಂದಿಗೆ ಚರ್ಚಿಸಿದರು. – ಪ್ರಜಾವಾಣಿ ಚಿತ್ರ/ರಂಜು ಪಿ

ಪಾಳುಬಿದ್ದ ಕಟ್ಟಡದಲ್ಲಿ ಮೃತದೇಹ ಪತ್ತೆ

ಬೆಂಗಳೂರು: ಗಾಂಧಿನಗರ 6ನೇ ಅಡ್ಡರಸ್ತೆಯಲ್ಲಿರುವ ಪಾಳುಬಿದ್ದ ಕಟ್ಟಡದಲ್ಲಿ ಮೃತದೇಹ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

‘ಜೂನ್ 19ರಂದು ಕಟ್ಟಡದಿಂದ ದುರ್ವಾಸನೆ ಬರುತ್ತಿತ್ತು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಯಿತು. ಸ್ಥಳದಲ್ಲಿರುವ ಗೋಡೆ ಮೇಲೆ ರಕ್ತದ ಕಲೆಗಳಿವೆ. ಮೃತನ ಹೆಸರು ಗೊತ್ತಾಗಿಲ್ಲ. ಇದೊಂದು ಕೊಲೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿವೆ.

ಲಿಫ್ಟ್‌ನಲ್ಲಿ ಬಾಲಕಿ ಮೇಲೆ ದೌರ್ಜನ್ಯ: ಡೆಲಿವರಿ ಬಾಯ್ ಬಂಧನ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಲಿಫ್ಟ್‌ನಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಕೃತ್ಯ ಎಸಗಿರುವ ಆರೋಪದಡಿ ಚೇತನ್‌ನನ್ನು (30) ಪೊಲೀಸರು ಬಂಧಿಸಿದ್ದಾರೆ.

‘ಜರಗನಹಳ್ಳಿ ನಿವಾಸಿ ಚೇತನ್, ಆಹಾರ ಪೂರೈಕೆ ಕಂಪನಿಯೊಂದರ ಡೆಲಿವರಿ ಬಾಯ್. ಜೂನ್ 22ರ ಸಂಜೆ ನಡೆದಿರುವ ಘಟನೆ ಬಗ್ಗೆ ಬಾಲಕಿಯ ಪೋಷಕರು ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೋಷಕರ ಜೊತೆ ವಾಸವಿರುವ 12 ವರ್ಷದ ಬಾಲಕಿ, ನಿತ್ಯ ಸಂಜೆ 13ನೇ ಮಹಡಿಯಲ್ಲಿರುವ ಶಿಕ್ಷಕರೊಬ್ಬರ ಮನೆಗೆ ಟ್ಯೂಶನ್‌ಗೆ ಹೋಗುತ್ತಿದ್ದಳು. ಅಂದು ಟ್ಯೂಶನ್‌ಗೆ ಹೋಗಲು ಲಿಫ್ಟ್ ಹತ್ತಿದ್ದಳು. ಅದೇ ವೇಳೆ ಆಹಾರ ಪೊಟ್ಟಣ ಸಮೇತ ಸ್ಥಳಕ್ಕೆ ಬಂದಿದ್ದ ಚೇತನ್, 10ನೇ ಮಹಡಿಗೆ ಹೋಗಲು ಲಿಫ್ಟ್‌ಗೆ ಹತ್ತಿದ್ದ.’ ಲಿಫ್ಟ್‌ನಲ್ಲಿ ಬಾಲಕಿ ಮೇಲೆ ದೌರ್ಜನ್ಯ ಎಸಗಿದ್ದ. ಬಾಲಕಿ, ಪೋಷಕರಿಗೆ ವಿಷಯ ತಿಳಿಸಿದ್ದಳು. ಪೋಷಕರು, ಭದ್ರತಾ ಸಿಬ್ಬಂದಿ, ಆರೋಪಿಯನ್ನು ಹಿಡಿದು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಗೆ ಒಪ್ಪಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದ್ಯಾರ್ಥಿ ಮೇಲೆ ಲಾಂಗ್‌ನಿಂದ ಹಲ್ಲೆ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯ ಕಾಲೇಜೊಂದರ ಎದುರು ವಿದ್ಯಾರ್ಥಿ ಮೇಲೆ ಲಾಂಗ್‌ನಿಂದ ಹಲ್ಲೆ ಮಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಘಟನೆ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

‘ಜೂನ್ 5ರಂದು ನಡೆದಿರುವ ಘಟನೆಯ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ. ಹಲ್ಲೆಗೀಡಾಗಿರುವ ವಿದ್ಯಾರ್ಥಿ ದರ್ಶನ್ ಅವರಿಂದ ದೂರು ಪಡೆದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 10 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹುಡುಗಿ ವಿಚಾರವಾಗಿ ದರ್ಶನ್ ಹಾಗೂ ಆರೋಪಿಗಳ ನಡುವೆ ಆಗಾಗ ಗಲಾಟೆ ಆಗುತ್ತಿತ್ತು. ಕಾಲೇಜು ಎದುರು ದರ್ಶನ್ ಜೊತೆ ಜಗಳ ತೆಗೆದಿದ್ದ ಆರೋಪಿಗಳು, ಲಾಂಗ್‌ನಿಂದ ಹೊಡೆದಿದ್ದರು. ಗಾಯಗೊಂಡಿದ್ದ ಆತ ಚಿಕಿತ್ಸೆ ಪಡೆದುಕೊಂಡಿದ್ದಾರೆ. ‘ಹುಡುಗಿ ಯಾರು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಹೆಚ್ಚಿನ ಮಾಹಿತಿ ನೀಡಲು ದೂರುದಾರರು ನಿರಾಕರಿಸುತ್ತಿದ್ದಾರೆ’ ಎಂದು ಹೇಳಿವೆ.

ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಆಟೊ ಚಾಲಕ ಮೋಹನ್ ಕುಮಾರ್ (37) ಆತ್ಮಹತ್ಯೆಗೆ ಯತ್ನಿಸಿದ್ದು, ಅಸ್ವಸ್ಥಗೊಂಡಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೋಹನ್, ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದು, ‘ಮಕ್ಕಳ ಶಾಲೆ ಶುಲ್ಕ ಭರಿಸಲು ಮೋಹನ್ ಹಣ ಹೊಂದಿಸುತ್ತಿದ್ದರು. ಆದರೆ, ಹಣ ಸಿಕ್ಕಿರಲಿಲ್ಲ. ತಿಗಣೆ ಔಷಧಿ ಕುಡಿದಿದ್ದಾರೆ’ ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿ ದೃಶ್ಯ ಸೆರೆ

ಬುದ್ಧಿಮಾಂದ್ಯೆ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗದ ಠಾಣೆಯೊಂದರ ವ್ಯಾಪ್ತಿಯಲ್ಲಿ ಬುದ್ಧಿಮಾಂದ್ಯ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಎಫ್‌ಐಆರ್ ದಾಖಲಾಗಿದೆ.

‘18 ವರ್ಷ ವಯಸ್ಸಿನ ಬುದ್ಧಿಮಾಂದ್ಯ ಯುವತಿ, ತಾಯಿ ಹಾಗೂ ಅಣ್ಣ-ತಮ್ಮನ ಜೊತೆ ವಾಸವಿದ್ದಾರೆ. ಇತ್ತೀಚೆಗೆ ತಾಯಿ ಹಾಗೂ ಸಹೋದರರು ಮನೆಯಿಂದ ಹೊರಗೆ ಹೋಗಿದ್ದರು. ಇದೇ ವೇಳೆ ಮನೆಗೆ ನುಗ್ಗಿದ್ದ ಆರೋಪಿ, ಲೈಂಗಿಕ ದೌರ್ಜನ್ಯ ಎಸಗಿ ಪರಾರಿಯಾಗಿರುವುದಾಗಿ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಾಯಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪರಾರಿಯಾಗುತ್ತಿದ್ದ ವೇಳೆ ಆರೋಪಿಯ ದೃಶ್ಯ ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದೇ ದೃಶ್ಯ ಆಧರಿಸಿ ಆತನನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

‘ಜೂನ್ 22ರಂದು ತಾಯಿ ಹಾಗೂ ಅಣ್ಣ, ಕೆಲಸಕ್ಕೆ ಹೋಗಿದ್ದರು. ತಮ್ಮ, ಶಾಲೆಗೆ ಹೋಗಿದ್ದ. ಈ ವೇಳೆ ಯುವತಿ ಮಾತ್ರ ಮನೆಯಲ್ಲಿದ್ದರು. ಕೆಲಸ ಮುಗಿಸಿ ತಾಯಿ, ಮಧ್ಯಾಹ್ನ ಮನೆಗೆ ವಾಪಸು ಬಂದಿದ್ದರು. ಈ ವೇಳೆ ಯುವತಿ ನೆಲದ ಮೇಲೆ ಬಿದ್ದಿದ್ದಳು. ಮುಖದ ಮೇಲೆ ಗಾಯಗಳಾಗಿ ರಕ್ತ ಸೋರುತ್ತಿತ್ತು. ಯುವತಿ ಪಕ್ಕದಲ್ಲಿ ಒಳ ಉಡುಪು ಬಿದ್ದಿತ್ತು’ ಎಂದು ಮೂಲಗಳು ಹೇಳಿವೆ.

‘ಬಾಲಕಿಗೆ ಮಾತನಾಡಲು ಬರುವುದಿಲ್ಲ. ಹೀಗಾಗಿ, ಏನಾಯಿತೆಂಬುದು ತಾಯಿಗೆ ಆರಂಭದಲ್ಲಿ ಗೊತ್ತಾಗಿರಲಿಲ್ಲ. ಮನೆ ಸಮೀಪದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗಿತ್ತು. 25 ವರ್ಷದ ಯುವಕನೊಬ್ಬ ಮನೆಯೊಳಗೆ ನುಗ್ಗಿ, ಕೆಲ ಹೊತ್ತಿನ ನಂತರ ಹೊರಬಂದು ಓಡಿ ಹೋಗಿದ್ದ ದೃಶ್ಯ ಸೆರೆಯಾಗಿತ್ತು. ಅದೇ ದೃಶ್ಯ ಆಧರಿಸಿ ಠಾಣೆಗೆ ದೂರು ನೀಡಿರುವ ತಾಯಿ, ತಮ್ಮ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದಾಗಿ ಹೇಳಿದ್ದಾರೆ. ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು, ವರದಿಗಾಗಿ ಕಾಯುತ್ತಿದ್ದೇವೆ’ ಎಂದು ತಿಳಿಸಿವೆ.

ಎರಡನೇ ಬಾರಿ ಘಟನೆ: ‘ಬುದ್ಧಿಮಾಂದ್ಯ ಯುವತಿ ಮೇಲೆ ಈ ಹಿಂದೆಯೂ ವ್ಯಕ್ತಿಯೊಬ್ಬ ಲೈಂಗಿಕ ದೌರ್ಜನ್ಯ ಎಸಗಲು ಯತ್ನಿಸಿದ್ದ. ಅದರ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಇದೀಗ ಪುನಃ, ಯುವತಿ ಮೇಲೆ ದೌರ್ಜನ್ಯ ನಡೆದಿರುವ ಬಗ್ಗೆ ದೂರು ದಾಖಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಲೈಂಗಿಕ ಕ್ರಿಯೆಗೆ ಒಪ್ಪದಿದ್ದಕ್ಕೆ ಹಲ್ಲೆ

ಬೆಂಗಳೂರು: ಲೈಂಗಿಕ ಕ್ರಿಯೆಗೆ ಒಪ್ಪಲಿಲ್ಲವೆಂಬ ಕಾರಣಕ್ಕೆ ಲೈಂಗಿಕ ಕಾರ್ಯಕರ್ತೆಯೊಬ್ಬರ ಮೇಲೆ ಮೂವರು ಯುವಕರು ಹಲ್ಲೆ ಮಾಡಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೂನ್ 15ರಂದು ನಡೆದಿರುವ ಘಟನೆ ಬಗ್ಗೆ 32 ವರ್ಷ ವಯಸ್ಸಿನ ಮಹಿಳೆ ದೂರು ನೀಡಿದ್ದಾರೆ. ಮೂವರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: ‘ಪತಿಯಿಂದ ದೂರವಾಗಿ ಇಬ್ಬರು ಮಕ್ಕಳ ಜೊತೆ ವಾಸವಿದ್ದೇನೆ. ಜೀವನ ಸಾಗಿಸಲು ಲೈಂಗಿಕ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ನಿತ್ಯವೂ ಮೆಜೆಸ್ಟಿಕ್ ಬಸ್ ನಿಲ್ದಾಣ ಬಳಿ ಹೋಗಿ ಗ್ರಾಹಕರಿಗಾಗಿ ಕಾಯುತ್ತಿರುತ್ತೇನೆ’ ಎಂದು ಮಹಿಳೆ ದೂರಿನಲ್ಲಿ ಹೇಳಿದ್ದಾರೆ.

‘ಅಂದು ಸಂಜೆ 7 ಗಂಟೆಗೆ ನನ್ನ ಬಳಿ ಬಂದಿದ್ದ ಮೂವರು ಯುವಕರು, ಲೈಂಗಿಕ ಕ್ರಿಯೆಗೆ ಬರುವಂತೆ ಕರೆದಿದ್ದರು. ಮೂವರೂ ಚಿಕ್ಕವರಿದ್ದರು. ಹೀಗಾಗಿ, ಬರುವುದಿಲ್ಲವೆಂದು ಹೇಳಿದ್ದೆ. ನಂತರ, ಅವರು ಹೊರಟು ಹೋಗಿದ್ದರು.’

‘ರಾತ್ರಿ 8 ಗಂಟೆಗೆ ಪುನಃ ಬಂದಿದ್ದ ಯುವಕರು, ನನ್ನ ಪಕ್ಕದಲ್ಲಿದ್ದ ಮಹಿಳೆಯರ ಜೊತೆ ಮಾತನಾಡುತ್ತಿದ್ದರು. ಅವರನ್ನೂ ಲೈಂಗಿಕ ಕ್ರಿಯೆಗೆ ಕರೆದಿದ್ದರು. ಚಿಕ್ಕವರೆಂಬ ಕಾರಣಕ್ಕೆ ಅವರು ಸಹ ಹೋಗಲು ನಿರಾಕರಿಸಿದ್ದರು. ಅಷ್ಟಕ್ಕೆ ಕೋಪಗೊಂಡಿದ್ದ ಆರೋಪಿಗಳು, ಕೂಗಾಡುತ್ತಿದ್ದರು. ನಾನು ಸ್ಥಳಕ್ಕೆ ಹೋಗುತ್ತಿದ್ದಂತೆ ಜಗಳ ತೆಗೆದರು. ಒಬ್ಬಾತ, ಮರದ ಕಟ್ಟಿಗೆಯಿಂದ ನನ್ನ ತಲೆಗೆ ಹೊಡೆದ. ನಂತರ ಮೂವರು ಸೇರಿ ನನ್ನ ಮೇಲೆ ಹಲ್ಲೆ ಮಾಡಿದರು. ರಕ್ಷಣೆಗೆ ಬಂದವರ ಮೇಲೂ ಹಲ್ಲೆಗೆ ಯತ್ನಿಸಿದರು’ ಎಂದು ಮಹಿಳೆ ದೂರಿನಲ್ಲಿ ಹೇಳಿದ್ದಾರೆ.

‘ಜನ ಸೇರುತ್ತಿದ್ದಂತೆ ಮೂವರು ಸ್ಥಳದಿಂದ ಓಡಿ ಹೋದರು. ನನ್ನ ತಲೆಯಿಂದ ರಕ್ತ ಸೋರುತ್ತಿತ್ತು. ಪರಿಚಯಸ್ಥ ಮಹಿಳೆಯರು ಆಟೊದಲ್ಲಿ ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಸದ್ಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ.’ ‘ಆರೋಪಿಗಳು ಚಿಕ್ಕವರಾಗಿದ್ದರಿಂದ, ಅವರ ಭವಿಷ್ಯದ ದೃಷ್ಟಿಯಿಂದ ಲೈಂಗಿಕ ಕ್ರಿಯೆಗೆ ಒಪ್ಪಿರಲಿಲ್ಲ. ಅದರಿಂದ ಸಿಟ್ಟಾಗಿ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ಅವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ಮಹಿಳೆ ಒತ್ತಾಯಿಸಿದ್ದಾರೆ.

ಬಾಡಿಗೆ ಕಾರು ಅಡವಿಟ್ಟು ಜೂಜು: ಕ್ಯಾಬ್ ಚಾಲಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆಗೆ ಪಡೆಯುತ್ತಿದ್ದ ಕಾರುಗಳನ್ನು ಕದ್ದೊಯ್ದು ಅಡವಿಟ್ಟು ವಂಚಿಸುತ್ತಿದ್ದ ಆರೋಪದಡಿ ವೇದಾಂತ್ ಗೌಡ್ ಅಲಿಯಾಸ್ ಜೀವನ್‌ನನ್ನು (26) ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ವೇದಾಂತ್ ಗೌಡ

‘ರಾಜರಾಜೇಶ್ವರಿನಗರ ನಿವಾಸಿ ವೇದಾಂತ್, ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಕೃತ್ಯ ಎಸಗುತ್ತಿದ್ದ. ಕೆಲ ಪುರಾವೆಗಳನ್ನು ಸಂಗ್ರಹಿಸಿ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘₹ 78.70 ಲಕ್ಷ ಮೌಲ್ಯದ 6 ಕಾರುಗಳು, ದ್ವಿಚಕ್ರ ವಾಹನ, ಎರಡು ಮೊಬೈಲ್ ಹಾಗೂ ವಾಹನಗಳ ನಕಲಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದರು.

ಕಾರುಗಳಿಗೆ ನಕಲಿ ದಾಖಲೆ ಸೃಷ್ಟಿ: ‘ಸ್ವಂತ ಕಾರಿಲ್ಲವೆಂದು ಹೇಳುತ್ತಿದ್ದ ಆರೋಪಿ, ಬೇರೆಯವರ ಬಳಿ ಕಾರುಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದ. ಕೆಲ ದಿನ ಬಾಡಿಗೆ ಹಣ ನೀಡುತ್ತಿದ್ದ. ನಂತರ, ಬಾಡಿಗೆ ಹಣ ನೀಡದೇ ನಾಪತ್ತೆಯಾಗುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಬಾಡಿಗೆ ನೆಪದಲ್ಲಿ ಕಾರುಗಳನ್ನು ಕದ್ದೊಯ್ದು ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದ. ನಂತರ, ನಕಲಿ ನೋಂದಣಿ ಫಲಕ ಅಳವಡಿಸುತ್ತಿದ್ದ. ಅದೇ ಕಾರನ್ನು ಬೇರೆಯವರ ಬಳಿ ಅಡವಿಟ್ಟು ಹಣ ಪಡೆಯುತ್ತಿದ್ದ. ಇದೇ ರೀತಿ 6 ಕಾರುಗಳನ್ನು ಅಡವಿಟ್ಟು ಆರೋಪಿ ಹಣ ಪಡೆದಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

‘ಆರೋಪಿ ನಿಗದಿತ ದಿನದಂದು ಹಣ ಕೊಟ್ಟು ಕಾರು ಬಿಡಿಸಿಕೊಳ್ಳುತ್ತಿರಲಿಲ್ಲ. ಕಾರು ತಮ್ಮದಾಯಿತೆಂದು ತಿಳಿಯುತ್ತಿದ್ದ ಜನ, ಅದರ ನೋಂದಣಿ ಪ್ರಕ್ರಿಯೆಗಾಗಿ ಆರ್‌ಟಿಒ ಬಳಿ ಹೋಗುತ್ತಿದ್ದರು. ಅವಾಗಲೇ ಕಾರಿನ ಮಾಲೀಕರು ಬೇರೆ ಇದ್ದಾರೆಂಬ ಮಾಹಿತಿ ಗೊತ್ತಾಗುತ್ತಿತ್ತು’ ಎಂದು ಹೇಳಿದರು.

ಆನ್‌ಲೈನ್ ಜೂಜು: ‘ಮೊಬೈಲ್ ಆ್ಯಪ್‌ವೊಂದರ ಮೂಲಕ ಆರೋಪಿ ಆನ್‌ಲೈನ್‌ನಲ್ಲಿ ಜೂಜು ಆಡುತ್ತಿದ್ದ. ಕಾರು ಅಡವಿಟ್ಟದ್ದರಿಂದ ಬರುತ್ತಿದ್ದ ಹಣದಲ್ಲಿ ಬಹುಪಾಲು ಹಣವನ್ನು ಜೂಜಾಡಲು ವ್ಯಯಿಸುತ್ತಿದ್ದ. ಜೂಜಾಟದಿಂದ ಹಣ ಕಳೆದುಕೊಂಡಿರುವುದಾಗಿ ಆತ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಐಷಾರಾಮಿ ಜೀವನ ನಡೆಸಲು ಹಾಗೂ ಸ್ನೇಹಿತರಿಗೆ ಪಾರ್ಟಿ ಕೊಡಿಸಲು ಆರೋಪಿ ಹಣ ಖರ್ಚು ಮಾಡಿದ್ದಾನೆ.’

‘ಆರೋಪಿ ಮತ್ತಷ್ಟು ಮಂದಿಗೆ ವಂಚಿಸಿರುವ ಮಾಹಿತಿ ಇದೆ. ಯಾರಾದರೂ ಬಾಡಿಗೆಗೆ ಕಾರು ನೀಡಿ ವಂಚನೆಗೀಡಾಗಿದ್ದರೆ, ಠಾಣೆ ಸಂಖ್ಯೆ 080-22942571 ಅಥವಾ 9480801621 ಸಂಪರ್ಕಿಸಿ ದೂರು ನೀಡಬಹುದು’ ಎಂದು ಪೊಲೀಸರು ಕೋರಿದ್ದಾರೆ.

Azadi Ka Amrit Mahotsav

G20 भारत 2023 INDIA



ಜಿಎಸ್‌ಟಿ ಅಡಿಯಲ್ಲಿ ಕ್ಷಮಾದಾನ ಯೋಜನೆ

30ನೇ ಜೂನ್, 2023

- ಜಿಎಸ್‌ಟಿಆರ್–4, ಜಿಎಸ್‌ಟಿಆರ್–9, ಜಿಎಸ್‌ಟಿಆರ್–10 ರಿಟರ್ನ್ಸ್ ಫೈಲ್ ಮಾಡದಿರುವವರಿಗೆ
- ನೋಂದಣಿ ರದ್ದುಪಡಿಸಿಕೊಳ್ಳಲು ಸಿದ್ಧರಾದವರಿಗೆ
- ಅತ್ಯುತ್ತಮ ಜಡ್ಜ್‌ಮೆಂಟ್ ಆರ್ಡರ್ ಹಿಂಪಡೆಯಲು ಉದ್ದೇಶಿಸಿರುವವರಿಗೆ

ಜಿಎಸ್‌ಟಿ ಕ್ಷಮಾದಾನ ಯೋಜನೆ	ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಪರಿಶೀಲಿಸಿ
ಜುಲೈ 2017 ರಿಂದ ಮಾರ್ಚ್ 2019 ವರೆಗಿನ ತ್ರೈಮಾಸಿಕಗಳಿಗೆ ಅಥವಾ 2019–20 ರಿಂದ 2021–22 ವರೆಗಿನ ಹಣಕಾಸು ವರ್ಷಕ್ಕೆ ಸಲ್ಲಿಸಲಾಗುವ ಫಾರಂ ಜಿಎಸ್‌ಟಿಆರ್–4 ಸಲ್ಲಿಕೆಯ ವಿಳಂಬ ಶುಲ್ಕವನ್ನು ಕೆಳಗಿನಂತೆ ಕಡಿಮೆ ಮಾಡಲಾಗಿದೆ • ರಿಟರ್ನ್ಸ್ ಇಲ್ಲದಿದ್ದರೆ ಶೂನ್ಯ 30.06.2023 ರೊಳಗೆ ರಿಟರ್ನ್ ಫೈಲ್ ಮಾಡಿರುವವರನ್ನು ಹೊರತುಪಡಿಸಿ, • ಇನ್ನಿತರ ಶೂನ್ಯ ರಿಟರ್ನ್‌ದಾರರಿಗೆ ರೂ. 500/– (ರೂ. 250/– ಸಿಜಿಎಸ್‌ಟಿ + ರೂ. 250/– ಎಸ್‌ಜಿಎಸ್‌ಟಿ	ನೋಟಿಫಿಕೇಶನ್ ನಂ.02/2023–ಸೆಂಟ್ರಲ್ ಟ್ಯಾಕ್ಸ್ ದಿನಾಂಕ 31.03.2023
30.06.2023 ರೊಳಗೆ ಹಣಕಾಸು ವರ್ಷ 2017–18 ರಿಂದ 2021–22ನೇ ಸಾಲಿನ ವಾರ್ಷಿಕ ರಿಟರ್ನ್ ಅನ್ನು ಫಾರಂ ಜಿಎಸ್‌ಟಿಆರ್–9 ಮಾದರಿಯಲ್ಲಿ ಸಲ್ಲಿಸಲು ಗರಿಷ್ಠ ವಿಳಂಬ ಶುಲ್ಕವನ್ನು ರೂ. 20,000/– (ರೂ.10,000/– ಸಿಜಿಎಸ್‌ಟಿ + ರೂ.10,000/– ಎಸ್‌ಜಿಎಸ್‌ಟಿ)ಗೆ ಮಿತಿಗೊಳಿಸಲಾಗಿದೆ.	ನೋಟಿಫಿಕೇಶನ್ ನಂ. 07/2023–ಸೆಂಟ್ರಲ್ ಟ್ಯಾಕ್ಸ್ ದಿನಾಂಕ 31.03.2023
30.06.2023 ರೊಳಗೆ ಫೈಲ್ ಮಾಡಿದ್ದಲ್ಲಿ, ಫಾರಂ ಜಿಎಸ್‌ಟಿಆರ್–10 ಮಾದರಿಯಲ್ಲಿ ಅಂತಿಮ ರಿಟರ್ನ್ ಸಲ್ಲಿಸುವುದರ ವಿಳಂಬ ಶುಲ್ಕವನ್ನು ರೂ. 1,000/– (ರೂ. 500/– ಸಿಜಿಎಸ್‌ಟಿ + ರೂ. 500/– ಎಸ್‌ಜಿಎಸ್‌ಟಿ) ಕಡಿಮೆ ಮಾಡಲಾಗಿದೆ.	ನೋಟಿಫಿಕೇಶನ್ ನಂ. 08/2023–ಸೆಂಟ್ರಲ್ ಟ್ಯಾಕ್ಸ್ ದಿನಾಂಕ 31.03.2023
31.12.2022 ರೊಳಗೆ ರಿಟರ್ನ್‌ಗಳನ್ನು ಫೈಲ್ ಮಾಡದಿರುವ ಕಾರಣಕ್ಕೆ ನೋಂದಣಿ ರದ್ದಾಗಿರುವ ವ್ಯಕ್ತಿಗಳು, 30.06.2023 ರೊಳಗೆ ನೋಂದಣಿ ರದ್ದತಿಯ ದಿನಾಂಕದವರೆಗೆ ಅನ್ವಯಿಕ ಎಲ್ಲಾ ರಿಟರ್ನ್‌ಗಳಿಗೆ ಸಂಬಂಧಿತ ಬಾಕಿ ತೆರಿಗೆ, ಬಡ್ಡಿ, ದಂಡ ಹಾಗೂ ವಿಳಂಬ ಶುಲ್ಕಗಳನ್ನು ಪಾವತಿಸಿದ ಬಳಿಕ ನೋಂದಣಿ ರದ್ದತಿ ಪಡೆದುಕೊಳ್ಳಬಹುದು.	ನೋಟಿಫಿಕೇಶನ್ ನಂ. 03/2023–ಸೆಂಟ್ರಲ್ ಟ್ಯಾಕ್ಸ್ ದಿನಾಂಕ 31.03.2023
ಅಧಿಕೃತ ಫಾರಂ ಜಿಎಸ್‌ಟಿಆರ್–3ಬಿ ರಿಟರ್ನ್ ಸಲ್ಲಿಸದೆ ಇರುವುದಕ್ಕಾಗಿ, 28.02.2023 ರೊಳಗೆ ಹೊರಡಿಸಲಾಗಿರುವ ಬೆಸ್ಟ್ ಜಡ್ಜ್‌ಮೆಂಟ್ ಅಸೆಸ್ಮೆಂಟ್ ಆರ್ಡರ್ಸ್ ಪ್ರಕಾರ ಸಲ್ಲಿಕೆಯಾಗದಿರುವ ರಿಟರ್ನ್‌ಗಳು 30.06.2023 ರೊಳಗೆ ಬಾಕಿ ತೆರಿಗೆ, ಬಡ್ಡಿ ಹಾಗೂ ವಿಳಂಬ ಶುಲ್ಕ ಸಮೇತ ಫೈಲ್ ಆಗಿದ್ದಲ್ಲಿ, ಅಂತಹವುಗಳನ್ನು ಹಿಂಪಡೆಯಲಾಗಿದೆ ಎಂದು ಪರಿಗಣಿಸಲಾಗುತ್ತದೆ.	ನೋಟಿಫಿಕೇಶನ್ ನಂ. 06/2023–ಸೆಂಟ್ರಲ್ ಟ್ಯಾಕ್ಸ್ ದಿನಾಂಕ 31.03.2023

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸ್ಕ್ಯಾನ್ ಮಾಡಿ

ಈ ಅವಕಾಶವನ್ನು ಕಳೆದುಕೊಳ್ಳಬೇಡಿ! ಕೊನೆಯ ದಿನಾಂಕ ತುಂಬಾ ಸಮೀಪದಲ್ಲಿದೆ!
ಇದು ಪ್ರಯೋಜನಗಳನ್ನು ಪಡೆಯುವ ಮತ್ತು ಉತ್ತಮ ತೆರಿಗೆದಾರರಾಗುವ ಸಮಯವಾಗಿದೆ.

cbc 15502/13/0005/2324

Central Board of Indirect Taxes and Customs

@cbic_india @cbicindia @cbicindia @CBIC INDIA @cbic www.cbic.gov.in

ಪುಟಿನ್ ಬೆಂಬಲದಿಂದಲೇ ರಚಿಸಿದ್ದ ಮಿಲಿಟರಿ ಪಡೆ ● ಒಂದು ಕಾಲದ ಆಪ್ತನಿಂದಲೇ ಪ್ರತಿರೋಧದ ಬಿಸಿ

ಸೇನೆ ಮೇಲೆ ಮುನಿಸಿಗೆ ಬಂಡಾಯ

ಮಾಸ್ಕೊ (ಎಪಿ/ಎಎಫ್‌ಪಿ/ ನ್ಯೂಯಾರ್ಕ್ ಟೈಮ್ಸ್): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಆಪ್ತರಾಗಿದ್ದ ಯೆವ್ಗೆನಿ ಪ್ರಿಗೋಷಿನ್, ಪುಟಿನ್ ಬೆಂಬಲದಿಂದಲೇ 2014ರಲ್ಲಿ 'ವ್ಯಾಗ್ನರ್' ಎಂಬ ಖಾಸಗಿ ಮಿಲಟರಿ ಪಡೆ ಕಟ್ಟಿದ್ದರು. ಸೇಂಟ್ ಪೀಟರ್ಸ್‌ಬರ್ಗ್ ಮೇಯರ್ ಆಗಿಯೂ ಅಧಿಕಾರ ನಡೆಸಿದ್ದರು.

ಈಗ, ರಷ್ಯಾ ಪಡೆಗಳು ಹಾಗೂ ಪುಟಿನ್ ವಿರುದ್ಧವೇ ಪ್ರಿಗೋಷಿನ್ ಬಂಡಾಯವೆದ್ದಿದ್ದಾರೆ. ರಷ್ಯಾ ಸೇನೆಯ ಉನ್ನತ ಅಧಿಕಾರಿಗಳು ಹಾಗೂ ರಕ್ಷಣಾ ಸಚಿವಾಲಯದ ಜೊತೆಗಿನ ಅವರ ಮುಸುಕಿನ ಗುದ್ದಾಟ ಈಗ ದಂಗೆ ರೂಪದಲ್ಲಿ ಸ್ಫೋಟಗೊಂಡಿದೆ ಎನ್ನಲಾಗುತ್ತಿದೆ.

ಉಕ್ರೇನ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ 'ವ್ಯಾಗ್ನರ್' ಗುಂಪು ಮಹತ್ವದ ಪಾತ್ರವಹಿಸಿದೆ. ಅದರಲ್ಲೂ, ಬಖ್ಮುಟ್ ನಗರವನ್ನು ವಶಪಡಿಸಿಕೊಳ್ಳುವ ಸಲುವಾಗಿ ನಡೆದ ಭೀಕರ ಕದನದಲ್ಲಿ ರಷ್ಯಾ ಪಡೆಗಳು ಯಶಸ್ವಿಯಾಗುವಲ್ಲಿ 'ವ್ಯಾಗ್ನರ್' ಗುಂಪಿನ ಪಾತ್ರ ನಿರ್ಣಾಯಕವಾಗಿತ್ತು.

ಉಕ್ರೇನ್ ವಿರುದ್ಧ ಹೋರಾಡುತ್ತಿದ್ದ ತನ್ನ ಯೋಧರಿಗೆ ರಷ್ಯಾ ಸೇನೆಯ ಅಧಿಕಾರಿಗಳು ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿಲ್ಲ ಎಂದು ಇತ್ತೀಚೆಗೆ ಆರೋಪಿಸಿದ್ದ ಅವರು, 'ಮಿಲಿಟರಿಯ ಉನ್ನತ ಅಧಿಕಾರಿಗಳು ಅಸಮರ್ಥರು' ಎಂದು ಟೀಕಿಸುತ್ತಿದ್ದರು.

'ಉಕ್ರೇನ್ ನೆಲದಲ್ಲಿ ಹೋರಾಡುತ್ತಿರುವ ಯೋಧರ ಶಿಬಿರಗಳ ಮೇಲೆ, ಬೆಂಗಾವಲು ವಾಹನಗಳ ಮೇಲೆ ರಷ್ಯಾ ಪಡೆಗಳು ರಾಕೆಟ್, ಹೆಲಿಕಾಪ್ಟರ್‌ಗಳ ಮೂಲಕ ದಾಳಿ ನಡೆಸಿದ್ದವು. ಸೇನೆ ಸಿಬ್ಬಂದಿ ಮುಖ್ಯಸ್ಥ ಜನರಲ್ ವ್ಯಾಲೇರಿ ಗೆರಾಸಿಮೋವ್ ಅವರ ಆದೇಶದಂತೆಯೇ ಈ ದಾಳಿಗಳು ನಡೆದಿವೆ' ಎಂದು ಆರೋಪಿಸಿದ್ದರು.

'ರೊಸ್ತೋವನ್ ಡಾನ್ ನಗರದಲ್ಲಿ ಗೆರಾಸಿಮೋವ್ ಹಾಗೂ ರಕ್ಷಣಾ ಸಚಿವ ಸೆರ್ಗಿ ಶೋಯಿಗು ಇತ್ತೀಚೆಗೆ ಸಭೆ ನಡೆಸಿ, ವ್ಯಾಗ್ನರ್ ಪಡೆಯನ್ನು ನಾಶ ಮಾಡಬೇಕು ಎಂಬ ನಿರ್ಧಾರ ಕೈಗೊಂಡಿದ್ದರು. ಅದರ ಬೆನ್ನಲ್ಲೇ ಈ ದಾಳಿಗಳು ನಡೆದಿವೆ' ಎಂದೂ ಆರೋಪಿಸಿದ್ದರು. ಈ ನಡುವೆ, 'ಪ್ರಿಗೋಷಿನ್, ಅಧ್ಯಕ್ಷ ಪುಟಿನ್ ವಿರುದ್ಧ ದಂಗೆ ಏಳಲು ಹವಣಿಸುತ್ತಿದ್ದಾರೆ' ಎಂದು ಸೇನೆಯ ಉನ್ನತ ಅಧಿಕಾರಿಗಳು ಶುಕ್ರವಾರವಷ್ಟೆ ಟೀಕಿಸಿದ್ದರು. ಇದು ಪ್ರಿಗೋಷಿನ್ ಮತ್ತು ಸೇನೆ ನಡುವೆ ಬಹಿರಂಗ ಸಂಘರ್ಷದ ಸುಳಿವು ನೀಡಿತ್ತು' ಎಂದೂ ವರದಿಯಾಗಿತ್ತು.

ಉಕ್ರೇನ್ ಗಡಿಗೆ ಹೊಂದಿಕೊಂಡಿರುವ ರೊಸ್ತೋವನ್ ಡಾನ್ ನಗರದಲ್ಲಿ ಶುಕ್ರವಾರ ರಾತ್ರಿ ಸೇನಾಪಡೆಗಳ ಚಟುವಟಿಕೆಗಳು ಕಂಡುಬಂದವು. ಶನಿವಾರ ಬೆಳಿಗ್ಗೆ ಪ್ರಿಗೋಷಿನ್, 'ನಗರದ ಮಿಲಿಟರಿ ಕೇಂದ್ರ ಕಚೇರಿಯನ್ನು ವಶಕ್ಕೆ ಪಡೆದಿರುವುದಾಗಿ ಘೋಷಿಸಿದರು.

'ವ್ಯಾಗ್ನರ್' ಗುಂಪಿನ ಸದಸ್ಯರು ರೊಸ್ತೋವನ್ ಡಾನ್ ರಸ್ತೆಯಲ್ಲಿ ಕಾರೊಂದನ್ನು ಪರಿಶೀಲಿಸುತ್ತಿರುವುದು –ಎಎಫ್‌ಪಿ ಚಿತ್ರ

ಇಂಧನ ಡಿಪೊಗೆ ಬಾಂಬ್

ಸೇನೆ ವಿರುದ್ಧ ಬಂಡಾಯ ಎದ್ದಿರುವ 'ವ್ಯಾಗ್ನರ್' ಗುಂಪು, ರಾಜಧಾನಿ ಮಾಸ್ಕೊದತ್ತ ಮುನ್ನಡೆಯುವ ಸಾಧ್ಯತೆ ಇದೆ ಎಂದು ವೊರೊನೆಜ್ ನಗರದ ಗವರ್ನರ್ ಅಲೆಕ್ಸಾಂಡರ್ ಗುಸೇವ್ ಹೇಳಿದ್ದಾರೆ.

'ನಗರದ ಇಂಧನ ಸಂಗ್ರಹಾಗಾರದ ಮೇಲೆ ಬಾಂಬ್ ದಾಳಿ ನಡೆಸಲಾಗಿದೆ. ದಂಗೆಯನ್ನು ಹತ್ತಿಕ್ಕುವ ಸಲುವಾಗಿ ಭಯೋತ್ಪದನಾ ನಿಗ್ರಹ ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದೂ ಅವರು ಹೇಳಿದ್ದಾರೆ.

ಪುಟಿನ್ ಟೀಕೆ–ತಿರುಗೇಟು: 'ಮಹತ್ವಾಕಾಂಕ್ಷೆ ಹಾಗೂ ವೈಯಕ್ತಿಕ ಹಿತಾಸಕ್ತಿಗಳೇ ಇಂಥ ದೇಶದ್ರೋಹ ನಡೆಗೆ ಕಾರಣ' ಎಂದು ಪ್ರಿಗೋಷಿನ್ ವಿರುದ್ಧ ವಿಡಿಯೊ ಸಂದೇಶದಲ್ಲಿ ಪುಟಿನ್ ಟೀಕಿಸಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಪ್ರಿಗೋಷಿನ್, 'ನನ್ನ ಮಾತೃಭೂಮಿಗೆ ದ್ರೋಹ ಬಗೆಯುತ್ತಿದ್ದೇನೆ ಎಂಬ ಅಧ್ಯಕ್ಷರ ಹೇಳಿಕೆ ತಪ್ಪು. ನಾವೂ ದೇಶಪ್ರೇಮಿಗಳೇ' ಎಂದಿದ್ದಾರೆ. 'ಅಧ್ಯಕ್ಷ ಪುಟಿನ್, ಎಫ್‌ಎಸ್‌ಬಿ ಅಥವಾ ಇನ್ನಾರೋ ಮನವಿ ಮಾಡಿದರೂ ನಮ್ಮ ಯೋಜನೆಗಳನ್ನು ಬದಲಾಯಿಸುವುದಿಲ್ಲ' ಎಂದೂ ಹೇಳಿದ್ದಾರೆ.

ರೊಸ್ತೋವನ್ ಡಾನ್: ವ್ಯಾಗ್ನರ್ ಪಡೆ ವಾಪಸ್

ಮಾಸ್ಕೊ (ಎಪಿ): 'ರಷ್ಯಾದಲ್ಲಿ ರಕ್ತಪಾತ ತಪ್ಪಿಸಲು ದಾಳಿ ನಿಲ್ಲಿಸಿ, ಉಕ್ರೇನ್‌ನ ಸೇನಾ ಶಿಬಿರಗಳಿಗೆ ಮರಳುವಂತೆ ತಮ್ಮ ಪಡೆಗೆ ಆದೇಶಿಸಿದ್ದೇನೆ ಎಂದು 'ವ್ಯಾಗ್ನರ್' ನಾಯಕ ಪ್ರಿಗೋಷಿನ್ ತಿಳಿಸಿದ್ದಾರೆ. ಈ ಘೋಷಣೆ ಬಳಿಕ ವ್ಯಾಗ್ನರ್ ಪಡೆ ರೊಸ್ತೋವನ್ ಡಾನ್ ನಗರದಿಂದ ವಾಪಸಾಗುತ್ತಿದೆ ಎಂದು ವರದಿಯಾಗಿವೆ.

'ನಮ್ಮ ಯೋಧರು ಮಾಸ್ಕೊದಿಂದ ಕೇವಲ 200 ಕಿ.ಮೀ ದೂರದಲ್ಲಿರುವಾಗ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರ್ಧರಿಸಿದ್ದೇನೆ' ಎಂದು ಪ್ರಿಗೋಷಿನ್ ತಿಳಿಸಿದ್ದಾರೆ. ಆದರೆ, ರಷ್ಯಾ ತಮ್ಮ ಬೇಡಿಕೆಗಳಿಗೆ ಸಮ್ಮತಿಸಿದೆಯೇ ಎಂಬ ಬಗ್ಗೆ ಅವರು ಪ್ರತಿಕ್ರಿಯೆ ನೀಡಿಲ್ಲ. ಈ ಬಗ್ಗೆ ರಷ್ಯಾ ಸಹ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ವ್ಯಾಗ್ನರ್' ದಾಳಿ ನಡೆಸಬಹುದೆಂದು ರಷ್ಯಾ ದಕ್ಷಿಣ ಭಾಗದಲ್ಲಿ ಚೆಕ್ ಪಾಯಿಂಟ್‌ಗಳನ್ನು ನಿರ್ಮಿಸಿ, ಶಸ್ತ್ರಸಜ್ಜಿತ ವಾಹನಗಳು ಮತ್ತು ಸೈನಿಕರನ್ನು ನಿಯೋಜಿಸಿ ಹೋರಾಟಕ್ಕೆ ಅಣಿಯಾಗಿತ್ತು. ಕೆಲವು ರಸ್ತೆಗಳಲ್ಲಿ ವಾಹನಗಳನ್ನು ಚಲಾಯಿಸದಂತೆ ಮೇಯರ್ ಸೂಚಿಸಿದ್ದರು.

ರಷ್ಯಾ: ಸೇನೆ ವಿರುದ್ಧ ದಂಗೆ

ಒಂದನೇ ಪುಟದಿಂದ...

ಈ ನಗರದಿಂದ ವಿಡಿಯೊ ಬಿಡುಗಡೆ ಮಾಡಿರುವ ಪ್ರಿಗೋಷಿನ್, 'ವಾಯುಪ್ರದೇಶ ಸೇರಿ ಇಡೀ ನಗರ ಈಗ ನಮ್ಮ ವಶದಲ್ಲಿದೆ. ನನ್ನ ಪಡೆಗಳು ಎಲ್ಲ ಮಿಲಿಟರಿ ಸೌಲಭ್ಯಗಳನ್ನು ಹೊಂದಿವೆ' ಎಂದಿದ್ದಾರೆ.

ಮಿಲಿಟರಿ ವಾಹನಗಳು ನಗರದ ರಸ್ತೆಗಳಲ್ಲಿ ಸಂಚರಿಸುತ್ತಿರುವ ದೃಶ್ಯಗಳು ವಿಡಿಯೊದಲ್ಲಿವೆ. ಆದರೆ, ರೊಸ್ತೋವನ್ ಡಾನ್ ನಗರವನ್ನು ಪ್ರಿಗೋಷಿನ್ ಹೇಗೆ ಪ್ರವೇಶಿಸಿದರು ಹಾಗೂ ಅವರೊಂದಿಗೆ ಎಷ್ಟು ಯೋಧರಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದು ಮೂಲಗಳು ತಿಳಿಸಿವೆ.

'ಈ ದಿನ ನಮ್ಮ ಶಿಬಿರಗಳ ಮೇಲೆ ರಷ್ಯಾ ಪಡೆಗಳು ರಾಕೆಟ್ ದಾಳಿ ನಡೆಸಿದವು. ಭಾರಿ ಸಂಖ್ಯೆಯಲ್ಲಿ ನಮ್ಮ ಯೋಧರು ಸಾವನ್ನಪ್ಪಿದ್ದಾರೆ' ಎಂದು ಪ್ರಿಗೋಷಿನ್ ವಿಡಿಯೊದಲ್ಲಿ ಆರೋಪಿಸಿದ್ದಾರೆ. 'ರಷ್ಯಾದ ವೊರೊನೆಜ್ ನಗರದ ಹೊರವಲಯದಲ್ಲಿ ಎಂ–4 ಹೆದ್ದಾರಿಯಲ್ಲಿ ಹೊರಟಿದ್ದ ವ್ಯಾಗ್ನರ್ ಬೆಂಗಾವಲು ವಾಹನಗಳ ಮೇಲೆ ರಷ್ಯಾ ಪಡೆಗಳ ಹೆಲಿಕಾಪ್ಟರ್‌ಗಳು ದಾಳಿ ನಡೆಸಿವೆ' ಎಂದು ಪ್ರತ್ಯಕ್ಷದರ್ಶಿಯ ಹೇಳಿಕೆ ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಆದರೆ, ಪ್ರಿಗೋಷಿನ್ ಅವರ ಈ ಆರೋಪವನ್ನು ರಷ್ಯಾದ ರಕ್ಷಣಾ ಸಚಿವಾಲಯ ತಳ್ಳಿ ಹಾಕಿದೆ.

ಎಚ್ಚರಿಕೆ: ಸರ್ಕಾರ, ಸೇನೆ ವಿರುದ್ಧ ಬಂಡಾಯವೆದ್ದಿರುವ ಪ್ರಿಗೋಷಿನ್ ವಿರುದ್ಧ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಸಮಿತಿ ಕಿಡಿಕಾರಿದೆ. ಫೆಡರಲ್ ಭದ್ರತಾ ಸೇವೆ (ಎಫ್‌ಎಸ್‌ಬಿ) ಅಂಗಸಂಸ್ಥೆಯಾಗಿರುವ ಸಮಿತಿಯು, 'ಸಶಸ್ತ್ರ ದಂಗೆ ನಡೆಸುವವರಿಗೆ 20 ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ' ಎಂದು ಎಚ್ಚರಿಸಿದೆ.

'ಪ್ರಿಗೋಷಿನ್ ನೀಡುವ ಅದೇಶಗಳು ವಿಶ್ವಾಸಘಾತುಕದಿಂದ ಕೂಡಿವೆ. ಹಾಗಾಗಿ, ಅವುಗಳನ್ನು ಪಾಲನೆ ಮಾಡಬೇಡಿ' ಎಂಬುದಾಗಿ 'ವ್ಯಾಗ್ನರ್' ಯೋಧರನ್ನು ಎಫ್‌ಎಸ್‌ಬಿ ಆಗ್ರಹಿಸಿತ್ತು.

ಜಿ–7 ವಿದೇಶಾಂಗ ಸಚಿವರಿಂದ ಸಭೆ: ಜಿ–7 ರಾಷ್ಟ್ರಗಳ ವಿದೇಶಾಂಗ ಸಚಿವರು ಸಭೆ ನಡೆಸಿ, ಪ್ರಿಗೋಷಿನ್ ನೇತೃತ್ವದಲ್ಲಿ ಎದ್ದಿರುವ ದಂಗೆ ಕುರಿತು ಚರ್ಚಿಸಿದರು. 'ಉಕ್ರೇನ್‌ಗೆ ನೀಡುತ್ತಿರುವ ಬೆಂಬಲದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮಿತ್ರರಾಷ್ಟ್ರಗಳೊಂದಿಗೆ ನಿರಂತರ ಸಮನ್ವಯದೊಂದಿಗೆ ಪರಿಸ್ಥಿತಿ ಗಮನಿಸಲಾಗುತ್ತಿದೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಮಾಹಿತಿ ನೀಡಿದ್ದಾರೆ.

ಮಿತ್ರ ರಾಷ್ಟ್ರಗಳೊಂದಿಗೆ ಪುಟಿನ್ ಚರ್ಚೆ: 'ಈ ದಿಢೀರ್ ಬೆಳವಣಿಗೆ ಕುರಿತು ವ್ಲಾಡಿಮಿರ್ ಪುಟಿನ್ ಅವರು ಬೆಲರೂಸ್, ಕಜಕಸ್ತಾನ ಹಾಗೂ ಉಜ್ಬೇಕಿಸ್ತಾನ ನಾಯಕರೊಂದಿಗೆ ಚರ್ಚಿಸಿದ್ದಾರೆ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರ ಪೆಸ್ಕೊವ್ ಹೇಳಿದ್ದಾರೆ.

'ಟರ್ಕಿ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಅವರೊಂದಿಗೂ ಪುಟಿನ್ ಮಾತುಕತೆ ನಡೆಸಿದ್ದು, ರಷ್ಯಾ ಕೈಗೊಳ್ಳುವ ಕ್ರಮಗಳಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಎರ್ಡೋಗನ್ ಹೇಳಿದ್ದಾರೆ' ಎಂದೂ ತಿಳಿಸಿದ್ದಾರೆ.

ಯಾರು ಈ ಪ್ರಿಗೋಷಿನ್?

ಮಾಸ್ಕೊ: ಸೇನಾ ನಾಯಕತ್ವ ಹಾಗೂ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿರುದ್ಧ ತೊಡೆ ತಟ್ಟಿರುವ ಖಾಸಗಿ ಮಿಲಿಟರಿ ಪಡೆ 'ಪಿಎಂಸಿ ವ್ಯಾಗ್ನರ್ ಗ್ರೂಪ್' ಇದೀಗ ರಷ್ಯಾದಲ್ಲಿ ಕೋಲಾಹಲ ಎಬ್ಬಿಸಿದೆ.

ಉಕ್ರೇನ್ ವಿರುದ್ಧದ ಕದನಕ್ಕೆ ಹಾಗೂ ಸ್ವದೇಶದಲ್ಲಿ ತನ್ನ ವಿರುದ್ಧ ಸಂಚು ಮಾಡುವವರನ್ನು ಮುಗಿಸಲು ಸ್ವತಃ ಪುಟಿನ್ ಅವರೇ ಈ ಪಡೆಯನ್ನು ಪೋಷಿಸಿದ್ದರು.25 ಸಾವಿರಕ್ಕೂ ಹೆಚ್ಚು ಬಲಿಷ್ಠ ಹೋರಾಟಗಾರರನ್ನು ಹೊಂದಿರುವ ಪಡೆಯನ್ನು ಸ್ಥಾಪಿಸಿದ್ದು ಪುಟಿನ್ ಪರಮಾಪ್ತ ಎಂದೇ ಗುರುತಿಸಿಕೊಂಡಿದ್ದ ಯೆವ್ಗೆನಿ ಪ್ರಿಗೋಷಿನ್.

ಆಕ್ರಮಣಕಾರಿ: 1961ರಲ್ಲಿ ಸೋವಿಯತ್ ಯೂನಿಯನ್‌ನ ಲೆನಿನ್‌ಗ್ರಾಡ್‌ನಲ್ಲಿ (ಈಗಿನ ಸೇಂಟ್‌ಪೀಟರ್ಸ್‌ಬರ್ಗ್) ಜನಿಸಿದ್ದ ಪ್ರಿಗೋಷಿನ್ ಬಾಲ್ಯದಿಂದಲೂ ಆಕ್ರಮಣಕಾರಿ ಸ್ವಭಾವದವ. ಬಾಲಕನಾಗಿದ್ದಾಗಲೇ ಸ್ಥಳೀಯ ಮಾಫಿಯಾದವರ ಜೊತೆ ಸೇರಿ ಭಾರಿ ಪ್ರಮಾಣದ ಹಣ ದರೋಡೆ ಮಾಡಿದ್ದ. ಈ ಅಪರಾಧಕ್ಕಾಗಿ ಆತನನ್ನು 9 ವರ್ಷ ಬಾಲ ಮಂದಿರದಲ್ಲಿ ಇರಿಸಲಾಗಿತ್ತು. ಬಿಡುಗಡೆಯಾದ ನಂತರ ಸೇಂಟ್‌ಪೀಟರ್ಸ್‌ಬರ್ಗ್‌ನಲ್ಲಿ ಹೋಟೆಲ್ ಉದ್ಯಮ ಆರಂಭಿಸಿದ ಪ್ರಿಗೋಷಿನ್, ಕೆಲವೇ ದಿನಗಳಲ್ಲಿ ಏಕಸ್ವಾಮ್ಯ ಸಾಧಿಸಿದ. 2004ರಿಂದ ಮಿಲಿಟರಿ ಸಿಬ್ಬಂದಿಗೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ, ಕಚೇರಿಗಳಿಗೆ ಆಹಾರ ಪೂರೈಕೆ ಮಾಡುವ ಕೇಟರಿಂಗ್ ಉದ್ಯಮ ಶುರು ಮಾಡಿದ.

ಅಲ್ಲಿಂದ ಪುಟಿನ್ ಸಾಂಗತ್ಯ ಬೆಳೆಸಿಕೊಂಡು ಆಪ್ತನಾದ. 2014ರಲ್ಲಿ ಪಿಎಂಸಿ ವ್ಯಾಗ್ನರ್ ಗ್ರೂಪ್ ಎಂಬ ಖಾಸಗಿ ಸೇನಾಪಡೆಯನ್ನು ಅಸ್ತಿತ್ವಕ್ಕೆ ತಂದ. ಪ್ರಿಗೋಷಿನ್‌ನಲ್ಲಿದ್ದ ಆಕ್ರಮಣಕಾರಿ ಗುಣವನ್ನು ಕಂಡಿದ್ದ ವ್ಲಾಡಿಮಿರ್ ಬೆಂಬಲ ನೀಡಿದರು. ಈ ನಡುವೆ ರಷ್ಯಾ ಅಧ್ಯಕ್ಷರ ವಿರೋಧಿಗಳನ್ನು, ಸರ್ಕಾರದ ವಿರೋಧಿಗಳನ್ನು ಹಾಗೂ ಅಮೆರಿಕವನ್ನು ಕಟುವಾಗಿ ಟ್ರೋಲ್ ಮಾಡಲು ಇಂಟರ್‌ನೆಟ್ ರಿಸರ್ಚ್ ಏಜನ್ಸಿ (ಐಆರ್‌ಎ) ಎಂಬ ಸಂಸ್ಥೆಯನ್ನು ಪ್ರಿಗೋಷಿನ್ ಸ್ಥಾಪಿಸಿದ್ದ. ವ್ಯಾಗ್ನರ್ ಪಡೆಗಾಗಿ ಕೆಲಸ ಮಾಡಲು ಬಲಶಾಲಿ ಯುವಕರಿಗೆ ಭಾರಿ ವೇತನ, ಯುವತಿಯರ ಆಮಿಷ ತೋರಿಸಿ, ಅವರಿಗೆ ಕಠಿಣ ತರಬೇತಿ ನೀಡಿ ದಾಳಿಗಿಳಿಸುತ್ತಿದ್ದ. 2022ರ ಫೆಬ್ರುವರಿಯಲ್ಲಿ ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿತು. ಉಕ್ರೇನ್ ಪ್ರಬಲವಾಗಿ ಸೆಡ್ಡು ಹೊಡೆಯುತ್ತಿದ್ದಂತೆ ಬೆದರಿದ ಪುಟಿನ್, ಹೋರಾಟದಲ್ಲಿ ಸೇನೆಗೆ ಸಹಾಯ ಮಾಡಲು ಈ ವ್ಯಾಗ್ನರ್ ಗ್ರೂಪ್‌ಗೆ ಹಸಿರು ನಿಶಾನೆ ತೋರಿದರು.

ಕ್ರೂರತೆಗೆ ಹೆಸರು: ಪಿಎಂಸಿ ವ್ಯಾಗ್ನರ್ ಗ್ರೂಪ್ ಭಾರಿ ಕ್ರೂರತೆಗೆ ಹೆಸರಾಗಿದೆ. ಇದರ ಚಿನ್ಹೆಯನ್ನು ಭಯಾನಕವಾಗಿ ರೂಪಿಸಲಾಗಿದೆ. ಸಿರಿಯಾ, ಲಿಬಿಯಾ ಆಂತರಿಕ ಸಂಘರ್ಷಗಳಲ್ಲಿ ಈ ಪಡೆ ಖಾಸಗಿಯಾಗಿ ಕೆಲಸ ಮಾಡಿ ಕ್ರೂರತೆ ಮೆರೆದಿದೆ. ಪ್ರಿಗೋಷಿನ್ ಉಕ್ರೇನ್ ಸೈನಿಕರನ್ನು ಅತ್ಯಂತ ಭೀಕರವಾಗಿ ಹತ್ಯೆಗೈಯಲು ಆದೇಶಿಸುತ್ತಿದ್ದ.



ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಈಜಿಪ್ಟ್: ಮೋದಿಗೆ ಭವ್ಯ ಸ್ವಾಗತ

ಕೈರೊ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಕಾಲ ಈಜಿಪ್ಟ್ ಭೇಟಿಗಾಗಿ ಶನಿವಾರ ರಾಜಧಾನಿ ಕೈರೊಗೆ ಬಂದಿಳಿದರು. ಭೇಟಿ ವೇಳೆ ಅವರು ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ವೃದ್ಧಿಗೆ ಸಂಬಂಧಿಸಿದಂತೆ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್–ಸಿಸಿ ಸೇರಿದಂತೆ ದೇಶದ ಪ್ರಮುಖ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮೋದಿ ಅವರನ್ನು ಈಜಿಪ್ಟ್ ಪ್ರಧಾನಿ ಮೊಸ್ತಫಾ ಮೊಡ್‌ಬೌಲಿ ಅವರು ಆಲಿಂಗನ ಮಾಡುವ ಮೂಲಕ ಬರಮಾಡಿಕೊಂಡರು. ನಂತರ ಸಕಲ ಸೇನಾ ಗೌರವದೊಂದಿಗೆ ಭವ್ಯ ಸ್ವಾಗತ ನೀಡಲಾಯಿತು.

ಅಧ್ಯಕ್ಷ ಎಲ್–ಸಿಸಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಭೇಟಿ ನೀಡಿದ್ದು, 1997ರ ನಂತರ ಭಾರತದ ಪ್ರಧಾನಿಯೊಬ್ಬರು ಇಲ್ಲಿಗೆ ಭೇಟಿ ನೀಡುತ್ತಿರುವುದು ಇದೇ ಮೊದಲು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೈರೊದಲ್ಲಿ ಈಜಿಪ್ಟ್ ಪ್ರಧಾನಿ ಮೊಸ್ತಫಾ ಮೊಡ್‌ಬೌಲಿ ಅವರು ಬರಮಾಡಿಕೊಂಡರು –ಪಿಟಿಐ ಚಿತ್ರ

ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ವೃದ್ಧಿ ಉದ್ದೇಶದಿಂದ ಪ್ರಧಾನಿ ಮೋದಿ ಭಾನುವಾರ ಎಲ್–ಸಿಸಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಈಜಿಪ್ಟ್‌ನಲ್ಲಿರುವ ಭಾರತ ಮೂಲದ ಸಂಪುಟ ಸದಸ್ಯರೊಂದಿಗೆ ಮತ್ತು ಪ್ರಮುಖ ತಜ್ಞರೊಂದಿಗೂ ಸಂವಾದ ನಡೆಸಲಿದ್ದಾರೆ.

11ನೇ ಶತಮಾನದ ಅಲ್–ಹಕೀಮ್ ಮಸೀದಿಗೆ ಭೇಟಿ ನೀಡಲಿದ್ದಾರೆ. ಹಾಗೆಯೇ ಹೆಲಿಯೊಪೊಲೀಸ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ ಪ್ರಥಮ ಮಹಾಯುದ್ಧ ಸಂದರ್ಭದಲ್ಲಿ ಈಜಿಪ್ಟ್‌ನಲ್ಲಿ ಶೌರ್ಯದಿಂದ ಹೋರಾಡಿ ಮಡಿದ ಭಾರತೀಯ ಯೋಧರಿಗೆ ನಮನ ಸಲ್ಲಿಸಲಿದ್ದಾರೆ.

ವುಹಾನ್‌ನಲ್ಲಿ ಕೊರೊನಾ ವೈರಸ್ ಸೋರಿಕೆಗೆ ಲಭಿಸದ ಪುರಾವೆ

ನ್ಯೂಯಾರ್ಕ್ (ರಾಯಟರ್ಸ್): ಚೀನಾದ ವುಹಾನ್ ವೈರಾಲಜಿ ಸಂಸ್ಥೆಯಲ್ಲಿಯೇ (ಡಬ್ಲ್ಯುಐವಿ) ಕೊರೊನಾ ವೈರಸ್ ಸೋರಿಕೆಯಾಗಿದೆ ಎಂಬುದಕ್ಕೆ ಯಾವುದೇ ನೇರ ಪುರಾವೆಗಳಿಲ್ಲ ಎಂದು ಅಮೆರಿಕದ ಗುಪ್ತಚರ ಏಜೆನ್ಸಿಗಳು ಹೇಳಿವೆ.

ಆದರೆ, ಈ ಕುರಿತು ಶುಕ್ರವಾರ ಹೊರಬಿದ್ದಿರುವ ಏಜೆನ್ಸಿಗಳ ನಾಲ್ಕು ಪುಟದ ಅಧಿಕೃತ ವರದಿಯು, ವುಹಾನ್‌ನ ಪ್ರಯೋಗಾಲಯದಿಂದ ವೈರಸ್ ಸೋರಿಕೆಯಾಗಿರುವ ಸಾಧ್ಯತೆಯನ್ನು ತಳ್ಳಿಹಾಕಿಲ್ಲ. ಸೋರಿಕೆಯ ಮೂಲವನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ ಎಂದು ಹೇಳಿದೆ.

ಕೊರೊನಾ ಸಾಂಕ್ರಾಮಿಕ ಸೃಷ್ಟಿಯಾದ ಬಳಿಕ ವುಹಾನ್ ಪ್ರಯೋಗಾಲಯದಿಂದ ವೈರಸ್ ಸೋರಿಕೆಯಾಗಿದೆ ಎಂಬ ಆರೋಪ ಕೇಳಿಬಂದಿತ್ತು.

ವೈರಸ್‌ನ ನೈಜ ಮೂಲ ನೈಸರ್ಗಿಕವೇ ಅಥವಾ ಮಾನವ ನಿರ್ಮಿತವೇ ಎಂಬುದನ್ನು ಸೆಂಟ್ರಲ್ ಇಂಟಲಿಜೆನ್ಸಿ ಸೇರಿದಂತೆ ಇತರ ಏಜೆನ್ಸಿಗಳು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ. ಊಹೆಗಳ ಮೂಲ ಕೊನೆಗೂ ಪತ್ತೆಯಾಗಿಲ್ಲ ಎಂದು ವಿವರಿಸಲಾಗಿದೆ.

ವುಹಾನ್‌ನಲ್ಲಿ ಮೊದಲು ವೈರಸ್ ಸೋರಿಕೆಯಾಯಿತು. ಬಳಿಕ ಅದು ವಿಶ್ವದಾದ್ಯಂತ ವ್ಯಾಪಿಸಿತು ಎಂಬುದಕ್ಕೆ ಸಂಬಂಧಿಸಿದಂತೆ ವ್ಯಾಪಕ ತನಿಖೆ ನಡೆಸಲಾಗಿದೆ. ಆದರೆ, ಇದನ್ನು ಪುಷ್ಟೀಕರಿಸುವ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಕೊರೊನಾ ಸಾಂಕ್ರಾಮಿಕ ಸೃಷ್ಟಿಗೂ ಮೊದಲು ಡಬ್ಲ್ಯುಐವಿ ಸಂಸ್ಥೆಯ ಸಿಬ್ಬಂದಿಯು ಸಾರ್ಸ್–ಕೋವ್2 ವೈರಸ್‌ನ ಸಂಶೋಧನೆಯಲ್ಲಿ ತೊಡಗಿದ್ದರೆ ಅಥವಾ ಇವರೇ ವೈರಸ್‌ನ ಸೃಷ್ಟಿಕರ್ತರು ಎಂಬುದಕ್ಕೆ ಯಾವುದೇ ಕುರುಹುಗಳಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

10TH ಪಾಸ್/ 12th ಪಾಸ್/ ಐಟಿಐ ಕ್ಯಾಂಡಿಡೇಟ್ಸ್ ಫ್ರೆಶರ್ಸ್ ಅಥವಾ ಗರಿಷ್ಠ ಎರಡು ವರುಷ ಅನುಭವ ಇರುವವರು ಮಿಷಿನರಿ ಅಸೆಂಬ್ಲಿ ಕೆಲಸಕ್ಕೆ ಬೇಕಾಗಿದ್ದಾರೆ Mobile: 7204593200

Tailors

LOOKING FOR Ladies Tailors for Cutting, Stitching ladies and kids dresses. Timing: 9 AM- 5 PM; Area: Bellandur, Bangalore; Salary- 10,000 Per Month; Contact- 9493317539

Wanted

ವಸತಿಗೃಹಕ್ಕೆ ಇಂಗ್ಲೀಷ್ ತಿಳಿದಿರುವ ಸ್ವಾಗತಕಾರರು(Receptionist) ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ : ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ,ಮೈಸೂರುಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080-22215903

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಬೇಕಾಗಿದ್ದಾರೆ: ಅಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ರೆಂಟಲ್ ಪ್ರಾಪರ್ಟೀಸ್

Accommodation Wanted

Industrial And Factory

WANTED NATURAL EXTRACT MANUFACTURING FACILITY FOR RENT
Require factory equipped with manufacturing facilities like SS Reactors, Distillation Column and solvent storage facility on Rental basis on long term.
Interested parties may contact: 7034 118 881 pridekerala@gmail.com

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ

Business to Business

Others

ಹೊಸ ಉದ್ಯಮ ಮತ್ತು ಹಳೆ ಉದ್ಯಮ ಉತ್ತೇಜನಕ್ಕಾಗಿ ಹಾಗೂ Business Improvement ಮಾಡಲು ಮಾಹಿತಿಗಾಗಿ ಸಂಪರ್ಕಿಸಿ: 7406009827, 9880788091

ಶಿಕ್ಷಣ

Training

KHADI VILLAGE Industries Commission Professional Training Associate Sgect Academy Mahalakshmi Layout Starts Skill Training Basic And Advanced From 01 July 2023 Beautician Tailoring Computer. Contact 9480322851, 6363825507, 9483141411

ಭವಿಷ್ಯ

Astrology

'ವಶೀಕರಣ ಮಾಂತ್ರಿಕರು' ಪ್ರೇಮವಿಚಾರ, ಮದುವೆ, ಸಾಲಬಾಧೆ, ವ್ಯಾಪಾರ, ಮನೆಯಲ್ಲಿನ ಅಶಾಂತಿ, ಅನಾರೋಗ್ಯ, ಮಾನಸಿಕ ತೊಂದರೆಗಳಿಗೆ ದೈವಿಕ ಪೂಜಾ ಶಕ್ತಿಯಿಂದ ಫೋನಿನ ಮೂಲಕ ಪರಿಹಾರ.9964108888 (ವೀಡಿಯೋ ಕಾಲ್ ಗೆ ಲಭ್ಯವಿರುತ್ತಾರೆ).

ಕೇರಳ ಮಂತ್ರವಾದಿ ಶ್ರೀನಿವಾಸ್ ಎಂ. ಮುಗ್ಗೋಳ್, ತೀರ್ಥಹಳ್ಳಿ. 9632545506, 7892446291 ನಿಮ್ಮೆಲ್ಲಾ ಕಠಿಣ ಗುಪ್ತ ಸಮಸ್ಯೆಗೆ ಪರಿಹಾರ ಮಾಡುತ್ತಾರೆ.

ಪ್ರವಾಸ

Travel

★13.07.2023 8/13ದಿನ★ ದೆಹಲಿ,ಆಗ್ರಾ,ಪ್ರಯಾಗ, ಗಯ,ಕಾಶಿ ಪ್ರವಾಸ., 15.08.2023 10ದಿನ ಗುಜರಾತ್,ಉಜ್ಜಯಿನಿ, ಓಂಕಾರೇಶ್ವರ.31.08.2023 16ದಿನ 95ದಿವ್ಯದೇಶ ಪ್ರವಾಸ, 29.07.2023 ತಮಿಳುನಾಡು 12ದಿನ 36ಸುಬ್ರಹ್ಮಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

30.6.2023 7ದಿನಗಳು ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನಗಳ ಚಾರ್ ಧಾಮ್ ಯಾತ್ರೆ. ಅಕ್ಟೋಬರ್ ಕಾಶಿ. ನವೆಂಬರ್ ಗುಜರಾತ್. 9448792891.

Pilgrimage Tours

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್ 20/07 ಕಾಶಿ,ಅಯೋಧ್ಯ. 10/08 ನೇಪಾಳ ಮುಕ್ತಿನಾಥ, ಪಶುಪತಿನಾಥ 1/09 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್ 9591017782, 9964527782

ಪ್ರಜಾವಾಣಿ To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
9901641752 : 9886213331
080 - 45557163 / 164

ಪಿಎಂ ಕೇರ್ಸ್ ಫಂಡ್: ತನಿಖೆಗೆ ಆಗ್ರಹ

ಮುಂಬೈ (ಪಿಟಿಐ): ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಪಿಎಂ ಕೇರ್ಸ್ ಫಂಡ್ ಕುರಿತು ಶನಿವಾರ ತನಿಖೆಗೆ ಆಗ್ರಹಿಸುವ ಮೂಲಕ, ಕೋವಿಡ್ ಸೌಲಭ್ಯ ಸಂಬಂಧ ಬೃಹತ್ ಹಗರಣದಲ್ಲಿ ತಮ್ಮ ಪಕ್ಷಕ್ಕೆ ಆಪ್ತರಾದ ಕೆಲವರ ವಿರುದ್ಧ ಜಾರಿ ನಿರ್ದೇಶನಾಲಯದ (ಇ.ಡಿ) ಕ್ರಮಕ್ಕೆ ತಿರುಗೇಟು ನೀಡಿದ್ದಾರೆ.

ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಕೈಗೊಂಡ ಕೆಲಸಗಳ ಕುರಿತು ಸರ್ಕಾರ ತನಿಖೆ ನಡೆಸಲಿ' ಎಂದು ಸವಾಲು ಹಾಕಿದರು.

'ನಾವು ಯಾವುದೇ ತನಿಖೆಗೂ ಹೆದರುವುದಿಲ್ಲ. ಉತ್ತರಪ್ರದೇಶ, ಗುಜರಾತ್ ಹಾಗೂ ಮಹರಾಷ್ಟ್ರದ ಏಕನಾಥ ಶಿಂದೆ ನೇತೃತ್ವದ ಸರ್ಕಾರಗಳೆಲ್ಲವೂ ಬಿಜೆಪಿಯಿಂದ ನಿಯಂತ್ರಿಸಲ್ಪಟ್ಟವೆ. ನೀವು (ಸರ್ಕಾರ) ತನಿಖೆ ಮಾಡಲು ಬಯಸುವಿರಾದರೆ, ಠಾಣೆ ನಗರ ಪಾಲಿಕೆ, ಪಿಂಪ್ರಿ–ಚಿಂಚ್‌ವಾಡಾ, ಪುಣೆ ಮತ್ತು ನಾಗ್ಪುರದ ಸ್ಥಳೀಯ ಸಂಸ್ಥೆಗಳ ಕುರಿತೂ ತನಿಖೆ ಮಾಡಬೇಕು' ಎಂದೂ ಅವರು ಆಗ್ರಹಿಸಿದರು.

'ಪಿಎಂ ಕೇರ್ಸ್ ಫಂಡ್ ಬಗ್ಗೆಯೂ ತನಿಖೆಯಾಗಲಿ. ಪಿಎಂ ಕೇರ್ಸ್ ಫಂಡ್ ಯಾವುದೇ ತನಿಖೆ ವ್ಯಾಪ್ತಿಗೆ ಬರುವುದಿಲ್ಲ. ಅದರಲ್ಲಿ ಲಕ್ಷಾಂತರ, ಸಾವಿರಾರು ಕೋಟಿ ಮೊತ್ತದ ಹಣವು ಸಂಗ್ರಹವಾಗಿದೆ. ಹಲವು ವೆಂಟಿಲೇಟರ್‌ಗಳು ಸಹ ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಈ ಬಗ್ಗೆ ನಾವೂ ಕೂಡಾ ತನಿಖೆ ನಡೆಸುತ್ತೇವೆ' ಎಂದರು.

ಶಿವಸೇನಾದ (ಯುಬಿಟಿ) ನಾಯಕರಾದ ಸಂಜಯ್ ರಾವುತ್, ಆದಿತ್ಯ ಠಾಕ್ರೆ ಮತ್ತು ಬಿಎಂಸಿಯ ಕೇಂದ್ರ ಖರೀದಿ ಇಲಾಖೆಗೆ ನಿಕಟವಾಗಿರುವ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಇ.ಡಿ ಇತ್ತೀಚೆಗೆ ಶೋಧ ಕಾರ್ಯ ಕೈಗೊಂಡಿತ್ತು.

ಬಿಜೆಪಿಗೆ ತಿರುಗೇಟು ನೀಡಿದ ಉದ್ಧವ್

ಮುಂಬೈ (ಪಿಟಿಐ): ಪಟ್ನಾದಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯಲ್ಲಿ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರ ಪಕ್ಕದಲ್ಲಿ ಶಿವಸೇನಾ ಅಧ್ಯಕ್ಷ (ಯುಬಿಟಿ) ಉದ್ಧವ್ ಠಾಕ್ರೆ ಅವರು ಕುಳಿತಿದ್ದಕ್ಕೆ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದ್ದು, ಶನಿವಾರ ಇದಕ್ಕೆ ಪ್ರತಿಕ್ರಿಯಿಸಿರುವ ಉದ್ಧವ್ ಅವರು, 'ನಾನು ಉದ್ದೇಶಪೂರ್ವಕವಾಗಿಯೇ ಮುಫ್ತಿ ಅವರ ಪಕ್ಕ ಕೂತಿದ್ದೆ' ಎಂದು ಹೇಳಿದರು.

ಅಲ್ಲದೇ ಮುಫ್ತಿ ಅವರು ಬಿಜೆಪಿಯ ಉನ್ನತ ನಾಯಕರೊಡನೆ ಕುಳಿತಿರುವ ಫೋಟೊಗಳನ್ನು ಸಹ ಪ್ರದರ್ಶಿಸಿದರು. ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, 'ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು (370ನೇ ವಿಧಿ) ರದ್ದುಗೊಳಿಸಬಾರದು ಎಂಬ ಷರತ್ತಿನ ಮೇಲೆ ಪಿಡಿಪಿ–ಬಿಜೆಪಿ ನಡುವೆ ಮೈತ್ರಿಯೇರ್ಪಟ್ಟಿದ್ದಾಗಿ ಮುಫ್ತಿ ಅವರು ನನಗೆ ಹೇಳಿದರು' ಎಂದು ತಿಳಿಸಿದರು.

ಶುಕ್ರವಾರದಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು, 'ತಮ್ಮ ರಾಜಕೀಯ ಕುಟುಂಬಗಳನ್ನು ಹಾಗೂ ಸಾಮ್ರಾಜ್ಯಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ವಿರೋಧ ಪಕ್ಷದವರು ಸಭೆ ಸೇರಿದ್ದಾರೆ' ಎಂದು ಹೇಳಿದ್ದರು. ಇದಕ್ಕೆ ತಿರುಗೇಟು ನೀಡಿರುವ ಉದ್ಧವ್ ಅವರು, 'ಬಿಜೆಪಿಯ ಒಬ್ಬ ಹಿರಿಯ ನಾಯಕ ಈ ರೀತಿಯ ಕೀಳುಮಟ್ಟಕ್ಕೆ ಇಳಿಯಬಾರದು' ಎಂದರು.

'ಪಾಸ್‌ಪೋರ್ಟ್ ಸೇವಾ 2.0ಗೆ ಶೀಘ್ರ ಚಾಲನೆ'

ಪ್ರಜಾವಾಣಿ ವಾರ್ತೆ

ಎಸ್. ಜೈಶಂಕರ್

ಬೆಂಗಳೂರು: ಹೊಸ ಪಾಸ್‌ಪೋರ್ಟ್‌ಗಳನ್ನು ಒದಗಿಸುವ ಮತ್ತು ಇ– ಪಾಸ್‌ಪೋರ್ಟ್‌ಗಳ ಉನ್ನತೀಕರಣದಂಥ ಕಾರ್ಯಕ್ರಮಗಳನ್ನು ಒಳಗೊಂಡಿರುವ ಎರಡನೇ ಹಂತದ ಪಾಸ್‌ಪೋರ್ಟ್ ಸೇವಾ ಯೋಜನೆಗೆ (ಪಿಎಸ್‌ಪಿ– ವರ್ಷನ್ 2.0) ಭಾರತ ಸದ್ಯದಲ್ಲೇ ಚಾಲನೆ ನೀಡಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಪಾಸ್‌ಪೋರ್ಟ್ ಸೇವಾ ದಿವಸವಾದ ಶನಿವಾರ ಘೋಷಣೆ ಮಾಡಿದ್ದಾರೆ.

ಈ ಕುರಿತು ಜೈಶಂಕರ್ ಅವರು ಹೊರಡಿಸಿರುವ ಪತ್ರದ ಚಿತ್ರವನ್ನು ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಪಾಸ್‌ಪೋರ್ಟ್ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳನ್ನು ಜನರಿಗೆ ಸಕಾಲಿಕವಾಗಿ, ಪಾರದರ್ಶಕವಾಗಿ ಮತ್ತು ಸಮರ್ಥ ರೀತಿಯಲ್ಲಿ ದೊರಕುವಂತೆ ಮಾಡಬೇಕೆಂದು ಭಾರತ ಮತ್ತು ವಿದೇಶಗಳ ಪಾಸ್‌ಪೋರ್ಟ್ ಸೇವಾ ಸಂಸ್ಥೆಗಳಿಗೆ ಜೈಶಂಕರ್ ಅವರು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಾದ 'ಸುಲಲಿತ ಜನಜೀವನ' (ಈಸ್ ಆಫ್ ಲಿವಿಂಗ್) ಆಶಯದ ಅಡಿ ಪಾಸ್‌ಪೋರ್ಟ್ ಸೇವೆಗಳನ್ನು ಉನ್ನತೀಕರಿಸಲಾಗುತ್ತಿದೆ.

ಇಎಎಸ್‌ಇ (ಈಸ್) ಎಂಬುದಕ್ಕೆ ಅವರು ವಿವರಣೆಯನ್ನೂ ಕೊಟ್ಟಿದ್ದಾರೆ. ಇ ಎಂದರೆ ಡಿಜಿಟಲ್ ಸೌಲಭ್ಯ ಬಳಸಿ ನಾಗರಿಕರಿಗೆ ಪಾಸ್‌ಪೋರ್ಟ್ ಸೇವೆಯನ್ನು ಉತ್ತಮಗೊಳಿಸುವುದು. ಎ– ಕೃತಕ ಬುದ್ಧಮತ್ತೆ ಆಧರಿತ ಸೇವಾ ಸೌಲಭ್ಯ, ಎಸ್– ಚಿಪ್ ಹೊಂದಿರುವ ಈ–ಪಾಸ್‌ಪೋರ್ಟ್ ಒದಗಿಸುವ ಮೂಲಕ ವಿದೇಶ ಪ್ರಯಾಣ ಸುಲಭಗೊಳಿಸುವುದು, ಇ– ದತ್ತಾಂಶ ಭದ್ರತೆಯನ್ನು ಉನ್ನತೀಕರಿಸುವುದು ಎಂದು ಅವರು ವಿವರಿಸಿದ್ದಾರೆ.

ಪಾಸ್‌ಪೋರ್ಟ್ ಸೇವಾ ದಿವಸದ ಅಂಗವಾಗಿ ಭಾರತ ಮತ್ತು ವಿದೇಶಗಳಲ್ಲಿಯ ಪಾಸ್‌ಪೋರ್ಟ್ ಜಾರಿ ಮಾಡುವ ಎಲ್ಲಾ ಪ್ರಾಧಿಕಾರಗಳು ಮತ್ತು ಕೇಂದ್ರೀಯ ಪಾಸ್‌ಪೋರ್ಟ್ ಸಂಸ್ಥೆಯ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಲು ಸಂತೋಷವಾಗುತ್ತಿದೆ. ಪಾಸ್‌ಪೋರ್ಟ್ ಸೇವೆಯಲ್ಲಿ ಅತ್ಯುತ್ತಮವಾದುದನ್ನೇ ನೀಡುವ ನಿಟ್ಟಿನಲ್ಲಿ ಭಾರತದ ಈವರೆಗಿನ ಸಾಧನೆಯನ್ನು ಸಂಭ್ರಮಿಸಲು ಇದು ಅತ್ಯಂತ ಸೂಕ್ತವಾದ ಸಂದರ್ಭ ಎಂದು ಅವರು ಹೇಳಿದ್ದಾರೆ.

ಓಮೈಕ್ರಾನ್ ಕೇಂದ್ರಿತ ಬೂಸ್ಟರ್ ಲಸಿಕೆ ಬಿಡುಗಡೆ

ನವದೆಹಲಿ (ಪಿಟಿಐ): ಕೊರೊನ ವೈರಸ್ ಉಪತಳಿ ಓಮೈಕ್ರಾನ್ ಕೇಂದ್ರಿತವಾಗಿ ಅಭಿವೃದ್ಧಿ ಪಡಿಸಲಾಗಿರುವ ಎಂಆರ್‌ಎನ್‌ಎ ಆಧರಿತ ಕೋವಿಡ್ ಬೂಸ್ಟರ್ ಲಸಿಕೆ 'ಜೆಮ್‌ಕೋವ್ಯಾಕ್–ಒಎಂ' ಅನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಶನಿವಾರ ಬಿಡುಗಡೆ ಮಾಡಿದರು.

ಜೈವಿಕ ತಂತ್ರಜ್ಞಾನ ಇಲಾಖೆ (ಡಿಬಿಟಿ), ಜೈವಿಕ ತಂತ್ರಜ್ಞಾನ ಉದ್ಯಮ ಸಂಶೋಧನಾ ಸಹಕಾರ ಮಂಡಳಿ (ಬಿಐಆರ್‌ಎಸಿ) ಸಹಕಾರದೊಂದಿದೆ ಜೆನ್ನೊವಾ ಸಂಸ್ಥೆಯು ಈ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ. ದೇಶೀಯ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸಲಾಗಿರುವ ಮೊದಲ ಭಾರತೀಯ ಎಂಆರ್‌ಎನ್‌ಎ ಆಧರಿತ ಲಸಿಕೆ ಇದಾಗಿದೆ.

ಟಿಸಿಎಸ್: 4 ನೌಕರರ ಅಮಾನತು

ಮುಂಬೈ (ಪಿಟಿಐ): ನಿಯಮ ಉಲ್ಲಂಘನೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯು ನಾಲ್ವರು ಉದ್ಯೋಗಿಗಳನ್ನು ಅಮಾನತು ಮಾಡಿದೆ ಎಂದು ಮೂಲಗಳು ಹೇಳಿವೆ. ಈ ತಿಂಗಳ ಆರಂಭದಲ್ಲಿ ಅನಾಮಧೇಯ ದೂರು ಬಂದ ಬಳಿಕ ಈ ಕ್ರಮ ಕೈಗೊಂಡಿರುವುದಾಗಿ ಕಂಪನಿ ತಿಳಿಸಿದೆ.

ಟಾಟಾ ಸಮೂಹದ, ಐ.ಟಿ. ಸೇವೆಗಳನ್ನು ರಫ್ತು ಮಾಡುವ ದೇಶದ ಪ್ರಮುಖ ಕಂಪನಿ ಆಗಿರುವ ಟಿಸಿಎಸ್, ಗುತ್ತಿಗೆ ಆಧಾರದ ಮೇಲೆ ನೌಕರರನ್ನು ಪೂರೈಸುವ ಕೆಲವು ಕಂಪನಿಗಳಿಗೂ ನಿಷೇಧ ಹೇರಿದೆ ಎಂದು ಮೂಲಗಳು ತಿಳಿಸಿವೆ.

ದೂರಿನಲ್ಲಿ ಮಾಡಲಾದ ಆರೋಪಗಳ ಕುರಿತು ತನಿಖೆ ನಡೆಸಲಾಗಿದೆ. ಕಂಪನಿಯಿಂದ ವಂಚನೆ ಆಗಿದೆ ಎಂದಾಗಲಿ ಅಥವಾ ಕಂಪನಿಗೆ ವಂಚನೆ ಆಗಿದೆ ಎಂದಾಗಲಿ ಆರೋಪ ಮಾಡಿಲ್ಲ ಎನ್ನುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ವಿವಿಧ ಯೋಜನೆಗಳಿಗೆ ಅಗತ್ಯವಾದ ಸಂಪನ್ಮೂಲ ಒದಗಿಸುವ ಮತ್ತು ಕೆಲಸಕ್ಕೆ ಸಂಪನ್ಮೂಲ ಕಂಡುಕೊಳ್ಳುವಲ್ಲಿ ಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯನ್ನು ಒದಗಿಸುವ ಜವಾಬ್ದಾರಿಯು ಸಂಪನ್ಮೂಲ ನಿರ್ವಹಣಾ ಸಮೂಹದ (ಆರ್‌ಎಂಜಿ) ಹೊಣೆಯಾಗಿದೆ. ಗುತ್ತಿಗೆ ಆಧಾರದಲ್ಲಿ ಉದ್ಯೋಗಿಗಳ ನೇಮಕ ಮಾಡಿರುವುದಕ್ಕೆ ಸಂಬಂಧಿಸಿದಂತೆ ಆರೋಪ ಕೇಳಿಬಂದಿದೆ. ಈ ಅಕ್ರಮದಲ್ಲಿ ಕಂಪನಿಯ ಯಾವುದೇ ಪ್ರಮುಖ ನಿರ್ವಾಹಕ ಸಿಬ್ಬಂದಿ ಭಾಗಿಯಾಗಿಲ್ಲ ಎಂದು ಟಿಸಿಎಸ್ ಸ್ಪಷ್ಟಪಡಿಸಿದೆ.

ಗುತ್ತಿಗೆ ನೌಕರರ ನೇಮಕಕ್ಕೆ ಸಂಬಂಧಿಸಿದಂತೆ ಕಂಪನಿಯ ಕೆಲವು ಉದ್ಯೋಗಿಗಳು ಮತ್ತು ಗುತ್ತಿಗೆ ಕಂಪನಿಗಳು ನಿಯಮ ಉಲ್ಲಂಘಿಸಿವೆ ಎಂದು ಷೇರುಪೇಟೆಗೆ ಟಿಸಿಎಸ್ ಮಾಹಿತಿ ನೀಡಿದೆ.

ಮಾರಾಟ ಮಾಡಿ ಮೂರು ತಿಂಗಳಾದರೂ ಸಿಗದ ಹಣ

ರಾಗಿ: ರೈತರಿಗೆ ₹80 ಕೋಟಿ ಬಾಕಿ

• ಚಿದಂಬರ ಪ್ರಸಾದ

ಹಾಸನ: ಬೆಂಬಲ ಬೆಲೆಯಡಿ ಭತ್ತ ಮಾರಾಟ ಮಾಡಿರುವ ಜಿಲ್ಲೆಯ ಎಲ್ಲ ರೈತರಿಗೂ ಹಣ ಪಾವತಿಸಿರುವ ಸರ್ಕಾರ, ರಾಗಿ ಮಾರಾಟ ಮಾಡಿರುವವರಿಗೆ ಮಾತ್ರ ₹80 ಕೋಟಿ ನೀಡದೆ ಬಾಕಿ ಉಳಿಸಿಕೊಂಡಿದೆ.

ಮಾರ್ಚ್ ಅಂತ್ಯದವರೆಗೆ ಪ್ರತಿ ಕ್ವಿಂಟಲ್‌ಗೆ ₹3,578 ದರದಲ್ಲಿ ರಾಗಿ ಖರೀದಿಸಲಾಗಿತ್ತು. ಆರಂಭದಲ್ಲಿ ಎಲ್ಲ ರೈತರಿಗೆ 10-15 ದಿನಗಳಲ್ಲಿಯೇ ಹಣ ಪಾವತಿಯಾಗಿತ್ತು. ಆದರೆ, ಮಾರ್ಚ್ ಮಧ್ಯಭಾಗದಲ್ಲಿ ರಾಗಿ ಮಾರಿರುವವರು ಹಣ ಸಿಗದೇ ಪರದಾಡುತ್ತಿದ್ದಾರೆ.

'ಮಳೆಗಾಲ ಪ್ರಾರಂಭವಾಗಿದ್ದು, ರೈತರು ಕೃಷಿ ಚಟುವಟಿಕೆ ಆರಂಭಿಸಬೇಕಿದೆ. ಉಳುಮೆ ಮಾಡಿ, ಬಿತ್ತನೆ ಬೀಜ, ಗೊಬ್ಬರ ತರಲು ಹಣ ಬೇಕು. ಇದುವರೆಗೂ ಹಣ ನೀಡದೇ ನಮ್ಮ ತಾಳ್ಮೆ ಪರೀಕ್ಷೆ ಮಾಡುತ್ತಿದ್ದಾರೆ' ಎಂಬುದು ರೈತರ ಆರೋಪ.

15,852 ರೈತರಿಗೆ ನೀಡಬೇಕಾಗಿರುವ ₹80.32 ಕೋಟಿ ಮುಂದಿನ ವಾರ ಪಾವತಿಯಾಗುವ ನಿರೀಕ್ಷೆ ಇದೆ – ಮಂಜುನಾಥ್, ನಾಫೆಡ್ ಖರೀದಿ ಕೇಂದ್ರದ ವ್ಯವಸ್ಥಾಪಕ

ಇನ್ನೊಂದು ವಾರದೊಳಗೆ ಹಣ ನೀಡದಿದ್ದರೆ, ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಚ್.ಕೆ.ರಘು, ರೈತಸಂಘದ ಜಿಲ್ಲಾ ಘಟಕದ ಅಧ್ಯಕ್ಷ

ರಾಗಿ ಖರೀದಿ ವಿವರ (ಕ್ವಿಂಟಲ್)	
ನೋಂದಣಿ ಮಾಡಿದ ರೈತರು	60,716
ಮಾರಾಟ ಮಾಡಿದ ರೈತರು	55,002
ಮಾರಾಟ ಮಾಡಿದ ಪ್ರಮಾಣ	7,97,607
ರೈತರಿಗೆ ಪಾವತಿಸಿರುವ ಹಣ	₹205 ಕೋಟಿ
ಬಾಕಿ ಉಳಿದಿರುವ ಹಣ	₹80.32 ಕೋಟಿ

'ಮಾರ್ಚ್ 15ರಂದು ನಾಫೆಡ್ ಕೇಂದ್ರಕ್ಕೆ ರಾಗಿ ಮಾರಾಟ ಮಾಡಿದೆ. ಈವರೆಗೂ ಬ್ಯಾಂಕ್ ಖಾತೆಗೆ ಹಣ ಬಂದಿಲ್ಲ. ಕೂಡಲೇ ಹಣ ನೀಡದಿದ್ದರೆ ತಹಶೀಲ್ದಾರ್ ಕಚೇರಿ ಎದುರು ಧರಣಿ ನಡೆಸಬೇಕಾಗುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿ ಗಮನ ಹರಿಸಬೇಕು' ಎಂದು ನುಗ್ಗೆಹಳ್ಳಿ ಸಮೀಪದ ರೈತ ಪಿಳ್ಳೇಗೌಡ ಒತ್ತಾಯಿಸಿದರು.

ಭತ್ತದ ಹಣ ಪಾವತಿ: 'ಈ ಬಾರಿ ಹೆಚ್ಚಿನ ರೈತರು ನಾಫೆಡ್ ಖರೀದಿ ಕೇಂದ್ರಗಳಲ್ಲಿ ಭತ್ತ ಮಾರಾಟಕ್ಕೆ ಹಿಂದೇಟು ಹಾಕಿದ್ದಾರೆ. ಕೇವಲ 339 ರೈತರು 6,710 ಕ್ವಿಂಟಲ್ ಭತ್ತ ಮಾರಾಟ ಮಾಡಿದ್ದಾರೆ. ಅವರಿಗೆ ಪಾವತಿಸಬೇಕಿದ್ದ ₹1.36 ಕೋಟಿ ಸಂಪೂರ್ಣವಾಗಿ ಪಾವತಿಸಲಾಗಿದೆ' ಎಂದು ನಾಫೆಡ್ ಖರೀದಿ ಕೇಂದ್ರದ ವ್ಯವಸ್ಥಾಪಕ ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ರಾಗಿ ಖರೀದಿ ಹೆಚ್ಚಾಗಿದ್ದು, ಕಾಲಕಾಲಕ್ಕೆ ಹಣ ಬಿಡುಗಡೆ ಮಾಡಲಾಗಿದೆ. ಮಾರ್ಚ್ ಮಧ್ಯಭಾಗದ ಬಳಿಕ ಮಾರಿದವರಿಗೆ ಹಣ ನೀಡುವುದು ವಿಳಂಬವಾಗಿದೆ' ಎಂದು ಹೇಳಿದರು.

ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಮತ್ತು ನಟಿ ಆಶಿಕಾ ರಂಗನಾಥ್ ಅವರು ವಧುವಿನ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದರು

ಜೋಯಾಲುಕ್ಕಾಸ್‌ನಿಂದ ವಧುವಿನ ಆಭರಣ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಯಾಲುಕ್ಕಾಸ್ ಕಂಪನಿಯು 'ಸೀತಾ ಕಲ್ಯಾಣಂ' ಹೆಸರಿನಲ್ಲಿ ವಧುವಿನ ಚಿನ್ನಾಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಈ ವಿಶೇಷ ಸಂಗ್ರಹವು ದೇಶದಾದ್ಯಂತ ಇರುವ ಕಂಪನಿಯ ಎಲ್ಲ ಮಳಿಗೆಗಳಲ್ಲಿಯೂ ಲಭ್ಯವಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದ ಸಾಂಪ್ರದಾಯಿಕ ಮೌಲ್ಯಗಳಿಗೆ ಮಾನ್ಯತೆ ನೀಡುವ ಇಂದಿನ ಆಧುನಿಕ ವಧುವಿಗಾಗಿ ಈ ವಿಶಿಷ್ಟ್ಯ ಸಂಗ್ರಹವನ್ನು ವಿನ್ಯಾಸಗೊಳಿಸಲಾಗಿದೆ. ಉತ್ಕೃಷ್ಟ ಮೌಲ್ಯ ತಂದುಕೊಡುವ ಆಭರಣಗಳನ್ನು ಸೃಷ್ಟಿಸುವಲ್ಲಿ ಜೋಯಾಲುಕ್ಕಾಸ್ ಸದಾ ಗಮನ ಹರಿಸುತ್ತದೆ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ತಿಳಿಸಿದ್ದಾರೆ.

ಹುತಾತ್ಮರ ಸ್ಮಾರಕಕ್ಕೆ ಶಂಕುಸ್ಥಾಪನೆ

ಶ್ರೀನಗರ: ಇಲ್ಲಿನ ಪ್ರತಾಪ್ ಉದ್ಯಾನದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ಹುತಾತ್ಮರ ಸ್ಮಾರಕ'ಕ್ಕೆ (ಬಲಿದಾನ್ ಸ್ತಂಭ್) ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

'ಶ್ರೀನಗರ ಸ್ಮಾರ್ಟ್ ಸಿಟಿ ಯೋಜನೆಯ ಭಾಗವಾಗಿ ಹುತಾತ್ಮರ ಸ್ಮಾರಕ ನಿರ್ಮಿಸಲಾಗುತ್ತಿದ್ದು, ಇದು ರಾಷ್ಟ್ರಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಹುತಾತ್ಮರಿಗೆ ಸಲ್ಲಿಸುವ ಗೌರವವಾಗಿದೆ' ಎಂದು ಹೇಳಿದ್ದಾರೆ. ಇದಕ್ಕೂ ಮುನ್ನ ಶಾ ಅವರು ಜುಲೈ 1ರಿಂದ ಪ್ರಾರಂಭವಾಗಲಿರುವ ಅಮರನಾಥ ಯಾತ್ರೆಯ ಸಿದ್ಧತೆಗಳ ಪರಿಶೀಲನೆಗಾಗಿ ಬಾಲ್‌ಟಾಲ್‌ಗೆ ಭೇಟಿ ನೀಡಿದರು.

ಅಮರನಾಥ ಯಾತ್ರೆಗೆ ಬರುವ ಯಾತ್ರಾರ್ಥಿಗಳಿಗೆ ಮೇಘಸ್ಫೋಟದಂಥ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ರಕ್ಷಣೆ ಒದಗಿಸಲು ತ್ವರಿತ ಪ್ರತಿಕ್ರಿಯೆ ತಂಡಗಳಿಗೆ (ಕ್ಯುಆರ್‌ಟಿ) ಶಾ ಅವರು ನಿರ್ದೇಶನ ನೀಡಿದರು.

ಜಮ್ಮು–ಕಾಶ್ಮೀರದಲ್ಲಿ 370ನೇ ವಿಧಿಯನ್ನು ರದ್ದುಪಡಿಸಿದ ಬಳಿಕ ಶಾಂತಿಯುತ ವಾತಾವರಣ ನಿರ್ಮಾಣ ಮಾಡಲು, ಭಯೋತ್ಪಾದಕರನ್ನು ನಿರ್ಮೂಲನೆ ಮಾಡಲು ತೊಡಗಿಕೊಂಡಿರುವ ಭದ್ರತಾ ಪಡೆಗಳ ಕಾರ್ಯಗಳನ್ನು ಅಮಿತ್ ಶಾ ಶ್ಲಾಘಿಸಿದರು ಎಂದು ಮೂಲಗಳು ತಿಳಿಸಿವೆ.

ಭಾರತದಲ್ಲಿ ₹1.23 ಲಕ್ಷ ಕೋಟಿ ಹೆಚ್ಚುವರಿ ಹೂಡಿಕೆ: ಅಮೆಜಾನ್

ವಾಷಿಂಗ್ಟನ್ (ಪಿಟಿಐ/ರಾಯಿಟರ್ಸ್): ಅಮೆಜಾನ್ ಕಂಪನಿಯು ಭಾರತದಲ್ಲಿ ಹೆಚ್ಚುವರಿಯಾಗಿ ₹1.23 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡುವುದಾಗಿ ತಿಳಿಸಿದೆ. ಇದರಿಂದ ಕಂಪನಿಯು ಭಾರತದಲ್ಲಿ ಹೂಡಿಕೆ ಮಾಡಲಿರುವ ಒಟ್ಟು ಮೊತ್ತವು ₹2.13 ಲಕ್ಷ ಕೋಟಿಗೆ ತಲುಪಿದೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಅಮೆಜಾನ್ ಸಿಇಒ ಆ್ಯಂಡಿ ಜಸ್ಸಿ, ಪ್ರಧಾನಿ ಮೋದಿ ಅವರೊಂದಿಗಿನ ಮಾತುಕತೆಯು ಫಲಪ್ರದವಾಗಿತ್ತು. ಭಾರತದಲ್ಲಿ ಹೆಚ್ಚು ಹೂಡಿಕೆ ಮಾಡುತ್ತಿರುವ ಕಂಪನಿಗಳಲ್ಲಿ ಅಮೆಜಾನ್ ಕೂಡಾ ಸೇರಿಕೊಂಡಿದೆ. ಈವರೆಗೆ ₹90,200 ಕೋಟಿ ಹೂಡಿಕೆ ಮಾಡಲಾಗಿದೆ. ಇನ್ನೂ ₹1.23 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಲು ಉದ್ದೇಶಿಸಲಾಗಿದೆ. ಇದರಿಂದಾಗಿ ಒಟ್ಟು ಹೂಡಿಕೆಯು ₹2.13 ಲಕ್ಷ ಕೋಟಿಯಷ್ಟು ಆಗಲಿದೆ. ಹೀಗಾಗಿ ಭವಿಷ್ಯದ ಪಾಲುದಾರಿಕೆಗಾಗಿ ನಾವು ಎದುರುನೋಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಮೋದಿ ಅವರು ಅಮೆಜಾನ್ ಅಧ್ಯಕ್ಷ ಮತ್ತು ಸಿಇಒ ಜೊತೆ ಮಾತುಕತೆಯಲ್ಲಿ ಪ್ರಮುಖವಾಗಿ ಇ-ಕಾಮರ್ಸ್ ಮತ್ತು ಭಾರತದಲ್ಲಿ ಸರಕು ಸಾಗಣೆ ವಲಯದಲ್ಲಿ ಅಮೆಜಾನ್ ಜೊತೆಗೆ ಹೆಚ್ಚಿನ ಸಹಭಾಗಿತ್ವ ಸಾಧಿಸುವ ಕುರಿತು ಚರ್ಚೆ ನಡೆಯಿತು ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಟ್ವೀಟ್‌ನಲ್ಲಿ ತಿಳಿಸಿದೆ.

ಗೂಗಲ್‌ನಿಂದ ಫಿನ್‌ಟೆಕ್ ಕಾರ್ಯಾಚರಣಾ ಕೇಂದ್ರ: ಗೂಗಲ್ ಕಂಪನಿಯು ಗುಜರಾತ್‌ನ ಗಿಫ್ಟ್ ಸಿಟಿಯಲ್ಲಿ ಜಾಗತಿಕ ಫಿನ್‌ಟೆಕ್ ಕಾರ್ಯಾಚರಣಾ ಕೇಂದ್ರವನ್ನು ಸ್ಥಾಪಿಸಲಿದೆ ಎಂದು ಸಿಇಒ ಸುಂದರ್ ಪಿಚೈ ಅವರು ಮೋದಿ ಅವರಿಗೆ ತಿಳಿಸಿದ್ದಾರೆ. ಡಿಜಿಟಲ್ ಇಂಡಿಯಾದ ದೂರದೃಷ್ಟಿ ಮತ್ತು ಆರ್ಥಿಕ ಅವಕಾಶಗಳ ವಿಷಯದಲ್ಲಿ ಭಾರತವು ಸಾಧಿಸಿರುವ ಪ್ರಗತಿಯು ಉತ್ತೇಜನಕಾರಿ ಆಗಿದೆ ಎಂದು ಪಿಚೈ ಹೇಳಿದ್ದಾರೆ.

ಬೋಯಿಂಗ್ ಹೂಡಿಕೆ: ಬೋಯಿಂಗ್ ಕಂಪನಿಯು ಭಾರತದಲ್ಲಿ ಮೂಲ ಸೌಕರ್ಯ ಮತ್ತು ಪೈಲಟ್‌ಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ₹8,190 ಕೋಟಿ ಹೂಡಿಕೆ ಮಾಡುವುದಾಗಿ ಹೇಳಿದೆ. ಶ್ವೇತ ಭವನ ಹೊರಡಿಸಿರುವ ಪ್ರಕಟಣೆಯಲ್ಲಿ ಈ ಮಾಹಿತಿ ಇದೆ.

ಗರಿಷ್ಠ ಮಟ್ಟದಲ್ಲಿ ಮಾರುಕಟ್ಟೆ ಮೌಲ್ಯ; ಲಾಭ ಗಳಿಕೆ ನಿರೀಕ್ಷೆ

ಎಫ್‌ಪಿಐ ಒಳಹರಿವು ಇಳಿಕೆ ಸಂಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಷೇರುಪೇಟೆಗಳ ಮೌಲ್ಯವು ಏರಿಕೆ ಕಾಣುತ್ತಿರುವುದರಿಂದ ವಿದೇಶಿ ಬಂಡವಾಳ (ಎಫ್‌ಪಿಐ) ಒಳಹರಿವು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ಮುಂಬೈ ಮತ್ತು ರಾಷ್ಟ್ರೀಯ ಷೇರುಪೇಟೆಗಳು ಏರುಮುಖ ಹಾದಿಯಲ್ಲಿದ್ದು, ಮಾರುಕಟ್ಟೆ ಬಂಡವಾಳ ಮೌಲ್ಯ ದಾಖಲೆ ಮಟ್ಟವನ್ನು ತಲುಪಿದೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ಬಡ್ಡಿದರ ಹೆಚ್ಚಾಗುತ್ತಿದೆ. ಈ ಕಾರಣಗಳಿಂದಾಗಿ ವಿದೇಶಿ ಬಂಡವಾಳ ಹೂಡಿಕೆದಾರರು ಲಾಭ ಮಾಡಿಕೊಳ್ಳುವತ್ತ ಗಮನ ಹರಿಸಬಹುದು ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮೇ ತಿಂಗಳಿನಂತೆಯೇ ಜೂನ್ ನಲ್ಲಿಯೂ ಬಂಡವಾಳ ಹೂಡಿಕೆಗೆ ವಿದೇಶಿ ಹೂಡಿಕೆದಾರರು ಗಮನ ಹರಿಸಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಜೂನ್ 23ರವರೆಗೆ ವಿದೇಶಿ ಬಂಡವಾಳ ಹೂಡಿಕೆದಾರರು ಭಾರತದ ಷೇರುಪೇಟೆಗಳಲ್ಲಿ ₹ 30,669 ಕೋಟಿ ಹೂಡಿಕೆ ಮಾಡಿದ್ದಾರೆ. ಈ ವರ್ಷದಲ್ಲಿ ಈವರೆಗೆ ಒಟ್ಟು ಹೂಡಿಕೆಯು ₹59,922 ಕೋಟಿಯಷ್ಟು ಆಗಿದೆ ಎಂದು ಅವರು ತಿಳಿಸಿದರು.

ಎಫ್‌ಪಿಐ ಹೊರಹರಿವು (ಕೋಟಿಗಳಲ್ಲಿ)



ಮೇ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರು ದಾಖಲೆಯ ₹43,838 ಕೋಟಿ ಹೂಡಿಕೆ ಮಾಡಿದ್ದರು.

ಹೆಚ್ಚು ಎಫ್‌ಪಿಐ ಆಕರ್ಷಿಸುವ ದೇಶಗಳ ಸಾಲಿನಲ್ಲಿ ಭಾರತದ ನಂತರ ಜಪಾನ್ ಇದೆ. ಚೀನಾ, ದಕ್ಷಿಣ ಕೊರಿಯಾ ಮತ್ತು ಥಾಯ್ಲೆಂಡ್‌ನಿಂದ ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ. ಭಾರತದಲ್ಲಿ ಹಣಕಾಸು, ವಾಹನ ಮತ್ತು ಬಂಡವಾಳ ಸರಕುಗಳಲ್ಲಿ ಹೂಡಿಕೆ ಮಾಡುತ್ತಿದ್ದು, ಐ.ಟಿ. ಮತ್ತು ಲೋಹ ವಲಯಗಳ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಜೂನ್ 23ಕ್ಕೆ ಕೊನೆಗೊಂಡ ವಾರದಲ್ಲಿ ದೇಶಿ ಷೇರುಪೇಟೆಗಳಲ್ಲಿ ಸಾಕಷ್ಟು ಏರಿಳಿತ ಕಂಡುಬಂದಿತು. ಸಾರ್ವಕಾಲಿಕ ದಾಖಲೆ ಮಟ್ಟದಲ್ಲಿ ವಹಿವಾಟು ನಡೆಸಿ ಮತ್ತೆ ಇಳಿಕೆ ಕಂಡಿತು.

ದೇಶದ ಆರ್ಥಿಕ ಬೆಳವಣಿಗೆಯು ಉತ್ತಮವಾಗಿ ಇರುವ ನಿರೀಕ್ಷೆಯ ಜೊತೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ಇಳಿಕೆ ಕಾಣುತ್ತಿದೆ. ಹೀಗಾಗಿ ಷೇರುಪೇಟೆಯು ಹೆಚ್ಚಿನ ಇಳಿಕೆ ಕಾಣುವ ಸಾಧ್ಯತೆ ಕಡಿಮೆ ಇದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹200-425
ದ್ವಿತಳಿ (ಬಿ.ವಿ)	₹278-559

ಮುಂಬೈ ಧಾರಣೆ

ಶೇಂಗಾ

24-6-2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1650)
ಒಂದು ವಾರದ ಡೆಲಿವರಿ	1645(1645)
ಸೋಯಾ ಕಚ್ಚಾ	870(865)
ಪಾಮ್ ವಾರದ ಡೆಲಿವರಿ	846(838)
ಸೂರ್ಯಕಾಂತಿ ಎಣ್ಣೆ ಕಚ್ಚಾ	830(820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ10ಗ್ರಾಂ
58,200 (58,350)
ಬೆಳ್ಳಿ ಕೆ.ಜಿ 68,400 (68,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಚೀಫ್ ಜಸ್ಟೀಸ್ ಕಪ್‌ನಲ್ಲಿ ಗೆದ್ದ 'ಥರ್ಡ್ ಅವೆನ್ಯೂ' ಕುದುರೆಯ ತರಬೇತುದಾರರಾದ ಆರ್ತಿ ಡಾಕ್ಟರ್ (ಬಲದಿಂದ ಎರಡನೆಯವರು) ಅವರಿಗೆ ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ (ಎಡದಿಂದ 3ನೆಯವರು) ಅವರು ಟ್ರೋಫಿ ವಿತರಿಸಿದರು. (ಎಡದಿಂದ) ಸಮಿತಿ ಸದಸ್ಯ ಅನೀಶ್ ಸೂದ್, ಸ್ಟ್ಯೂವರ್ಡ್ ಸತೀಶ್ ಎನ್.ಗೌಡ, ಟರ್ಫ್ ಕ್ಲಬ್ ಅಧ್ಯಕ್ಷ ಹಾಗೂ ಹಿರಿಯ ಸ್ಟ್ಯೂವರ್ಡ್ ಶಿವ್‌ಕುಮಾರ್ ಖೇಣಿ, ಸಮಿತಿ ಸದಸ್ಯರಾದ ಶಶಾ ಬಿಂದು ದಾಸ್, ಡಾ.ಸಿ.ಎ.ಪ್ರಶಾಂತ್ ಇದ್ದಾರೆ

ಗಾಲ್ಫ್: ಜಂಟಿ 28ನೇ ಸ್ಥಾನದಲ್ಲಿ ಚಿಕ್ಕರಂಗಪ್ಪ

ಚಿಯೊನನ್ (ಪಿಟಿಐ): ಭಾರತದ ಎಸ್.ಚಿಕ್ಕರಂಗಪ್ಪ ಅವರು ಇಲ್ಲಿ ನಡೆಯುತ್ತಿರುವ ಕೊರಿಯಾ ಓಪನ್ ಗಾಲ್ಫ್ ಟೂರ್ನಿಯ ಮೂರನೇ ಸುತ್ತಿನ ಬಳಿಕ ಜಂಟಿ 28ನೇ ಸ್ಥಾನದಲ್ಲಿದ್ದಾರೆ.

ವೂ ಜಿಯಾಂಗ್ ಹಿಲ್ಸ್ ಕಂಟ್ರಿ ಕ್ಲಬ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ಮೂರನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಅವರು 75 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು. ಮೂರು ಸುತ್ತುಗಳಲ್ಲಿ (69-73-75) ಅವರು ಒಟ್ಟು 217 ಸ್ಕೋರ್ ಮಾಡಿದ್ದಾರೆ.

ಭಾರತದ ಇನ್ನೊಬ್ಬ ಆಟಗಾರ ಹನಿ ಬೈಸೋಯಾ (73-72-75) ಅವರು ಜಂಟಿ 41ನೇ ಸ್ಥಾನದಲ್ಲಿದ್ದಾರೆ. ಭಾರತದ ಇಬ್ಬರು ಮಾತ್ರ ಅಂತಿಮ ಸುತ್ತಿನಲ್ಲಿ ಕಣದಲ್ಲಿ ಉಳಿದುಕೊಂಡಿದ್ದಾರೆ.

ವಿರಾಜ್ ಮಾದಪ್ಪ (74-76), ಎಸ್.ಎಸ್.ಪಿ.ಚೌರಾಸಿಯ (74-76), ಕರಣ್‌ದೀಪ್ ಕೊಚರ್ (80-71), ಅಜೀತೇಶ್ ಸಂಧು (77-76) ಮತ್ತು ರಾಹಿಲ್ ಗಂಗ್‌ಜೀ (76-77) ಅವರು ಎರಡನೇ ಸುತ್ತಿನ ಬಳಿಕ ಹೊರಬಿದ್ದರು.

ವಿನಾಯಿತಿ ಕೇಳಿರಲಿಲ್ಲ: ಸಾಕ್ಷಿ

ನವದೆಹಲಿ (ಪಿಟಿಐ): ಟ್ರಯಲ್ಸ್‌ನಿಂದ ವಿನಾಯಿತಿ ಪಡೆದಿರುವ ಕ್ರಮಕ್ಕೆ, ಇತರ ಕುಸ್ತಿಪಟುಗಳಿಂದ ವಿರೋಧ ವ್ಯಕ್ತವಾಗುತ್ತಿರುವಂತೆಯೇ, ಇತ್ತೀಚಿನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಆರು ಮಂದಿ ಕುಸ್ತಿಪಟುಗಳು ತಾವು ಭಾರತ ಒಲಿಂಪಿಕ್ ಸಂಸ್ಥೆಯಿಂದ (ಐಒಎ) ಈ ರೀತಿಯ 'ಅನುಕೂಲವನ್ನು' ಕೇಳಿರಲಿಲ್ಲ. ಹಾಗೇನಾದರೂ ಸಾಬೀತುಪಡಿಸಿದರೆ ಕುಸ್ತಿಯನ್ನು ತೊರೆಯುವುದಾಗಿ ಶನಿವಾರ ಹೇಳಿದ್ದಾರೆ.

ವಿನಾಯಿತಿ ನೀಡುವ ಐಒಎ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿದ್ದ ಲಂಡನ್ ಒಲಿಂಪಿಕ್ ಕಂಚಿನ ಪದಕ ವಿಜೇತ ಯೋಗೇಶ್ವರ ದತ್ ಅವರು, ತಿಂಗಳುಗಳ ಕಾಲ ಈ ಆರು ಮಂದಿ ಧರಣಿಯಲ್ಲಿ ತೊಡಗಿದ್ದು ಇಂಥ ಲಾಭ ಪಡೆಯಲಿಕ್ಕಾಗಿಯೇ ಎಂದು ಶುಕ್ರವಾರ ಪ್ರಶ್ನಿಸಿದ್ದರು. ಈ ಅನ್ಯಾಯದ ವಿರುದ್ಧ ಧ್ವನಿಯೆತ್ತುವಂತೆ ಜೂನಿಯರ್ ಪೈಲ್ವಾನರಿಗೆ, ಅವರ ತರಬೇತುದಾರರಿಗೆ ಮತ್ತು ಪೋಷಕರಿಗೆ ಸಲಹೆ ನೀಡಿದ್ದರು.

'ಟ್ರಯಲ್ಸ್‌ನಿಂದ ವಿನಾಯಿತಿ ನೀಡುವಂತೆ ನಾವೇನೂ ಕೇಳಿರಲಿಲ್ಲ. ಸಿದ್ಧತೆಗೆ ಸಮಯ ಕೇಳಿದ್ದೆವಷ್ಟೇ' ಎಂದು ಸಾಕ್ಷಿ ಮಲಿಕ್ ಸಾಮಾಜಿಕ ಮಾಧ್ಯಮಗಳಲ್ಲಿ ಹೇಳಿದ್ದಾರೆ.

'ಒಂದು ಸೆಣಸಾಟದ ಅರ್ಹತೆ ವಿರುದ್ಧ ನಿಮಗೇನಾದರೂ ತೊಂದರೆ ಇದ್ದಲ್ಲಿ ಕ್ರೀಡಾ ಸಚಿವರ ಬಳಿ ಹೋಗಬಹುದಿತ್ತು. ಅದನ್ನು ಬಿಟ್ಟು ಸಾಮಾಜಿಕ ಮಾಧ್ಯಮಗಳಲ್ಲಿ ನಂಜು ಕಾರುವುದನ್ನು ಬಯಸಿದಿರಿ' ಎಂದು ಬಜರಂಗ್ ಪೂನಿಯಾ ಹೇಳಿದ್ದಾರೆ. 'ನಾವು ವಿನಾಯಿತಿ ಕೇಳಿದ್ದೇವೆ ಎಂಬುದನ್ನು ಸಾಬೀತುಪಡಿಸಿದಲ್ಲಿ ಕುಸ್ತಿಯನ್ನೇ ಬಿಟ್ಟುಬಿಡುತ್ತೇವೆ' ಎಂದಿದ್ದಾರೆ.

ವಿಶೇಷ ಒಲಿಂಪಿಕ್ಸ್: ಸ್ಕೇಟಿಂಗ್‌ನಲ್ಲಿ ಭಾರತಕ್ಕೆ 9 ಪದಕ

ಬರ್ಲಿನ್ (ಪಿಟಿಐ): ಭಾರತದ ರೋಲರ್ ಸ್ಕೇಟಿಂಗ್ ಸ್ಪರ್ಧಿಗಳು ಇಲ್ಲಿ ನಡೆಯುತ್ತಿರುವ ವಿಶೇಷ ಒಲಿಂಪಿಕ್ಸ್‌ನಲ್ಲಿ ಮೂರು ಚಿನ್ನ ಸೇರಿದಂತೆ ಒಂಬತ್ತು ಪದಕಗಳನ್ನು ಗೆದ್ದುಕೊಂಡರು.

ಶುಕ್ರವಾರ ನಡೆದ ಸ್ಪರ್ಧೆಗಳಲ್ಲಿ ಮೊಹಮ್ಮದ್ ನಿಸಾರ್ (30 ಮೀ. ಸ್ಲಲೊಮ್), ಆರ್ಯನ್ ಮತ್ತು ಅಭಿಜಿತ್ (2X100 ಮೀ. ರಿಲೇ) ಅವರು ಚಿನ್ನ ತಮ್ಮದಾಗಿಸಿಕೊಂಡರು.

ಜೂಡೊ ಸ್ಪರ್ಧೆಯ ಪುರುಷರ ಲೆವೆಲ್–2 ವಿಭಾಗದಲ್ಲಿ ಪ್ರಿನ್ಸ್ ಸೋಲಂಕಿ ಕಂಚು ಹಾಗೂ ಮಹಿಳೆಯರ ಲೆವೆಲ್–3 ವಿಭಾಗದಲ್ಲಿ ಮುಸ್ಕಾನ್ ಅವರು ಚಿನ್ನ ಜಯಿಸಿದರು. ಮುಸ್ಕಾನ್, ತಮ್ಮ ಎರಡೂ ಬೌಟ್‌ಗಳನ್ನು ಗೆದ್ದು ಜೂಡೊದಲ್ಲಿ ಮೊದಲ ಚಿನ್ನ ತಂದುಕೊಟ್ಟರು.

ಟೇಬಲ್ ಟೆನಿಸ್‌ನಲ್ಲಿ ಮೂರು ಹಾಗೂ ಪವರ್‌ಲಿಫ್ಟಿಂಗ್‌ನಲ್ಲಿ ನಾಲ್ಕು ಪದಕಗಳು ಬಂದವು.

ಶುಕ್ರವಾರದ ಸ್ಪರ್ಧೆಗಳ ಅಂತ್ಯಕ್ಕೆ ಭಾರತ ತಂಡ 33 ಚಿನ್ನ, 37 ಬೆಳ್ಳಿ ಮತ್ತು 2 ಕಂಚುಗಳೊಂದಿಗೆ ಒಟ್ಟು 96 ಪದಕಗಳನ್ನು ಜಯಿಸಿದೆ.

ಬೆಂಗಳೂರು ರೇಸ್

ಎಲ್ವೆನಾರ್ ಗೆಲ್ಲುವ ನಿರೀಕ್ಷೆ

ಕೋಲ್ಟ್ಸ್ ಚಾಂಪಿಯನ್‌ಶಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಎಲ್ವೆನಾರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸನ್‌ವೇ ಲಾಗೂನ್ 1, ಡಬಲ್ ವಿಶನ್ 5, ಫೈರ್‌ಫಿಂಚ್ 6
2ನೇ ರೇಸ್: ಫೋರ್ಟ್ ನೆಲ್ಸನ್ 2, ರೋಮನ್ ಸ್ಪಿರಿಟ್ 1, ಸೂಪರ್ ಸಫೈರ್ 3
3ನೇ ರೇಸ್: ರಿವರ್ ಆಫ್ ಗಾಡ್ 4, ಮ್ಯಾಗ್ನಸ್ 3, ಶ್ಯಾಡೋ ಆಫ್ ದಿ ಮೂನ್ 5
4ನೇ ರೇಸ್: ಸ್ಟೆಲ್ಲಾರ್ ಗೋಲ್ಡ್ 1, ಬ್ರೂಸ್ ಆಲ್‌ಮೈಟಿ 2, ಲೆಕ್ಸ್ ಲುಥೋರ್ 2
5ನೇ ರೇಸ್: ರೌಡಿ 2, ವಿಕ್ಟೋರಿಯಾ ಪಂಚ್ 1, ಕಲಾಮಿಟ್ಸ್ 4
6ನೇ ರೇಸ್: ಸ್ಯಾಂಟೊರಿನೊ 4, ವರ್ಡ್ಸ್‌ಸ್ಮಿತ್ 3, ಟ್ರೆವಾಲಿಯಸ್ 2
7ನೇ ರೇಸ್: ಎಲ್ವೆನಾರ್ 5, ಕ್ರಿಸ್ಟೋಫಲ್ 1, ನಾಟಿ ಚಾರ್ಮರ್ 9
8ನೇ ರೇಸ್: ಸ್ಪಿರಿಟ್ ಆಫ್ ದಿ ರೋಸ್ 3, ಫಾರ್ಟಿ ನೈನರ್ 1, ಶೀರ್ ಬ್ಲಿಸ್ 4

ಉತ್ತಮ ಬೆಟ್: ಸನ್‌ವೇ ಲಾಗೂನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಸಮನ್ವಯ ಕಚೇರಿ, ಕರ್ನಾಟಕ ಗೃಹ ಮಂಡಳಿ, 3ನೇ, 4ನೇ ಮತ್ತು 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಕಾ.ಅ./ಬೆಂ.ನ.ಸ.ಕ/61/2023-24 ದಿನಾಂಕ: 23-06-2023
ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಸ್ಥಾಪಿತ ರಾಜ್ಯಮಟ್ಟದ ಪರಿಸರ ಪರಿಣಾಮ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕವು ಕರ್ನಾಟಕ ಗೃಹ ಮಂಡಳಿ ಪ್ರಸ್ತಾಪಿಸಿರುವ Proposed Composite Housing Scheme Project at Sy. No.10 and Others of Byalalu Village, Tavarekere Hobli, Bengaluru South Taluk, Bengaluru Urban District ಇಲ್ಲಿ ನಿರ್ಮಿಸಲು ದಿನಾಂಕ: 02-06-2023ರ ಪತ್ರ ಸಂಖ್ಯೆ: ಎಸ್‌ಇಐಎಎ61ಸಿಓಎನ್ 2021ರಲ್ಲಿ ಪರಿಸರ ವಿಮೋಚನ ಪತ್ರವನ್ನು ಪಡೆದಿರುತ್ತಾರೆ.
ಈ ಪರಿಸರ ವಿಮೋಚನಾ ಪತ್ರವನ್ನು ರಾಜ್ಯ ಮಟ್ಟದ ಪರಿಸರ ಪರಿಣಾಮ ಅಂದಾಜೀಕರಣ ಪ್ರಾಧಿಕಾರ, ಕರ್ನಾಟಕದವರ ವೆಬ್‌ಸೈಟ್ https://parivesh.nic.in ಇಲ್ಲಿ ಲಭ್ಯವಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಸಮನ್ವಯ ಕಚೇರಿ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/AAPL/RO361/23-24

मौलाना आज़ाद नेशनल उर्दू यूनिवर्सिटी مولانا آزاد نیشنل اردو یونیورسٹی
MAULANA AZAD NATIONAL URDU UNIVERSITY
A Central University under Ministry of Educations
Government of India
DIRECTORATE OF DISTANCE EDUCATION (DDE)
2023–24ನೇ ಶೈಕ್ಷಣಿಕ ವರ್ಷದ ಪ್ರವೇಶಾತಿ ಅಧಿಸೂಚನೆ
2023–24ನೇ ಶೈಕ್ಷಣಿಕ ವರ್ಷದ ಕೆಳಕಂಡ ಒಪನ್ ಮತ್ತು ಡಿಸ್ಟನ್ಸ್ ಲರ್ನಿಂಗ್ (ಒಡಿಎಲ್ ಮೋಡ್) ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಅಕಾಡೆಮಿಕ್ ಸೆಶನ್ ಜುಲೈ–ಆಗಸ್ಟ್, 2023 ರಲ್ಲಿ ಆರಂಭವಾಗಲಿದೆ:
1. ಎಂ.ಎ. (ಉರ್ದು)
2. ಎಂ.ಎ. (ಹಿಂದಿ)
3. ಎಂ.ಎ. (ಇಂಗ್ಲಿಷ್)
4. ಎಂ.ಎ. (ಅರೆಬಿಕ್)
5. ಎಂ.ಎ. (ಇತಿಹಾಸ)
6. ಎಂ.ಎ. (ಇಸ್ಲಾಮಿಕ್ ಅಧ್ಯಯನಗಳು)
7. ಬ್ಯಾಚಲರ್ ಆಫ್ ಆರ್ಟ್ಸ್ (ಬಿ.ಎ)
8. ಬ್ಯಾಚಲರ್ ಆಫ್ ಕಾಮರ್ಸ್ (ಬಿ.ಕಾಂ)
9. ಬ್ಯಾಚಲರ್ ಆಫ್ ಸೈನ್ಸ್ (ಬಿ.ಎಸ್ಸಿ) (ಲೈಫ್ ಸೈನ್ಸಸ್)
10. ಬ್ಯಾಚಲರ್ ಆಫ್ ಸೈನ್ಸ್ (ಬಿ.ಎಸ್ಸಿ) (ಫಿಜಿಕಲ್ ಸೈನ್ಸಸ್)
11. ಬ್ಯಾಚಲರ್ ಆಫ್ ಎಜುಕೇಶನ್ (ಬಿ.ಇಡಿ)
12. ಡಿಪ್ಲೋಮ ಇನ್ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
13. ಡಿಪ್ಲೋಮ ಇನ್ ಟೀಚ್ ಇಂಗ್ಲಿಷ್
14. ಡಿಪ್ಲೋಮ ಇನ್ ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಶನ್
15. ಡಿಪ್ಲೋಮ ಇನ್ ಸ್ಕೂಲ್ ಲೀಡರ್‌ಶಿಪ್ ಅಂಡ್ ಮ್ಯಾನೇಜ್‌ಮೆಂಟ್
16. ಸರ್ಟಿಫಿಕೇಟ್ ಇನ್ ಫಂಕ್ಷನಲ್ ಇಂಗ್ಲಿಷ್
17. ಸರ್ಟಿಫಿಕೇಟ್ ಇನ್ ಪ್ರೊಫಿಷಿಯನ್ಸಿ ಇನ್ ಉರ್ದು ಥ್ರೂ ಇಂಗ್ಲಿಷ್
ಇ–ಕೈಪಿಡಿ ಮತ್ತು ಆನ್‌ಲೈನ್ ಅರ್ಜಿ ನಮೂನೆಯು **manuu.edu.in/dde** (ಅಡ್ಮಿಷನ್ ಪೋರ್ಟಲ್: **manuuadmission.samarth.edu.in)** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಈ ಅರ್ಜಿಯನ್ನು ನೋಂದಣಿ ಶುಲ್ಕದ ಸಮೇತ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ದಾಖಲಾತಿಗಳ ಯಶಸ್ವಿ ಪರಿಶೀಲನೆಯ ನಂತರ, ಕೈಪಿಡಿ 2023–24ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮ ಶುಲ್ಕ ಪಾವತಿಸುವುದು. ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಸ್ಟೂಡೆಂಟ್ ಸಪೋರ್ಟ್ ಯೂನಿಟ್ (ಎಸ್‌ಎಸ್‌ಯು) ಹೆಲ್ಪ್‌ಲೈನ್ಸ್ 040–23008463 ಅಥವಾ 040–23120600 (ಎಕ್ಸ್‌ಟೆನ್ಷನ್: 2207 & 2208) ಸಂಖ್ಯೆಗಳಿಗೆ ಬೆಳಗ್ಗೆ 9:00 ರಿಂದ ಸಂಜೆ 7 ಗಂಟೆವರೆಗೆ ಸಂಪರ್ಕಿಸಬಹುದು. ಅಭ್ಯರ್ಥಿಗಳು, ಇನ್ನೂ ಹೆಚ್ಚಿನ ಮಾಹಿತಿಗಾಗಿ ನವದೆಹಲಿ, ಕೋಲ್ಕತ, ಬೆಂಗಳೂರು, ಮುಂಬೈ, ಪಾಟ್ನಾ, ದರ್ಭಾಂಗ, ಭೋಪಾಳ್, ಶ್ರೀನಗರ, ರಾಂಚಿ, ಅಮರಾವತಿ, ಹೈದರಾಬಾದ್, ಜಮ್ಮು, ನೂಹ್, ವಾರಾಣಸಿ ಮತ್ತು ಲಕ್ನೋ ನಗರಗಳಲ್ಲಿರುವ ಎಂಎಎನ್‌ಯುಯು ಪ್ರಾದೇಶಿಕ ಕೇಂದ್ರ / ಉಪ–ಪ್ರಾದೇಶಿಕ ಕೇಂದ್ರಗಳನ್ನು ಕೂಡ ಸಂಪರ್ಕಿಸಬಹುದು ಅಥವಾ **manuu.edu.in/dde** ವೆಬ್‌ಸೈಟ್‌ಗೆ ಭೇಟಿ ನೀಡಿ.
ಬಿ.ಇಡಿ ಕಾರ್ಯಕ್ರಮಕ್ಕೆ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಜುಲೈ 25, 2023 ಮತ್ತು ಇನ್ನಿತರ ಎಲ್ಲಾ ಕಾರ್ಯಕ್ರಮಗಳಿಗೆ ಆಗಸ್ಟ್ 25, 2023 ಆಗಿರುತ್ತದೆ. ಎಲ್ಲಾ ಕಾರ್ಯಕ್ರಮಗಳಿಗೆ ಪ್ರವೇಶ ಶುಲ್ಕ ಪಾವತಿಸುವ ಕೊನೆಯ ದಿನಾಂಕ ಆಗಸ್ಟ್ 31, 2023 ರಂದು 23:59 ಗಂಟೆ ಆಗಿರುತ್ತದೆ.
ನಿರ್ದೇಶಕರು, ಡಿಡಿಇ ರಜಿಸ್ಟ್ರಾರ್

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14500
ಎಸಿ	₹7280
ಆರ್‌ಪಿ	₹10200
ಆರ್‌ಸಿ	₹6090

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

	100 ಮೊಟ್ಟೆಗೆ	₹600
	12 ಮೊಟ್ಟೆಗೆ	₹80
ಮೈಸೂರು	100 ಮೊಟ್ಟೆಗೆ	₹603

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹125

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹930 (925)
ಸೂರ್ಯಕಾಂತಿ (ರಿಫೈನ್ಡ್)	₹930 (915)
ಪಾಮೋಲಿನ್	₹848 (840)

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India
सी.जी.-डी.एल.-अ.-24052023-246028
CG-DL-E-24052023-246028
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY
सं. 2166] नई दिल्ली, मंगलवार, मई 23, 2023/ज्येष्ठ 2, 1945
No.2166] NEW DELHI, TUESDAY, MAY 23, 2023/JYAISHTHA 2, 1945

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, ದಿನಾಂಕ: 23ನೇ ಮೇ, 2023

ಎಸ್.ಓ. 2260(ಇ)– ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲ್‌ನಲ್ಲಿರುವ ಜಮೀನುಗಳನ್ನು ಕರ್ನಾಟಕ ರಾಜ್ಯ ಚಿತ್ರದುರ್ಗ ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 150ಎ ರಸ್ತೆಯನ್ನು ಕಿ.ಮೀ. 358.5 ರಿಂದ ಕಿ.ಮೀ. 414.205 ರ ವರೆಗಿನ (ವಿಶೇಷ ಭೂಸ್ವಾಧೀನಾಧಿಕಾರಿಗಳು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹಿರಿಯೂರು) ನಿರ್ಮಿಸಲು (ಅಗಲಗೊಳಿಸಲು/ದ್ವಿಪಥ, ಪೇವ್ಡ್ ಶೋಲ್ಡರ್‌ನಾಲ್ಕು ಪಥದ ರಸ್ತೆ ನಿರ್ಮಾಣ ವಗೈರೆಗಾಗಿ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಾಗಿರುತ್ತದೆಂದು ತಿಳಿದ ಕಾರಣ, ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಅಧಿನಿಯಮ–1956 (1956 ರ 48)ರ ಪ್ರಕಾರ ಕಲಂ 3ಎ ಉಪ–ಕಲಂ (1)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವುದಾಗಿ ಈ ಮೂಲಕ ಘೋಷಿಸಿರುತ್ತದೆ.

ಸದರಿ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ಈ ಪ್ರಕಟಣೆ ಈ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು (21) ದಿನಗೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮ ಕಲಂ 3ಸಿ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುತ್ತದೆ..

ಅಂತಹ ಆಕ್ಷೇಪಣೆಗಳನ್ನು, ವಿಶೇಷ ಭೂಸ್ವಾಧೀನಾಧಿಕಾರಿಗಳು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹಿರಿಯೂರು ರವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿ, ವಿಶೇಷ ಭೂಸ್ವಾಧೀನಾಧಿಕಾರಿಯವರು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ವಕೀಲರನ್ನಾಗಲಿ ಕರೆಯಿಸಿ, ಅವರು ಸಲ್ಲಿಸಿರುವ ಪ್ರತಿ ಆಕ್ಷೇಪಣೆ ಬಗ್ಗೆ ವಿಚಾರಣೆ ನಡೆಸಿ ಸಂಬಂಧಿಸಿದಂತೆ ಇತರೆ ಅಂಶಗಳನ್ನು ಪರಿಶೀಲಿಸಿ ಸೂಕ್ತ ಎಂಬುದು ಕಂಡುಬಂದಲ್ಲಿ, ಆಕ್ಷೇಪಣೆಯನ್ನು ಪುರಸ್ಕರಿಸಿ ಅಥವಾ ತಿರಸ್ಕರಿಸಿ ಆದೇಶಿಸಬಹುದಾಗಿರುತ್ತದೆ. ಹಾಗೆ ಸಕ್ಷಮ ಪ್ರಾಧಿಕಾರಿಯವರು ಮಾಡಲಾದ ಆದೇಶವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಕಲಂ 3ಸಿ(2)ರಂತೆ ಅಂತಿಮವಾದುದ್ದಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳನ್ನು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರಿಗಳ ಕಛೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿ ಭಾರತ ರಾಷ್ಟ್ರೀಯ ಹೆದ್ದಾರಿ ನಂ. 150ಎ (ವಿಶೇಷ ಭೂಸ್ವಾಧೀನಾಧಿಕಾರಿಗಳು, ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹಿರಿಯೂರು) ಭೂಸ್ವಾಧೀನಕ್ಕೆ ಒಳಪಡುವ ಕಟ್ಟಡಗಳಿರುವ ಅಥವಾ ಕಟ್ಟಡಗಳು ಇಲ್ಲದಿರುವ ನಿವೇಶನಗಳ ಸಂಕ್ಷಿಪ್ತ ವಿವರ

ರಾಜ್ಯ: ಕರ್ನಾಟಕ ಜಿಲ್ಲೆ: ಚಿತ್ರದುರ್ಗ

ಕ್ರಮ ಸಂಖ್ಯೆ	ಸರ್ವೆ/ಪ್ಲಾಟ್ ನಂಬರ್	ಜಮೀನಿನ ತರಹೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಚದರ ಮೀಟರ್‌ಗಳಲ್ಲಿ)
1	2	3	4	5
ತಾಲ್ಲೂಕು: ಚಳ್ಳಕೆರೆ				
ಗ್ರಾಮ: ಚಳ್ಳಕೆರೆ				
1	120/12	ಖಾಸಗಿ	ಖುಷ್ಕಿ	1616
2	149	ಖಾಸಗಿ	ಖುಷ್ಕಿ	2630
3	310	ಖಾಸಗಿ	ಖುಷ್ಕಿ	303
4	313 / 1	ಖಾಸಗಿ	ಖುಷ್ಕಿ	101
5	314	ಖಾಸಗಿ	ಖುಷ್ಕಿ	606
6	316	ಖಾಸಗಿ	ಖುಷ್ಕಿ	202
7	322	ಖಾಸಗಿ	ಖುಷ್ಕಿ	202
8	323	ಖಾಸಗಿ	ಖುಷ್ಕಿ	101
9	340 / 1	ಖಾಸಗಿ	ಖುಷ್ಕಿ	1214
10	340 / 5	ಖಾಸಗಿ	ಖುಷ್ಕಿ	1012
11	384 / 1	ಖಾಸಗಿ	ಖುಷ್ಕಿ	707
12	439	ಖಾಸಗಿ	ಖುಷ್ಕಿ	1618
13	505	ಖಾಸಗಿ	ಖುಷ್ಕಿ	453
ಗ್ರಾಮ: ನಗರಂಗೆರೆ				
14	136 / 1	ಖಾಸಗಿ	ಖುಷ್ಕಿ	910
15	136 / 10	ಖಾಸಗಿ	ಖುಷ್ಕಿ	253
16	136 / 11	ಖಾಸಗಿ	ಖುಷ್ಕಿ	1011
17	36 / 1	ಖಾಸಗಿ	ಖುಷ್ಕಿ	456
ಗ್ರಾಮ: ಲಕ್ಷ್ಮೀಪುರ				
18	56	ಖಾಸಗಿ	ಖುಷ್ಕಿ	4046
ಗ್ರಾಮ: ಸೋಮಗುದ್ದು				
19	90 / 4	ಖಾಸಗಿ	ಖುಷ್ಕಿ	405
ಗ್ರಾಮ: ಕಮ್ಮತ್ ಮರಿಕುಂಟೆ				
20	8 / 1	ಖಾಸಗಿ	ಖುಷ್ಕಿ	202
21	8 / 2	ಖಾಸಗಿ	ಖುಷ್ಕಿ	303
22	8 / 3	ಖಾಸಗಿ	ಖುಷ್ಕಿ	101
23	8 / 4	ಖಾಸಗಿ	ಖುಷ್ಕಿ	101
ಗ್ರಾಮ: ಸಾಣೇಕೆರೆ				
24	79	ಖಾಸಗಿ	ಖುಷ್ಕಿ	702
25	8	ಖಾಸಗಿ	ಖುಷ್ಕಿ	837
26	9 / 1	ಖಾಸಗಿ	ಖುಷ್ಕಿ	3035
27	ಗ್ರಾಮಠಾಣ	ಖಾಸಗಿ	ಖುಷ್ಕಿ	606
ತಾಲ್ಲೂಕು: ಹಿರಿಯೂರು				
ಗ್ರಾಮ: ಗೊಲ್ಲಹಳ್ಳಿ				
28	58 / 7	ಖಾಸಗಿ	ಖುಷ್ಕಿ	1313
29	ಗ್ರಾಮಠಾಣ	ಖಾಸಗಿ	ಖುಷ್ಕಿ	1515
ಗ್ರಾಮ: ಹರ್ತಿಕೋಟೆ				
30	287	ಖಾಸಗಿ	ಖುಷ್ಕಿ	1618
31	342 / 1A1	ಖಾಸಗಿ	ಖುಷ್ಕಿ	202
32	342 / 2	ಖಾಸಗಿ	ಖುಷ್ಕಿ	405
ಗ್ರಾಮ: ಬಾಲೇನಹಳ್ಳಿ				
33	100 / 1	ಖಾಸಗಿ	ಖುಷ್ಕಿ	303
34	79 / 3b	ಖಾಸಗಿ	ಖುಷ್ಕಿ	910
35	86	ಖಾಸಗಿ	ಖುಷ್ಕಿ	3333
ಗ್ರಾಮ: ಮೈಕಲ್ಲೂರಹಳ್ಳಿ				
36	32 / 4	ಖಾಸಗಿ	ಖುಷ್ಕಿ	1414
37	32/3	ಖಾಸಗಿ	ಖುಷ್ಕಿ	404
38	34 / 8	ಖಾಸಗಿ	ಖುಷ್ಕಿ	909
ಗ್ರಾಮ: ಬಬ್ಬೂರ				
39	300/2	ಖಾಸಗಿ	ಖುಷ್ಕಿ	202
40	5 / 3	ಖಾಸಗಿ	ಖುಷ್ಕಿ	51
41	5/1	ಖಾಸಗಿ	ಖುಷ್ಕಿ	303
42	551	ಖಾಸಗಿ	ಖುಷ್ಕಿ	280
43	6 / 1	ಖಾಸಗಿ	ಖುಷ್ಕಿ	303
44	6 / 2	ಖಾಸಗಿ	ಖುಷ್ಕಿ	303
ಗ್ರಾಮ: ಹಿರಿಯೂರು				
45	19/3	ಖಾಸಗಿ	ಖುಷ್ಕಿ	354
46	19/6	ಖಾಸಗಿ	ಖುಷ್ಕಿ	202
47	203	ಖಾಸಗಿ	ಖುಷ್ಕಿ	556
48	356	ಖಾಸಗಿ	ಖುಷ್ಕಿ	1011
49	474	ಖಾಸಗಿ	ಖುಷ್ಕಿ	1416
ಗ್ರಾಮ: ಹುಲಗಲಕುಂಟೆ				
50	3 / 3	ಖಾಸಗಿ	ಖುಷ್ಕಿ	202
ಗ್ರಾಮ: ಸೋಮೇರಹಳ್ಳಿ				
51	106 / 12	ಖಾಸಗಿ	ಖುಷ್ಕಿ	101
52	106 / 2	ಖಾಸಗಿ	ಖುಷ್ಕಿ	356
53	106 / 8	ಖಾಸಗಿ	ಖುಷ್ಕಿ	556
54	13/11	ಖಾಸಗಿ	ಖುಷ್ಕಿ	52
55	13/8	ಖಾಸಗಿ	ಖುಷ್ಕಿ	303
ಒಟ್ಟು				42,610

[F. No. NHAI/LA/RO-BNG/KNT/Hospete/3A]
ಅಭಯ್ ಜೈನ್, ಉಪ ಕಾರ್ಯದರ್ಶಿ

ಪಯಣ ನಟನಿಗೆ ಜಗವೇ ನಾಟಕರಂಗ 11

'ಬೋಗಿ ಬೋಗಿ'... ತಿನ್ನಿ ಹೋಗಿ 11

ಪೆಹಲ್ಗಾಮ್ ಹಸಿರು ಕಣಿವೆಗಳಿಗೆ ಸಲಾಮ್ 13

ಸಂಚಾರ ಸಂಚಕಾರ

ತಂತ್ರಜ್ಞಾನಕ್ಕೆ ಜೈಕಾರ

ಇ.ಎಸ್. ಸುಧೀಂದ್ರ ಪ್ರಸಾದ್

ಮಹಾನಗರಗಳ ಮೂರನೇ ಮನೆಯಲ್ಲಿ ನೂರೆಂಟು ರಗಳೆ...

ಹಾರುವ ಕಾರುಗಳು, ಹೈಪರ್ ಲೂಪ್‌ಗಳ ಅಭಿವೃದ್ಧಿಯಾಗುತ್ತಿರುವ ಕಾಲಘಟ್ಟವಿದು. ಹೀಗಿದ್ದೂ ರಸ್ತೆ ಮೇಲೆ ಓಡುವ ವಾಹನಗಳು ತೆವಳುವುದನ್ನು ತಪ್ಪಿಸುವುದು ಈವರೆಗೂ ಸವಾಲಿನ ಕೆಲಸವೇ ಆಗಿದೆ.

ಒಂದರ ಮೇಲೊಂದರಂತಿರುವ ಮೇಲುಸೇತುವೆಗಳು, ಅಡ್ಡಾದಿಡ್ಡಿ ವಾಹನಗಳು ಸಿಗದಂತೆ ಮಾಡುವ ಅಂಡರ್‌ಪಾಸ್‌ಗಳು, ಹೆಜ್ಜೆ ಹೆಜ್ಜೆಗೂ ಎದುರಾಗುವ ಸಿಗ್ನಲ್‌ಗಳು, ಆ ಸಿಗ್ನಲ್‌ಗಳಲ್ಲಿ ವಾಹನ ಸವಾರರ ಸಂಯಮ ಬೇಡುವ ಸೆಕೆಂಡುಗಳ ಎಣಿಕೆ. ವಾಹನ ದಟ್ಟಣೆಯಿಂದ ಪಾರಾಗಲು ಪಾದಚಾರಿ ಮಾರ್ಗ ಏರುವ ದ್ವಿಚಕ್ರವಾಹನ ಸವಾರರು. 'ಇಲ್ಲೇ ಇದ್ದೀನಿ.. ಐದು ನಿಮಿಷ' ಎಂಬ ಪದೇ ಪದೇ ಕಿವಿಮೇಲೆ ಬೀಳುವ ಸಾಮಾನ್ಯ ಹೇಳಿಕೆ... ಇವಿಷ್ಟು ಭಾರತದ ಯಾವುದೇ ಮಹಾನಗರಗಳಲ್ಲಿನ ರಸ್ತೆಗಳಲ್ಲಿ ನಿತ್ಯ ಕಂಡುಬರುವ ದೃಶ್ಯಗಳು. ಮಹಾನಗರಗಳಲ್ಲಿ ವಾಸಿಸುವವರು ಕಚೇರಿ, ಮನೆ ಹೊರತು ಪಡಿಸಿ ಅತಿ ಹೆಚ್ಚು ಸಮಯ ಕಳೆಯುವ ಮೂರನೇ ಮನೆಯೇ ಟ್ರಾಫಿಕ್.

ಸಂಚಾರ ಸುಗಮ ಆಗಲಿ ಎಂದು ತಂತ್ರಜ್ಞಾನ ನೆಚ್ಚಿಕೊಳ್ಳುವುದು ಇದೀಗ ವಿಶ್ವವ್ಯಾಪಿ. ಬೆಂಗಳೂರಲ್ಲೂ ಸಿಗ್ನಲ್ ಬಳಿ ಡ್ರೋನ್ ಹಾರಲಿರುವುದನ್ನು ಕಾಣಬಹುದು. ಮಹಾನಗರಗಳ ಟ್ರಾಫಿಕ್ ನಿರ್ವಹಣೆಯ ಮಾದರಿಗಳು ಕುತೂಹಲಕಾರಿ. ಅವುಗಳಲ್ಲಿ ಕೆಲವು ಝಲಕ್‌ಗಳು ಇದೋ...

ಭಾರತದ ಪ್ರಮುಖ ನಗರಗಳಷ್ಟೇ ಅಲ್ಲ, ಜಗತ್ತಿನ ಪ್ರಮುಖ ನಗರಗಳೂ ಈ ಜಂಜಡದಿಂದ ಈವರೆಗೂ ಸಂಪೂರ್ಣವಾಗಿ ಪಾರಾದ ಉದಾಹರಣೆ ಇಲ್ಲ. ಆದರೂ ಏರುತ್ತಿರುವ ವಾಹನಗಳ ಸಂಖ್ಯೆಗೆ ಅನುಗುಣವಾಗಿ ವಿಸ್ತರಣೆಗೊಳ್ಳದ ರಸ್ತೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಾ ವ್ಯವಸ್ಥೆಯು ಬದಲಾವಣೆಗಾಗಿ ಹಾತೊರೆಯುತ್ತಿದೆ. ಬೆಂಗಳೂರು ಮಹಾನಗರದ ಟ್ರಾಫಿಕ್ ಸಿಗ್ನಲ್ಲುಗಳಲ್ಲೂ ಇನ್ನೇನು ಡ್ರೋನ್‌ಗಳು ಹಾರಲಿವೆ.

ಇಡೀ ಜಗತ್ತಿನಲ್ಲಿ 800 ಕೋಟಿ ಜನಸಂಖ್ಯೆಯ ಜತೆಗೆ 150 ಕೋಟಿಗೂ ಅಧಿಕ ವಾಹನಗಳಿವೆ ಎಂದು ಅಂದಾಜಿಸಲಾಗಿದೆ. ಇದರಿಂದಾಗಿ ರಸ್ತೆ ಸಂಚಾರದ ಸಮಯ ಇತ್ತೀಚಿನ ದಿನಗಳಲ್ಲಿ ಶೇ 25ರಷ್ಟು ಹೆಚ್ಚಳವಾಗಿದೆ. ಅದಕ್ಕೆ ಪೂರಕವಾಗಿ ಮಾಲಿನ್ಯದ ಪ್ರಮಾಣವೂ ಹೆಚ್ಚಿದೆ. ಭಾರತದಲ್ಲಿ ಬೆಂಗಳೂರು ಎರಡನೇ ಅತಿ ಹೆಚ್ಚು ವಾಹನಗಳಿರುವ ನಗರ. ಇಲ್ಲಿ ಸುಮಾರು 1.10 ಕೋಟಿ ವಾಹನಗಳು ನಿತ್ಯ ಸಂಚರಿಸುತ್ತವೆ ಎಂದು ದಾಖಲೆಗಳು ಹೇಳುತ್ತವೆ. ಇಲ್ಲಿ ವಾಹನ ಹಾಗೂ ಜನಸಂಖ್ಯೆಯ ಅನುಪಾತ 1:1.3 ಇದೆ. ಅಂದರೆ 1.3 ಜನರಿಗೊಂದು ವಾಹನ ಇದೆಯೆಂದು ಅರ್ಥ. ಇಲ್ಲಿ ಸಾರ್ವಜನಿಕ ಸಾರಿಗೆ ಬಳಸುವವರ ಸಂಖ್ಯೆ ಶೇ 47ರಷ್ಟು ಮಾತ್ರ. ದೇಶದ ಇತರ ಮಹಾನಗರಗಳಿಗೆ ಹೋಲಿಸಿದಲ್ಲಿ ಇದು ಅತ್ಯಂತ ಕಡಿಮೆ.

2025ರ ಹೊತ್ತಿಗೆ ಬೆಂಗಳೂರಿನಲ್ಲಿ 300ರಿಂದ 500 ಹೊಸ ಸಿಗ್ನಲ್‌ಗಳು ಹುಟ್ಟಿಕೊಳ್ಳಲಿವೆ ಎಂದು ಅಂದಾಜಿಸಲಾಗಿದೆ. ಬೇಡಿಕೆಗೆ ತಕ್ಕಂತೆ ಮಾನವನ ಹಸ್ತಕ್ಷೇಪವಿಲ್ಲದೆ ಸಿಗ್ನಲ್ ಸಮಯವನ್ನು ವಿಸ್ತರಿಸುವ ಅಥವಾ ಕಡಿತಗೊಳಿಸುವ 'ಹೊಂದಿಸಬಲ್ಲ ಸಂಚಾರ ನಿಯಂತ್ರಣ ವ್ಯವಸ್ಥೆ ಹಾಗೂ ಕೃತಕ ಬುದ್ಧಿಮತ್ತೆ'ಯನ್ನು ಅಳವಡಿಸುವ ನಿಟ್ಟಿನಲ್ಲಿ ಸಿದ್ಧತೆ ಆರಂಭಗೊಂಡಿದೆ. ಇದರಿಂದ ಸಂಚಾರ ನಿಯಮ ಉಲ್ಲಂಘನೆ ಪತ್ತೆ ಹಾಗೂ ಅಂತಹ ವಾಹನಗಳ ನೋಂದಣಿ ಸಂಖ್ಯೆ ಫಲಕವನ್ನು ಸ್ವಯಂಚಾಲಿತವಾಗಿ ದಾಖಲಿಸುವ ವ್ಯವಸ್ಥೆ ಇದರಲ್ಲಿ ಇರಲಿದೆ. ಹೀಗಾದರೆ ಸಂಚಾರ ದಟ್ಟಣೆ ನಿಯಂತ್ರಿಸುವ ಒತ್ತಡದಿಂದ ಪೊಲೀಸರು ಪಾರಾಗಲಿದ್ದಾರೆ ಎಂಬುದು ಅಂದಾಜು.

ಮುಂದುವರಿದ ರಾಷ್ಟ್ರಗಳಲ್ಲಿ ರೊಬೊಟಿಕ್ ಅಥವಾ ಸ್ವಯಂ ಚಾಲಿತ ಕಾರುಗಳು ಟ್ರಾಫಿಕ್ ಸಮಸ್ಯೆ ಹೆಚ್ಚಿಸಿದರೆ, ಭಾರತದಲ್ಲಿ ಅಂಕೆ ಇಲ್ಲದೆ ಏರುತ್ತಿರುವ ವಾಹನಗಳ ಸಂಖ್ಯೆಯೇ ಮುಖ್ಯ ಕಾರಣವಾಗಿದೆ ಎನ್ನುವುದು ತಜ್ಞರ ಅಭಿಪ್ರಾಯ. ಬೆಂಗಳೂರಿನಲ್ಲಿ ಪೀಕ್ ಅವರ್‌ನಲ್ಲಿ ವಾಹನಗಳ ಸರಾಸರಿ ವೇಗ ಪ್ರತಿ ಗಂಟೆಗೆ 4 ಕಿ.ಮೀ ಮಾತ್ರ ಎನ್ನುವುದು ಈ ಮಾತಿಗೆ ಪುಷ್ಟಿ ನೀಡುತ್ತಿದೆ.

ಹೀಗಿದ್ದರೂ ಈಗಲೂ ಹಿಂದಿನಂತೆಯೇ ಕಾಯಲು ಸೆಕೆಂಡುಗಳನ್ನು ತೋರಿಸುವ ಸಿಗ್ನಲ್‌ಗಳು ಅಲ್ಲಲ್ಲಿ ಕೆಲಸ ಮಾಡುತ್ತಿವೆ. ವಾಹನಗಳನ್ನು ತಡೆಯುವ ಬದಲು ಸರಾಗವಾಗಿ ಸಾಗುವಂತೆ ಮಾಡಲು ಯೋಜನೆಗಳು ರೂಪುಗೊಳ್ಳುತ್ತಲೇ ಇವೆ. ಒಂದೆಡೆ ಮೇಲುಸೇತುವೆ, ಅಂಡರ್‌ಪಾಸ್‌ಗಳ ನಿರ್ಮಾಣ, ಏಕಮುಖ ಸಂಚಾರದ ಪ್ರಯೋಗಗಳು ಈಗಲೂ ಚಾಲ್ತಿಯಲ್ಲಿವೆ.

ಜಗತ್ತಿನಲ್ಲೇ ಅತ್ಯಂತ ವ್ಯವಸ್ಥಿತ ಹಾಗೂ ಸುಸಜ್ಜಿತ ಸಂಚಾರ ನಿಯಂತ್ರಣ ವ್ಯವಸ್ಥೆ ಹೊಂದಿರುವ ಸಿಂಗಾಪುರ್, ಲಂಡನ್, ನ್ಯೂಯಾರ್ಕ್‌ನಲ್ಲಿ ರಸ್ತೆಗಳು ಹಾಗೂ ವೃತ್ತಗಳಲ್ಲಿನ ಸಂಚಾರ ದಟ್ಟಣೆಯನ್ನು ಹದ್ದಿನ ಕಣ್ಣಿನಲ್ಲೇ ನೋಡುವ ನೂರಾರು ಕ್ಯಾಮೆರಾಗಳು, ಅವುಗಳಿಗೆ ಅನುಗುಣವಾಗಿ ಸಂದೇಶ ನೀಡುವ ಸೆನ್ಸರ್‌ಗಳು, ಅದಕ್ಕೆ ತಕ್ಕಂತೆ ವರ್ತಿಸುವ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿದೆ. ಹೀಗಿದ್ದರೂ ಏರುತ್ತಿರುವ ವಾಹನ ದಟ್ಟಣೆಯು ಈ ನಿಗಾ ವ್ಯವಸ್ಥೆಗೂ ಸವಾಲೊಡ್ಡುತ್ತಿದೆ.

ಯಂತ್ರಗಳ ಜತೆಗೆ ಇತ್ತೀಚೆಗೆ ಕೃತಕ ಬುದ್ಧಿಮತ್ತೆಯನ್ನೂ ಟ್ರಾಫಿಕ್ ನಿಯಂತ್ರಣಕ್ಕಾಗಿ ಬಳಸಲಾಗುತ್ತಿದೆ. ಇದಕ್ಕೊಂದು ಉದಾಹರಣೆ ಎಂಬಂತೆ, ಕೇರಳದಲ್ಲಿ ಜೂನ್ ತಿಂಗಳ ಮೊದಲ ವಾರದಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ವಾಹನ ದಟ್ಟಣೆ ನಿಯಂತ್ರಣ ಸಾಧನವನ್ನು ಅಳವಡಿಸಲಾಗಿತ್ತು. ಪ್ರತಿನಿತ್ಯ ಅಲ್ಲಿ ಸರಾಸರಿ 12 ಜನ ರಸ್ತೆ ಅಪಘಾತದಲ್ಲಿ ಮೃತಪಡುತ್ತಿದ್ದರು. ಇದನ್ನು ತಪ್ಪಿಸಲು ಅಳವಡಿಸಿದ ಕೃತಕ ಬುದ್ಧಿಮತ್ತೆ ಸಾಧನದ ಪರಿಣಾಮ, ಮೂರು ದಿನಗಳಲ್ಲಿ ಬರೋಬ್ಬರಿ ಮೂರೂವರೆ ಲಕ್ಷ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಇದರಲ್ಲಿ ದಾಖಲಾಗಿವೆ. ಇದರಲ್ಲಿ 29 ಸಾವಿರ ಸವಾರರಿಗೆ ದಂಡದ ಚಲನ್ ಕಳುಹಿಸಿರುವುದು ನೂತನ ತಂತ್ರಜ್ಞಾನದ ಕೊಡುಗೆ ಎಂದು ಕೇರಳ ಸರ್ಕಾರ ಹೇಳಿದೆ.

12ನೇ ಪುಟಕ್ಕೆ...

ಆ ಸಲ ಕಪ್ ನಮ್ದೇ...

ಗಿರೀಶ ದೊಡ್ಡಮನಿ

ಭಾರತ ತಂಡವು 1983ರ ಕ್ರಿಕೆಟ್ ವಿಶ್ವಕಪ್ ಜಯಿಸಿ ಈಗ 40 ವರ್ಷ ತುಂಬಿದೆ. ಈ ಅವಧಿಯಲ್ಲಿ ಕ್ರಿಕೆಟ್ ಹಲವು ಆಯಾಮಗಳಲ್ಲಿ ಅಗಾಧವಾಗಿ ಬೆಳೆದಿದೆ. ಆದರೆ, ಆ ಗೆಲುವು ಮಾತ್ರ ಶ್ರೀಗಂಧದ ಕೊರಡಿನಂತೆ ತೇಯ್ದಷ್ಟೂ ಸುವಾಸನೆಯನ್ನು ಹರಡುತ್ತಿದೆ. ಕಪಿಲ್ ಬಳಗದ ಸಾಧನೆ ಸಾರ್ವಕಾಲಿಕ ಸುಂದರ ಕಥನವಾಗಿದೆ.

ಮೆಲುಕು

ಗಂಧದ ಕೊರಡು ಎಷ್ಟೇ ಹಳೆಯದಾಗಿರಲಿ. ತೇಯ್ದಷ್ಟೂ ಸುಗಂಧದ ಪರಿಮಳವನ್ನು ಪಸರಿಸುತ್ತಲೇ ಇರುತ್ತದೆ. ಅದೇ ರೀತಿ ಭಾರತ ಕ್ರಿಕೆಟ್ ತಂಡವು 1983ರಲ್ಲಿ ಗೆದ್ದ ವಿಶ್ವಕಪ್ ಸಾಧನೆ ಕೂಡ. ಅದರ ಬಗ್ಗೆ ಎಷ್ಟೇ ಮಾತಾಗಲೀ, ನೆನಕೆಯಾಗಲೀ ಚೆಂದದ ಅನುಭೂತಿ. ಅದು ಕ್ರಿಕೆಟ್ ಆಟದ ಸಹಜ ಸುಗಂಧ.

ಇವತ್ತಿಗೆ ಬರೋಬ್ಬರಿ ನಾಲ್ಕು ದಶಕಗಳ ಹಿಂದೆ ಲಾರ್ಡ್ಸ್ ಅಂಗಳದ ಅಟ್ಟಣಿಗೆಯ ಮೇಲೆ ಕಪಿಲ್ ದೇವ್ ವಿಶ್ವಕಪ್ ಎತ್ತಿಹಿಡಿದ ಆ ಚಿತ್ರ ನೋಡಿದಾಗಲೆಲ್ಲ ಪುಳಕ. ಇವತ್ತು ಕ್ರಿಕೆಟ್ ಜಗತ್ತಿಗೆ ಭಾರತವು 'ಅನಭಿಷಿಕ್ತ' ದೊರೆಯಾಗಲು ಆ ಗೆಲುವೇ ಮೊದಲ ಅಡಿಗಲ್ಲು. ಟಿ.ವಿ., ಮೊಬೈಲ್ ಮತ್ತು ಕಂಪ್ಯೂಟರ್‌ಗಳಲ್ಲಿ ಕ್ರಿಕೆಟ್ ಪಂದ್ಯಗಳ ನೇರಪ್ರಸಾರ ನಡೆಯುತ್ತಿರುವ ಈ ಡಿಜಿಟಲ್ ಯುಗದಲ್ಲಿಯೂ ಆ ಕಪ್ಪುಬಿಳುಪು ಚಿತ್ರದ ಸೌಂದರ್ಯ ಮಾಸಿಲ್ಲ.

ಹಣ, ಹೆಸರು ಮತ್ತಿತರ ಆಯಾಮಗಳಲ್ಲಿ ಕ್ರಿಕೆಟ್ ಇವತ್ತು ಬೆಳೆದಿದೆ. ಅದೆಷ್ಟೋ ಅಪ್ರತಿಮ ಆಟಗಾರರು ಈ ಅವಧಿಯಲ್ಲಿ ತಮ್ಮ ಹೆಜ್ಜೆಗುರುತು ಮೂಡಿಸಿದ್ದಾರೆ. ಸಾವಿರಾರು ರನ್‌ಗಳು ಹರಿದಿವೆ. ವಿಕೆಟ್‌ಗಳೂ ಪತನವಾಗಿವೆ. ಹಲವಾರು ದಾಖಲೆಗಳ ರಾಶಿಯೇ ನಿರ್ಮಾಣವಾಗಿದೆ. ಹಣ ಗಳಿಕೆಯಲ್ಲಿಯೂ ವಿಶ್ವದಾಖಲೆ ಮೂಡಿದೆ. ಇವತ್ತಿನ ಟಿ20 ಕ್ರಿಕೆಟ್ ಪಂದ್ಯಗಳ ಒಂದು ಇನಿಂಗ್ಸ್‌ನಲ್ಲಿಯೇ 200ಕ್ಕೂ ಹೆಚ್ಚು ರನ್‌ಗಳ ಮೊತ್ತ ದಾಖಲಾಗುತ್ತಿದೆ. ಆದರೂ ಅವತ್ತು ಲಾರ್ಡ್ಸ್ ಅಂಗಳದಲ್ಲಿ ವೆಸ್ಟ್ ಇಂಡೀಸ್ ದೈತ್ಯರ ಬಳಗಕ್ಕೆ 183 ರನ್‌ಗಳ ಗುರಿಯನ್ನು ಒಡ್ಡಿ ಗೆದ್ದ ಕಪಿಲ್ ಡೆವಿಲ್ಸ್ ಪಡೆಯ ದಂತಕಥೆ ಪುಳಕಗೊಳಿಸುತ್ತದೆ.

ಕಳೆದ ನಾಲ್ಕು ದಶಕಗಳಲ್ಲಿ ಆಸ್ಟ್ರೇಲಿಯಾ ಆರು ಬಾರಿ, ಇಂಗ್ಲೆಂಡ್, ಪಾಕಿಸ್ತಾನ ಮತ್ತು 2011ರಲ್ಲಿ ಭಾರತದ ಮಹೇಂದ್ರಸಿಂಗ್ ಧೋನಿ ಬಳಗವು ಏಕದಿನ ಮಾದರಿಯಲ್ಲಿ ವಿಶ್ವಕಪ್ ಗೆದ್ದಿವೆ. ಟಿ20 ಮಾದರಿಯಲ್ಲಿಯೂ ಎಂಟು ವಿಶ್ವಕಪ್ ಟೂರ್ನಿಗಳು ಆಗಿವೆ. ಎರಡು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗಳೂ ಮುಗಿದಿವೆ. ಆದರೂ ಕಪಿಲ್ ಬಳಗದ ಸಾಧನೆಯು ಈಗಲೂ ಹಸಿರಾಗಿರಲು, ಆ ಗೆಲುವಿನಲ್ಲಿದ್ದ ಕ್ರಿಕೆಟ್ ಆಟದ ನೈಜ ಸೌಂದರ್ಯವೇ ಕಾರಣ. ಇವತ್ತು ಆಧುನಿಕತೆ, ತಂತ್ರಜ್ಞಾನ ಹಾಗೂ ಶ್ರೀಮಂತಿಕೆಗಳು ಇದ್ದರೂ ಕ್ರಿಕೆಟ್‌ನಲ್ಲಿನ ಆ ಸಹಜತೆ ಮಾಯವಾಗಿರುವಂತೆ ಭಾಸವಾಗುತ್ತಿರುವುದು ಸುಳ್ಳಲ್ಲ.

ಅದಕ್ಕೆ ಕಾರಣ ಚುಟುಕು ಕ್ರಿಕೆಟ್‌ನ ಜನಪ್ರಿಯತೆ. ಈ ಮಾದರಿಯು ಇವತ್ತು ಯುವಸಮೂಹವನ್ನು ಇನ್ನಿಲ್ಲದಂತೆ ಆವರಿಸಿಕೊಂಡಿದೆ. ಏಕದಿನ ಮಾದರಿ ಜನಿಸಿದಾಗಲೂ ಟೆಸ್ಟ್ ಮಾದರಿಗೆ ಇಷ್ಟೊಂದು ಆತಂಕ ಮೂಡಿರಲಿಲ್ಲ. ಆದರೆ ಈ ಚುಟುಕು ಕ್ರಿಕೆಟ್ ಈಗ ಏಕದಿನ ಮಾದರಿಗೇ ಕುತ್ತಾಗಿ ಪರಿಣಮಿಸಿದೆ. ಆಡುವವರು ಮತ್ತು ನೋಡುವವರು ಇಬ್ಬರಿಗೂ ಫಾಸ್ಟ್ ಫುಡ್ ತರಹದ ಅನುಭವ ನೀಡುತ್ತಿರುವ ಟಿ20 ಶುರುವಾಗಿ ಎರಡು ದಶಕಗಳು ತುಂಬುತ್ತಿದೆ. ಈ ಹೊತ್ತಿನಲ್ಲಿ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಪುನರುತ್ಥಾನಕ್ಕಾಗಿ ಐಸಿಸಿ ಹೆಣಗಾಡುತ್ತಿದೆ.

ಕ್ರಿಕೆಟ್ ಜಗತ್ತಿನ ದೊಡ್ಡಣ್ಣ ಎನಿಸಿಕೊಂಡಿರುವ ಭಾರತವು ಕಳೆದ ಹತ್ತು ವರ್ಷಗಳಿಂದ ಐಸಿಸಿ ಟ್ರೋಫಿ ಜಯಿಸಲು ಸಾಧ್ಯವಾಗಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್ ಎಂಬ ಮಾಯಾಂಗನೆಯ ಬೆನ್ನಟ್ಟಿರುವ ಯುವ ಕ್ರಿಕೆಟ್ ಪಡೆಯು ಟೆಸ್ಟ್ ಮತ್ತು ಏಕದಿನ ಮಾದರಿಗಳತ್ತ ಹೆಚ್ಚು ವಾಲುತ್ತಿಲ್ಲ. ಅವರ ಆಟದಲ್ಲಿ 'ಹೊಡಿ ಬಡಿ' ಆಟದ ಛಾಯೆ ಎದ್ದುಕಾಣುತ್ತಿದೆ.



ಕಪಿಲ್ ಕಪ್ ಎತ್ತಿ ಹಿಡಿದಿದ್ದ ಕ್ಷಣ

ಟೆಸ್ಟ್ ಉಳಿವಿಗಾಗಿ ವಿಶ್ವ ಚಾಂಪಿಯನ್‌ಷಿಪ್ ಆರಂಭಿಸಿದ ಐಸಿಸಿಯ ಪ್ರಯತ್ನಕ್ಕೆ ಈಗ ಫಲ ದೊರೆಯುತ್ತಿದೆ. ದೀರ್ಘ ಮಾದರಿಯ ಪಂದ್ಯಗಳೂ ಈಗ ರೋಚಕತೆ ಕೆರಳಿಸುತ್ತಿವೆ. ಡ್ರಾ ಫಲಿತಾಂಶಗಳು ಗಣನೀಯವಾಗಿ ಕಡಿಮೆಯಾಗಿವೆ. ಇತ್ತೀಚೆಗೆ ಎಜ್‌ಬಾಸ್ಟನ್‌ನಲ್ಲಿ ನಡೆದ ಆ್ಯಷಸ್ ಸರಣಿಯ ಮೊದಲ ಪಂದ್ಯ ಇದಕ್ಕೆ ಒಂದು ಉತ್ತಮ ಉದಾಹರಣೆ. ಕೊನೆಯ ದಿನದ ಅಂತಿಮ ಹಂತದವರೆಗೂ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳ ಹೋರಾಟ ಕುತೂಹಲ ಉಳಿಸಿಕೊಂಡಿತ್ತು. ಆಸ್ಟ್ರೇಲಿಯಾ ತಂಡದ ನಾಯಕ ಮತ್ತು ವೇಗಿ ಪ್ಯಾಟ್ ಕಮಿನ್ಸ್ ಅವರ ದಿಟ್ಟ ಹೋರಾಟಕ್ಕೆ ಜಯ ಒಲಿಯಿತು. ಆದರೆ ಎರಡೂ ತಂಡಗಳ ಆಟವೂ ಇಲ್ಲಿ ಅಭಿನಂದನೀಯ. ಅವತ್ತು ಕಮಿನ್ಸ್ ಹೋರಾಟವು ಕಪಿಲ್ ಆಟವನ್ನು ನೆನಪಿಸಿದ್ದರೆ ಅಚ್ಚರಿಯಿಲ್ಲ.

ಆದರೆ ಅದಕ್ಕೂ ಮುನ್ನ ಇದೇ ಆಸ್ಟ್ರೇಲಿಯಾ ಎದುರಿನ ವಿಶ್ವ ಟೆಸ್ಟ್ ಫೈನಲ್‌ನಲ್ಲಿ ಭಾರತ ತಂಡದ ಆಟ ಕಳಪೆಯಾಗಿತ್ತು. 'ಪಂದ್ಯದ ಮೊದಲ ದಿನವೇ ನಾವು ಸೋತಿದ್ದೆವು' ಎಂದು ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರೇ ಹೇಳಿದ್ದು ರೋಹಿತ್ ಶರ್ಮಾ ಬಳಗದ ಆಟಕ್ಕೆ ಹಿಡಿದ ಕೈಗನ್ನಡಿಯಾಗಿತ್ತು.

ಆಲ್‌ರೌಂಡರ್‌ಗಳಿಲ್ಲದೇ ವಿಶ್ವಕಪ್ ಗೆಲ್ಲುವುದು ಕಷ್ಟ ಎನ್ನುವುದು ಸಾರ್ವಕಾಲಿಕ ಸತ್ಯ. ಭಾರತವು ಮೊದಲ ವಿಶ್ವಕಪ್ ಜಯಿಸಲು ಕಪಿಲ್, ಬಿನ್ನಿ, ಮೊಹಿಂದರ್ ಅಮರನಾಥ್ ಮತ್ತು ಮದನ್ ಲಾಲ್ ಅವರಂತಹ ಆಲ್‌ರೌಂಡರ್‌ಗಳ ಪಾತ್ರವೇ ಮಹತ್ವದ್ದಾಗಿತ್ತು. 2011ರಲ್ಲಿ ಧೋನಿ ಬಳಗದ ವಿಜಯದಲ್ಲಿ ಯುವರಾಜ್ ಸಿಂಗ್ ಆಲ್‌ರೌಂಡ್ ಆಟವನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಆದರೆ 2013ರಲ್ಲಿ ಭಾರತವು ಚಾಂಪಿಯನ್ಸ್ ಟ್ರೋಫಿ ಗೆದ್ದ ನಂತರದ ವರ್ಷಗಳಲ್ಲಿ ಆಡಿದ ವಿಶ್ವಕಪ್ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿಲ್ಲ. ಅದಕ್ಕೆ ಪ್ರಮುಖ ಕಾರಣ ಕ್ರಿಕೆಟ್‌ನ ಮೂಲಪಾಠಗಳನ್ನು ಆಟಗಾರರು ಮತ್ತು ತಂಡದ ವ್ಯವಸ್ಥಾಪಕ ಮಂಡಳಿಯು ಕಡೆಗಣಿಸುತ್ತಿರುವುದೇ ಆಗಿದೆ. ತಂಡದ ಯಶಸ್ವಿ ಆಲ್‌ರೌಂಡರ್ ಆರ್. ಅಶ್ವಿನ್ ಅವರನ್ನು ಬೆಂಚ್ ಮೇಲೆ ಕೂರಿಸಿರುವ ಪ್ರಮಾದ ಒಂದು ಕಡೆಯಾದರೆ, ಹಾರ್ದಿಕ್ ಪಾಂಡ್ಯ ಅವರಂತಹ ಬ್ಯಾಟಿಂಗ್ ಆಲ್‌ರೌಂಡರ್‌ಗೆ ಟೆಸ್ಟ್‌ನಲ್ಲಿ ಆಡಲು ಹೆಚ್ಚು ಅವಕಾಶ ಸಿಗದಿರುವುದು ಇನ್ನೊಂದೆಡೆ. ಟಿ20 ಮತ್ತು ಐಪಿಎಲ್ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದ್ದು ಮತ್ತು ಗಾಯಗಳಿಗೆ ತುತ್ತಾಗಿದ್ದು ಆಟಗಾರರ ಕ್ಷಮತೆ ಕಡಿಮೆಯಾಗಲು ಕಾರಣವಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈಗಿನ ಆಟಗಾರರಿಗೆ ಕ್ರಿಕೆಟ್ ಎನ್ನುವುದು ಹಣ ಮತ್ತು ಹೆಸರು ಗಳಿಕೆಯ ವೃತ್ತಿಯಾಗಿ ಉಳಿದಿದೆ. ಅವರು ಆಟವನ್ನು ಮನಸಾರೆ ಆಸ್ವಾದಿಸುತ್ತಿಲ್ಲ ಎನ್ನುವುದೂ ಅಷ್ಟೇ ದಿಟ.

ಈ ಪ್ರವೃತ್ತಿ ಭಾರತದಲ್ಲಿ ಮಾತ್ರ ಕಾಣುತ್ತಿರುವುದಕ್ಕೆ ಎದ್ದುಕಾಣುವ ಉದಾಹರಣೆಗಳಿವೆ. ಕ್ರಿಕೆಟ್ ಜನಕರ ನಾಡು ಇಂಗ್ಲೆಂಡ್‌ನಲ್ಲಿ ಇವತ್ತಿಗೂ ಕೌಂಟಿ ಟೂರ್ನಿಗಳು ಪ್ರತಿಭಾವಂತರನ್ನು ತಯಾರಿಸುವ ಕಾರ್ಖಾನೆಗಳಾಗಿವೆ. ಆಸ್ಟ್ರೇಲಿಯಾದಲ್ಲಿಯೂ ಸ್ಥಳೀಯ ಟೂರ್ನಿಗಳು ಮೌಲ್ಯ ಕಳೆದುಕೊಂಡಿಲ್ಲ. ಭಾರತದಲ್ಲಿ ದೇಶಿ ಕ್ರಿಕೆಟ್ ಟೂರ್ನಿಗಳು ಇವತ್ತಿಗೂ ಹೆಚ್ಚಿನ ಸಂಖ್ಯೆಯಲ್ಲಿ ಆಟಗಾರರಿಗೆ ಮಣೆ ಹಾಕುತ್ತಿವೆ. ಆದರೆ ರಾಷ್ಟ್ರೀಯ ತಂಡಗಳ ಆಯ್ಕೆಯಲ್ಲಿ ಐಪಿಎಲ್ ಸಾಧನೆ ಮೂಗು ತೂರಿಸುತ್ತಿರುವುದು ಆತಂಕ ಮೂಡಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ದೇಶದ ತಂಡಕ್ಕಾಗಿ ಮುಖ್ಯ ಟೂರ್ನಿಗಳಲ್ಲಿ ಆಡಲು ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಕ್ರಿಕೆಟಿಗರು ಫ್ರ್ಯಾಂಚೈಸಿ ಲೀಗ್‌ಗಳನ್ನು ತ್ಯಜಿಸುತ್ತಾರೆ. ಆದರೆ, ಐಪಿಎಲ್ ಟೂರ್ನಿ ನಡೆಯುವಾಗ ಭಾರತ ತಂಡಕ್ಕೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭರ್ತಿ ಎರಡು ತಿಂಗಳುಗಳ ರಜೆ.

ಇಷ್ಟೆಲ್ಲ ಏಳು–ಬೀಳುಗಳ ನಡುವೆಯೂ ಕಪಿಲ್ ಬಳಗದ ಪ್ರತಿಯೊಬ್ಬ ಆಟಗಾರನೂ ದಿಗ್ಗಜರಾಗಿಯೇ ಗೌರವಕ್ಕೆ ಪಾತ್ರರಾಗುತ್ತಾರೆ. ಅವರ ಸಾಧನೆಯೇ ಸರ್ವಶ್ರೇಷ್ಠವಾಗಿ ಗುರುತಿಸಲಾಗುತ್ತದೆ. ಏಕೆಂದರೆ, ಅದರಲ್ಲಿ ನೈಜತೆ ಮತ್ತು ಹಣದ ಮದವಿಲ್ಲದ ಸಾರ್ಥಕತೆಯ ಸುಗಂಧ ಮಾತ್ರವಿತ್ತು. ❖

ಯಕ್ಷಗೊಂಬೆಗಳೊಂದಿಗೆ ರಮೇಶ್ ಕೆ.ವಿ

ಕಡಲತಡಿಯಲ್ಲಿ ಯಕ್ಷಬೊಂಬೆಯ ಮೋಡಿಯಾಟ

ಯಕ್ಷಗಾನ ಬೊಂಬೆಯಾಟದ ಸಂಘಗಳ ಸಂಖ್ಯೆ ಕ್ಷೀಣಿಸಿದ್ದರೂ ಈ ಕಲೆಯನ್ನು ಉಳಿಸುವ ನಿಟ್ಟನಲ್ಲಿ ಗಮನಾರ್ಹ ಕೆಲಸಗಳು ಕಾಸರಗೋಡು ಹಾಗೂ ಉಡುಪಿಯಲ್ಲಿ ನಡೆಯುತ್ತಿವೆ. ಅವುಗಳ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.

ಗಣೇಶ ಚಂದನಶಿವ

ಪುಟ್ಟ ಗೂಡಿನಂತಹ ವೇದಿಕೆಯ ಮೇಲಿನ ಪರದೆ ಸರಿಯುತ್ತಿದ್ದಂತೆಯೇ ಚೆಂಡೆ, ಮದ್ದಳೆ, ಭಾಗವತಿಕೆಯ ಹಿಮ್ಮೇಳದ ಸುಶ್ರಾವ್ಯ ಧ್ವನಿ ಮೊಳಗಲಾರಂಭಿಸುತ್ತದೆ. ಆಗ ಪ್ರತ್ಯಕ್ಷವಾಗುವ ಯಕ್ಷಗಾನದ ಬೊಂಬೆಗಳು, ಸೂತ್ರಧಾರರ ಆಣತಿಯಂತೆ ಅಭಿನಯದಲ್ಲಿ ತೊಡಗುತ್ತವೆ. ನಿರ್ಜೀವ ಬೊಂಬೆಗಳಲ್ಲಿ ಕ್ಷಣಾರ್ಧದಲ್ಲೇ ಜೀವಕಳೆ. ಸೂತ್ರಧಾರರ ಕೈಚಳಕದಲ್ಲಿ ಮೇಳೈಸುವ ದೃಶ್ಯಪ್ರಧಾನವಾದ ಈ ಬೊಂಬೆಯಾಟವು ವೀಕ್ಷಕರನ್ನು ಭಾವಯಾನಕ್ಕೆ ಕೊಂಡೊಯ್ಯುತ್ತದೆ.

ಕಟ್ಟಿಗೆಯ ಈ ಬೊಂಬೆಗಳು, ವಿಶಿಷ್ಟ ಅಲಂಕಾರದಲ್ಲಿ ಕಂಗೊಳಿಸುವುದಷ್ಟೇ ಅಲ್ಲ, ಕೃಷ್ಣ, ಅಸುರನ ವಧೆ, ರಾಮ ಮತ್ತು ರಾವಣರ ಮಧ್ಯದ ಕದನ... ಹೀಗೆ ಯಕ್ಷಗಾನದ ವಿವಿಧ ಪ್ರಸಂಗಗಳ ಪ್ರದರ್ಶನದಲ್ಲಿ ಮನುಷ್ಯ ಪಾತ್ರಧಾರಿಯಂತೆ 'ನೈಜತೆಯ ಪಾತ್ರ' ನಿರ್ವಹಿಸುತ್ತವೆ.

ಕೇರಳದ ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ 1981ರಿಂದಲೇ ಈ ಬೊಂಬೆಯಾಟದ ಪ್ರದರ್ಶನ ಮತ್ತು ಈ ಕಲೆಯ ಉಳಿವಿಗೆ ಶ್ರಮಿಸುತ್ತಿದೆ. ತೆಂಕುತಿಟ್ಟು ಯಕ್ಷಗಾನ ಶೈಲಿಯಲ್ಲಿ ಪ್ರದರ್ಶನ ನೀಡುವ ಏಕೈಕ ಬೊಂಬೆಯಾಟದ ಸಂಘ ಇದು. ಬಡಗುತಿಟ್ಟು ಯಕ್ಷಗಾನ ಶೈಲಿಯಲ್ಲಿ ಬೊಂಬೆಯಾಟ ಪ್ರದರ್ಶಿಸುವ ಸಂಘ ಉಡುಪಿ ಜಿಲ್ಲೆ ಉಪ್ಪಿನಕುದ್ರುವಿನಲ್ಲಿ ಇದೆ. ಅದರ ಹೆಸರು ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಳಿ. ಕೆಲ ವರ್ಷಗಳ ಹಿಂದೆ ಬಡಗುತಿಟ್ಟು ಮತ್ತು ತೆಂಕುತಿಟ್ಟು ಶೈಲಿಯ ಯಕ್ಷಗಾನದ ಬೊಂಬೆಯಾಟ ಪ್ರದರ್ಶಿಸುವ ತಲಾ 30ಕ್ಕೂ ಹೆಚ್ಚು ಸಂಘಗಳು ಇದ್ದವು.

ಯಕ್ಷಬೊಂಬೆಗಳನ್ನು ನೋಡುವುದೇ ಬಲು ಚಂದ. ಕೃಷ್ಣ, ಸತ್ಯಭಾಮೆ, ಗಣಪತಿ, ದೇವಿ, ರಾಕ್ಷಸ, ಗರುಡ, ಹನುಮಂತ, ದೇವೇಂದ್ರ, ಋಷಿಗಳು, ಭೂತಗಳು, ಶೂರ್ಪನಖಿ... ಹೀಗೆ ಯಕ್ಷಗಾನದ ಕಥಾ ಪ್ರಸಂಗಗಳಲ್ಲಿ ಬರುವ ಪ್ರತಿಯೊಂದು ಪಾತ್ರದ ಬೊಂಬೆಯೂ ಇರುತ್ತದೆ.

'ಯಕ್ಷಬೊಂಬೆ ಮನೆ'ಯಲ್ಲಿ ಯಕ್ಷಗೊಂಬೆಗಳ ತಯಾರಿಕೆ

ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದವರು ಒಂದು ಪ್ರಸಂಗದಲ್ಲಿ 30ರಿಂದ 35 ಬೊಂಬೆಗಳನ್ನು ಬಳಸುತ್ತಾರೆ. ಒಂದು ಪ್ರದರ್ಶನ ನೀಡಲು ಸೂತ್ರಧಾರರು ಸೇರಿ ಏಳು ಜನರ ತಂಡ ಇರುತ್ತದೆ. ಯಕ್ಷಗಾನದ ರೀತಿಯಲ್ಲಿ ಹಿಂದೆ ಈ ಬೊಂಬೆಯಾಟದಲ್ಲೂ ಹಿಮ್ಮೇಳ ಬಳಸಲಾಗುತ್ತಿತ್ತು. ಭಾಗವತರು, ಚೆಂಡೆ- ಮದ್ದಳೆಯವರು ಸೇರಿ 20ರಷ್ಟು ಕಲಾವಿದರು ಇರುತ್ತಿದ್ದರು. ಆದರೆ, ಕಲಾವಿದರ ಕೊರತೆಯ ಕಾರಣ ಹಿಮ್ಮೇಳದ ಬಳಕೆ ನಿಲ್ಲಿಸಲಾಗಿದೆ. ಧ್ವನಿ ಮುದ್ರಿಕೆಯನ್ನು ಬಳಸಿ ಪ್ರದರ್ಶನ ನೀಡಲಾಗುತ್ತಿದೆ.

'ಬೊಂಬೆಯಾಟಕ್ಕೂ ಈಗ ಕಾಲಮಿತಿ ಬಂದಿದೆ. ಹಿಂದೆ ಪ್ರದರ್ಶನದ ಅವಧಿ ಎರಡೂವರೆ ಗಂಟೆ ಇತ್ತು. ಜನರಿಗೆ ಬೇಸರವಾಗ ಬಾರದು ಎಂಬ ಕಾರಣಕ್ಕೆ ಒಂದು ಗಂಟೆಯ ಕಾಲಮಿತಿಯಲ್ಲಿ ಪ್ರದರ್ಶನ ನೀಡುತ್ತಿದ್ದೇವೆ. ಹಿಂದೆ ವರ್ಷಕ್ಕೆ 50ಕ್ಕೂ ಹೆಚ್ಚು ಪ್ರದರ್ಶನ ಇರುತ್ತಿದ್ದವು. ಈಗ ಒಂದು ವರ್ಷಕ್ಕೆ ಪ್ರದರ್ಶನಗಳ ಸಂಖ್ಯೆ ಸರಾಸರಿ 15ಕ್ಕೆ ಸೀಮಿತಗೊಂಡಿದೆ. ಆಸಕ್ತರು ಕಡಿಮೆಯಾಗಿರುವುದೇ ಇದಕ್ಕೆ ಕಾರಣ' ಎಂದು ಬೇಸರ ವ್ಯಕ್ತಪಡಿಸುತ್ತಾರೆ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ಪ್ರಧಾನ ಸೂತ್ರಧಾರ ರಮೇಶ ಕೆ.ವಿ.

ಯಕ್ಷಪುತ್ಥಳಿ ಬೊಂಬೆ ಮನೆ

ಕಾಸರಗೋಡಿನ ಪಿಲಿಕುಂಜೆಯಲ್ಲಿ ರಮೇಶ್ ಮತ್ತು ಅವರ ಸಹೋದರ, ಹಾಸನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಡಾ. ಓಂಪ್ರಕಾಶ್ ಕೆ.ವಿ., ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿರುವ ಶ್ರೀವತ್ಸ ಕೆ.ವಿ., ಬೆಂಗಳೂರಿನಲ್ಲಿ ನೆಲೆಸಿರುವ ಅಕ್ಕಂದಿರಾದ ಗೀತಾ, ಅನಿತಾ ಎಲ್ಲರೂ ಸೇರಿ ಯಕ್ಷಪುತ್ಥಳಿ ಬೊಂಬೆ ಮನೆ ನಿರ್ಮಿಸಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಕಾಸರಗೋಡಿನ ಪಿಲಿಕುಂಜೆಯ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ 'ಯಕ್ಷ ಬೊಂಬೆ ಮನೆ'ಯಲ್ಲಿಯ ಯಕ್ಷ ಬೊಂಬೆಗಳು -ಫಕ್ರುದ್ದೀನ್ ಎಚ್

ಮನೆಯ ಮಹಡಿಯಲ್ಲಿ ಯಕ್ಷಪುತ್ಥಳಿ ವಸ್ತುಸಂಗ್ರಹಾಲಯ ಸ್ಥಾಪಿಸಿ, ಅಲ್ಲಿ ಒಂದು ಸಾವಿರ ಯಕ್ಷಗೊಂಬೆಗಳನ್ನು ಪ್ರದರ್ಶನಕ್ಕಿಡುವ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ.

ಇಲ್ಲಿಗೆ ಭೇಟಿ ನೀಡಿದ್ದ ಹಾಗೂ ಯಕ್ಷಬೊಂಬೆಯಾಟಕ್ಕೆ ಮನಸೋತ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಡಾ.ಸಿ. ಸೋಮಶೇಖರ ಅವರು ಈ ವಸ್ತುಸಂಗ್ರಹಾಲಯಕ್ಕೆ ಪ್ರಾಧಿಕಾರದಿಂದ ₹20 ಲಕ್ಷ ಅನುದಾನ ಮಂಜೂರು ಮಾಡಿದ್ದಾರೆ.

ರಮೇಶ್ ಅವರ ಮನೆಯಲ್ಲಿ ಈಗ 150 ಬೊಂಬೆಗಳು ಇವೆ. ವಸ್ತು ಸಂಗ್ರಹಾಲಯದಲ್ಲಿ ಇಡಲು ಒಂದು ಸಾವಿರ ಯಕ್ಷಬೊಂಬೆಗಳನ್ನು ತಯಾರಿಸುವ ಕೆಲಸದಲ್ಲಿ ಅವರು ನಿರತರಾಗಿದ್ದಾರೆ. ಮನೆಯಲ್ಲೇ ಬೊಂಬೆ ತಯಾರಿಸುವುದು ಈ ಕುಟುಂಬದ ವಿಶೇಷತೆ. ಇವರು ತಮ್ಮ ಮನೆಯ ಆವರಣದಲ್ಲೇ ವರ್ಕ್‌ಶಾಪ್ ಮಾಡಿಕೊಂಡಿದ್ದಾರೆ. ಕಟ್ಟಿಗೆಯ ಕೆತ್ತನೆಯಿಂದ ಹಿಡಿದು, ಅದಕ್ಕೆ ಮೂರ್ತಿ ರೂಪ ನೀಡುವುದು, ಬಣ್ಣ ಬಳಿದು ಅಂದಗೊಳಿಸುವ ಎಲ್ಲ ಕೆಲಸವನ್ನೂ ರಮೇಶ್ ಮಾಡುತ್ತಾರೆ. ಅವರ ಸಹೋದರಿಯರಾದ ಗೀತಾ ಮತ್ತು ಅನಿತಾ ಅವರು ಬೊಂಬೆಗಳ ಬಟ್ಟೆ, ಆಭರಣ ಸಿದ್ಧಪಡಿಸಿಕೊಡುತ್ತಾರೆ.

ಬೊಂಬೆಗಳ ತಯಾರಿಕೆಗೆ ಹಗುರವಾದ ಸಾಗವಾನಿ, ಹಾಲೆ ಮರ, ಶಿವನೆ ಮರದ ಕಟ್ಟಿಗೆ ಬಳಸಲಾಗುತ್ತಿದೆ. ಸಾಗವಾನಿ ಮರದಿಂದ ತಯಾರಿಸಿದ ಬೊಂಬೆಗಳು 500 ವರ್ಷ ಬಾಳಿಕೆ ಬಂದರೆ ಉಳಿದವು 50 ವರ್ಷವಾದರೂ ಬಾಳಿಕೆ ಬರುತ್ತವೆ ಎನ್ನುತ್ತಾರೆ ಇವರು.

ಒಂದು ಬೊಂಬೆ ತಯಾರಾಗಲು ಕನಿಷ್ಠ ಆರು ವಾರ ಬೇಕು. ಬೊಂಬೆ ತಯಾರಿಸಲು ₹30 ಸಾವಿರದಿಂದ ₹50 ಸಾವಿರದ ವರೆಗೂ ವೆಚ್ಚವಾಗುತ್ತದೆ. ಒಂದೊಂದು ಬೊಂಬೆ ಅದರ ಪಾತ್ರಕ್ಕೆ ಅನುಗುಣವಾಗಿ 3ರಿಂದ 6 ಕೆ.ಜಿ. ಭಾರ ಇರುತ್ತದೆ ಎನ್ನುತ್ತಾರೆ ರಮೇಶ್. ಪ್ರದರ್ಶನಕ್ಕೆ ಬಳಸುವ ಬೊಂಬೆಗಳಿಗೆ ಎರಡು ವರ್ಷಕ್ಕೊಮ್ಮೆ ಬಣ್ಣ ಬಳಿಯಬೇಕು; ಹೊಸ ಬಟ್ಟೆ ತೊಡಿಸಬೇಕಾಗುತ್ತದೆ.

ಒಂದು ಬೊಂಬೆಯಲ್ಲಿ ತಲೆ, ಕತ್ತು, ಕಾಲು, ಪಾದ, ಮೊಣಕಾಲು ಹೀಗೆ 13 ಭಾಗಗಳು ಇರುತ್ತವೆ. ಸಾಮಾನ್ಯವಾಗಿ ಬೊಂಬೆಗಳಿಗೆ ಆರು ಸೂತ್ರಗಳನ್ನು ಬಳಸಲಾಗುತ್ತಿದ್ದು, ಬಾಲ ಇರುವ ಹನುಮಂತ, ಕೈಯಲ್ಲಿ ಗದೆ ಹಿಡಿದುಕೊಂಡಿರುವ ನರಕಾಸುರ ಇಂತಹವುಗಳಿಗೆ ಏಳು ಸೂತ್ರಗಳನ್ನು ಬಳಸಲಾಗುತ್ತದೆ.

ಮೂರು ಸಾವಿರಕ್ಕೂ ಹೆಚ್ಚು ಪ್ರದರ್ಶನ ನೀಡಿರುವುದು ಈ ತಂಡದ ಹೆಗ್ಗಳಿಕೆ. ಐದು ದೇಶಗಳಲ್ಲಿ ಹಾಗೂ ಭಾರತದ ಬಹುತೇಕ ರಾಜ್ಯಗಳಲ್ಲಿ ಇವರ ಪ್ರದರ್ಶನಗಳು ನಡೆದಿವೆ. ಬೊಂಬೆಗಳೇ ಪ್ರಮುಖ ಆಕರ್ಷಣೆ ಮತ್ತು ಇದು ದೃಶ್ಯ ಪ್ರಧಾನ ಕಲೆಯಾಗಿರುವುದರಿಂದ ಪ್ರದರ್ಶನದ ವೇಳೆ ಭಾಷೆಯ ಸಮಸ್ಯೆ ಆಗಿಲ್ಲ ಎನ್ನುತ್ತಾರೆ ರಮೇಶ್. ಈ ಕಲೆ ಬೆಳೆಯಬೇಕು ಎಂಬ ಕಾರಣಕ್ಕಾಗಿ ಇವರು ಆಸಕ್ತರಿಗೆ ಬೊಂಬೆಯಾಟದ ತರಬೇತಿ ನೀಡುತ್ತಿದ್ದಾರೆ. ಇವರಲ್ಲಿ ಕಲಿತ ಐವರು ಸೂತ್ರದ ಬೊಂಬೆಯಾಟದಲ್ಲಿ ಪಳಗಿದ್ದಾರೆ. ❖

ಪಯಣ ನಟನಿಗೆ ಜಗವೇ ನಾಟಕರಂಗ



ಎಂ. ರಾಘವೇಂದ್ರ, ಸಾಗರ

ರಂಗಭೂಮಿ

'ಟ್ರಾವೆಲಿಂಗ್ ಆ್ಯಕ್ಟರ್' ಎಂದೇ ತಮ್ಮನ್ನು ತಾವು ಕರೆದುಕೊಳ್ಳುವ ಜಮ್ಮುವಿನ ರಂಗ ಕಲಾವಿದ ಲಕ್ಕಿ ಗುಪ್ತ ಒಂಬತ್ತು ತಿಂಗಳುಗಳಿಂದ ಕರ್ನಾಟಕದಲ್ಲೆ ನೆಲೆಸಿದ್ದಾರೆ. ಪಂಜಾಬಿ ಲೇಖಕ ಮೋಹನ್ ಭಂಡಾರಿ ಅವರ ಕತೆ ಆಧರಿಸಿದ ಏಕವ್ಯಕ್ತಿ ಹಿಂದಿ ರಂಗಪ್ರಯೋಗ 'ಮಾ ಮುಝೆ ಟ್ಯಾಗೋರ್ ಬನಾದೇ' ಮೂಲಕ ಅವರು ಕನ್ನಡದ ನೆಲದಲ್ಲಿ ಸದ್ದು ಮಾಡುತ್ತಿದ್ದಾರೆ.

ಇಪ್ಪತ್ತೈದು ವರ್ಷಗಳಿಂದ ರಂಗಭೂಮಿಯಲ್ಲಿ ಸಕ್ರಿಯವಾಗಿರುವ ಲಕ್ಕಿ ಗುಪ್ತ 2010ರಿಂದ ತಮ್ಮನ್ನು ಕೇವಲ ಏಕವ್ಯಕ್ತಿ ರಂಗ ಪ್ರಯೋಗಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಈವರೆಗೆ ಐದು ಏಕವ್ಯಕ್ತಿ ರಂಗಪ್ರಯೋಗಗಳನ್ನು ಮಾಡಿದ್ದು, ಒಂದರಲ್ಲಿ ಸಂಭಾಷಣೆಯೇ ಇಲ್ಲ.

ಲಕ್ಕಿ ಗುಪ್ತ ಅಭಿನಯದ 'ಮಾ ಮುಝೆ ಟ್ಯಾಗೋರ್ ಬನಾದೇ' ರಂಗಪ್ರಯೋಗ ಭಾರತದ ವಿವಿಧ ಭಾಗಗಳಲ್ಲಿ ಈವರೆಗೆ 1172 ಪ್ರದರ್ಶನಗಳನ್ನು ಕಂಡಿದೆ. ಕವಿತೆ ಬರೆಯುವ ಗೀಳು ಹೊಂದಿರುವ ಬಾಲಕ. ರವೀಂದ್ರನಾಥ ಟ್ಯಾಗೋರ್ ಮಟ್ಟಕ್ಕೆ ಏರುವ ಹಂಬಲ ಅವನಿಗೆ. ಬಡತನದಿಂದಾಗಿ ಅರ್ಧದಲ್ಲೇ ಶಿಕ್ಷಣ ತೊರೆಯಬೇಕಾದ ಅವನ ಕತೆಯನ್ನು ಈ ಪ್ರಯೋಗ ಆಧರಿಸಿದೆ.

ಬಾಲಕ ತನ್ನ ಕತೆಯನ್ನು ತಾನೇ ನಿರೂಪಿಸಿಕೊಳ್ಳುತ್ತಾನೆ. ಆತನ ತಂದೆ, ತಾಯಿ, ಅಜ್ಜ, ಸಹಪಾಠಿಗಳು, ಗ್ರಾಮದ ಸರಪಂಚ್, ಜಮೀನುದಾರ ಹೀಗೆ ಹತ್ತು ಹಲವು ಪಾತ್ರಗಳು ಪ್ರಯೋಗದಲ್ಲಿ ಹಾದುಹೋಗುತ್ತವೆ. ಪ್ರೇಕ್ಷಕರನ್ನೂ ಪಾತ್ರಧಾರಿಗಳಾಗಿ ಒಳಗೊಳ್ಳುವುದು ಈ ಪ್ರಯೋಗದ ವಿಶೇಷತೆ.

ಇವೆಲ್ಲಾ ಪೂರ್ವನಿಯೋಜಿತವೇ ಎಂದು ಅನಿಸುವಷ್ಟರ ಮಟ್ಟಿಗೆ ಪ್ರೇಕ್ಷಕರನ್ನು ಪಾತ್ರಧಾರಿಗಳನ್ನಾಗಿ ಆಯ್ಕೆ ಮಾಡುವಲ್ಲಿ ಲಕ್ಕಿ ಗುಪ್ತ ಅವರ ಪರಿಣತಿ ಇದೆ. 'ಪ್ರತಿ ಪ್ರದರ್ಶನಕ್ಕೆ ಮುನ್ನ ಪ್ರೇಕ್ಷಕರನ್ನು ಪಾತ್ರಧಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಲು ಉತ್ತಮ ಅವಕಾಶ ದೊರಕಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ' ಎನ್ನುತ್ತಾರೆ ಲಕ್ಕಿ ಗುಪ್ತ.

ಶಿಕ್ಷಣದಿಂದ ವಂಚಿತನಾಗುವ ಪ್ರತಿಭಾಶಾಲಿ ಬಾಲಕ ತನ್ನ ವೃತ್ತಾಂತವನ್ನು ಬಿಚ್ಚಿಡುತ್ತ ಹೋಗುತ್ತಿದ್ದಂತೆ ಪ್ರೇಕ್ಷಕರ ಕಣ್ಣಿನಲ್ಲಿ ತಂತಾನೇ ನೀರಿನ ಹನಿಗಳು ತೊಟ್ಟಿಕ್ಕುವ ಮಟ್ಟಿಗೆ ಲಕ್ಕಿ ಗುಪ್ತ ಅವರ ಅಭಿನಯ ಪ್ರಭಾವಶಾಲಿಯಾಗಿದೆ. ಇದು ನಮ್ಮದೇ ಅಥವಾ ನಾವೆಲ್ಲೋ ಕೇಳಿದ, ನೋಡಿದ ಕತೆ ಎಂಬ ಭಾವನೆಯಿಂದ ಪ್ರೇಕ್ಷಕರು ವಸ್ತು, ಪಾತ್ರವನ್ನು ಒಳಗೊಳ್ಳುವುದು ಪ್ರದರ್ಶನದ ಯಶಸ್ಸಿಗೆ ಹಿಡಿದ ಕೈಗನ್ನಡಿ.

ಈ ಪ್ರಯೋಗದಿಂದ ಹಲವು ವಿಶಿಷ್ಟ ಅನುಭವಗಳು ಲಕ್ಕಿ ಗುಪ್ತ ಅವರಿಗೆ ದಕ್ಕಿವೆ. ಒಮ್ಮೆ ಕಾಲೇಜೊಂದರ ಪ್ರದರ್ಶನದಲ್ಲಿ ವಿದ್ಯಾರ್ಥಿಯೊಬ್ಬನನ್ನು ಮೊಮ್ಮಗನ ಪಾತ್ರಧಾರಿಯಾಗಿ ಆಯ್ಕೆ ಮಾಡಿಕೊಂಡರು. ಆಗ ಆತ ತನ್ನ ಅಭಿನಯದ ಮುಂದುವರಿಕೆಯಾಗಿ, 'ನನ್ನ ಅಜ್ಜ ತುಂಬಾ ಕೀಟಲೆಯ ಮನುಷ್ಯ' ಎಂಬ ಡೈಲಾಗ್ ಹೊಡೆದು, ಲಕ್ಕಿ ಗುಪ್ತ ಧರಿಸಿದ್ದ ಧೋತಿಯನ್ನು ಕಿತ್ತುಕೊಂಡು ಕಾಲೇಜು ಕ್ಯಾಂಪಸ್ ತುಂಬಾ ಓಡಾಡಿದನಂತೆ.

ಲಘು ಹಾಸ್ಯ, ನವಿರಾದ ನಿರೂಪಣೆಯ ಜೊತೆಗೆ ಸಾಗುವ '...ಟ್ಯಾಗೋರ್ ಬನಾದೇ' ರಂಗ ಪ್ರಯೋಗ ಕ್ಲೈಮಾಕ್ಸ್‌ನಲ್ಲಿ ಭಾವುಕ ತಿರುವು ಪಡೆಯುತ್ತದೆ. ಪ್ರೇಕ್ಷಕರಲ್ಲೇ ಒಬ್ಬರು 'ಅಮ್ಮ'ನಾಗಬೇಕು. ಅವರ ಮಡಿಲಲ್ಲಿ ಕೇಂದ್ರ ಪಾತ್ರ ಬಾಲಕ ಮಲಗಬೇಕು. ಈ ಸನ್ನಿವೇಶವನ್ನು 'ಒಂದು ಹರಿಯುವ ನದಿಯ ತಟದಲ್ಲಿ ಮತ್ತೊಂದು ನದಿ ಮಲಗಿದಂತೆ' ಎಂದು ಪಾತ್ರಧಾರಿ ಬಣ್ಣಿಸುತ್ತಾನೆ.

'ವಿದ್ಯಾರ್ಥಿಯಾಗಿ ಪ್ರತಿದಿನ ಹೊಸತನ್ನು ಕಲಿಯಲು ಬಯಸುವವನೇ ನಿಜವಾದ ಶಿಕ್ಷಕ' ಎಂಬ ಅರ್ಥಪೂರ್ಣ ಮಾತಿಗೆ ಪ್ರೇಕ್ಷಕರಿಂದ ಸಹಜವಾಗಿ ಚಪ್ಪಾಳೆ ಸಿಗುತ್ತದೆ. ಮಗುವೊಂದಕ್ಕೆ ಟ್ಯಾಗೋರ್ ಕವಿತೆ ಕಲಿಸುವ ಸನ್ನಿವೇಶವನ್ನು ಕಲ್ಪಿಸಿಕೊಳ್ಳುವ ಬಾಲಕ, 'ಇಲ್ಲಿ ರವೀಂದ್ರರು ಕವಿತೆ ಕಲಿಸುತ್ತಿದ್ದಾರೋ ಅಥವಾ ಮಗುವೇ ರವೀಂದ್ರರಿಗೆ ಕವಿತೆ ಹೇಳಿಕೊಡುತ್ತಿದೆಯೋ' ಎಂಬ ಭಾವ ಮೂಡುತ್ತಿರುವುದಾಗಿ ಹೇಳುತ್ತಾನೆ. ಆ ದೃಶ್ಯ ಮನಮುಟ್ಟುತ್ತದೆ.

ಟ್ಯಾಗೋರ್ ಆಗುವ ಕನಸು ಕಂಡು ಕೊನೆಗೆ ಅರ್ಧಕ್ಕೇ ಶಾಲೆ ಬಿಡುವ ಅನಿವಾರ್ಯ ಎದುರಾದಾಗ 'ನನ್ನೊಳಗಿನ ಟ್ಯಾಗೋರ್ ಮತ್ತೆ ಮತ್ತೆ ಜಾಗೃತಗೊಳ್ಳುತ್ತಾನೆ' ಎನ್ನುವ ಬಾಲಕ 'ಕವಿತೆಯಿಂದ ಹೊಟ್ಟೆ ತುಂಬುತ್ತದೆಯೆ' ಎಂಬ ಪ್ರಶ್ನೆಯನ್ನೂ ಮುಂದಿಡುತ್ತಾನೆ. ಅಂತಿಮವಾಗಿ ಆತ ಸ್ವತಃ ಟ್ಯಾಗೋರ್ ಆಗುವುದಕ್ಕಿಂತ ಹಲವು ಟ್ಯಾಗೋರ್‌ಗಳನ್ನು ಸೃಷ್ಟಿಸುವುದು ಮುಖ್ಯ ಎಂಬ ತೀರ್ಮಾನಕ್ಕೆ ಬರುವುದರೊಂದಿಗೆ ಪ್ರಯೋಗ ಅಂತ್ಯ ಕಾಣುತ್ತದೆ.

ವಿಶಾಲವಾದ ರಂಗಮಂದಿರ, ಮೇಕಪ್, ಬೆಳಕು, ಸಂಗೀತ, ರಂಗ ಪರಿಕರಗಳ ನೆರವಿಲ್ಲದೆ ಒಂದು ರಂಗಪ್ರಯೋಗವನ್ನು ಕಟ್ಟಿಕೊಡಲು ಸಾಧ್ಯ ಎಂಬುದಕ್ಕೆ ಲಕ್ಕಿಗುಪ್ತ ಅವರ 'ಮಾ ಮುಝೆ ಟ್ಯಾಗೋರ್ ಬನಾದೇ' ಅತ್ಯುತ್ತಮ ಉದಾಹರಣೆಯಾಗಿದೆ.

'ನಾವು ರಂಗಭೂಮಿಯವರು 40-50 ವರ್ಷ ದಾಟಿದ ಪ್ರೇಕ್ಷಕರ ಎದುರೇ ನಾಟಕ ಪ್ರದರ್ಶಿಸುತ್ತಿದ್ದೇವೆ. ಇದೇ ಮುಂದುವರೆದರೆ ಇನ್ನು 20 ವರ್ಷಗಳ ನಂತರ ನಮಗೆ ಪ್ರೇಕ್ಷಕರೇ ದೊರಕುವುದಿಲ್ಲ. ವಿದ್ಯಾರ್ಥಿ, ಯುವಜನರನ್ನು ಹೆಚ್ಚಾಗಿ ತಲುಪುವತ್ತ ರಂಗ ಕಲಾವಿದರು ಮನಸ್ಸು ಮಾಡಬೇಕು. ಇಲ್ಲದಿದ್ದರೆ ರಂಗಭೂಮಿ ಉಳಿಯುವುದಿಲ್ಲ' ಎಂಬುದು ಲಕ್ಕಿ ಗುಪ್ತ ಅವರ ಆತಂಕ ಬೆರೆಸಿದ ಸಲಹೆ.

ಲಕ್ಕಿ ಗುಪ್ತ ಅವರ 'ಮಾ ಮುಝೆ ಟ್ಯಾಗೋರ್ ಬನಾದೇ' ರಂಗಪ್ರಯೋಗದ ಯಶಸ್ಸಿನಿಂದ ಉತ್ತೇಜಿತರಾಗಿ ಹಿರಿಯ ರಂಗಕರ್ಮಿ ಪ್ರಸನ್ನ ಅವರು 'ಕುಪ್ಪಳ್ಳಿ ಪುಟ್ಟ' ಎಂಬ ಹೊಸ ರಂಗ ಪಠ್ಯವನ್ನು ಸಿದ್ಧಪಡಿಸಿದ್ದಾರೆ. ಕರ್ನಾಟಕದ ಮೂವರು ಯುವ ಕಲಾವಿದರು ಈ ಪಠ್ಯವನ್ನು ರಂಗದ ಮೇಲೆ ತರಲು ಮುಂದಾಗಿದ್ದು ಟ್ಯಾಗೋರ್ ಸ್ಥಾನವನ್ನು ಕುವೆಂಪು ಅಲಂಕರಿಸಲಿದ್ದಾರೆ. ರಂಗಭೂಮಿ ಭಾಷೆ, ಧರ್ಮ, ಪ್ರದೇಶಗಳ ಗಡಿಯನ್ನು ದಾಟಿದ್ದು ಎಂಬ ಮಾತು ಈ ಮೂಲಕ ಸತ್ಯವಾಗುತ್ತಿದೆ. ❖

ಬದುಕು ಬದಲಿಸಿದ ನಾಟಕ

ಜಮ್ಮುವಿನಲ್ಲಿ ಹುಟ್ಟಿ ಬೆಳೆದ ಲಕ್ಕಿ ಗುಪ್ತ ಅವರದ್ದು ರಂಗಭೂಮಿ ಹಿನ್ನೆಲೆಯ ಕುಟುಂಬವಲ್ಲ. 'ಪಿಯುವರೆಗೂ ಕೀಟಲೆ ಸ್ವಭಾವದ ವಿದ್ಯಾರ್ಥಿಯಾಗಿದ್ದೆ. ಡೋಗ್ರಿ ಭಾಷೆಯ ಒಂದು ನಾಟಕ ನೋಡಿದ ನಂತರ ಬದುಕಿನ ದಿಕ್ಕೇ ಬದಲಾಯಿತು' ಎನ್ನುತ್ತಾರೆ ಲಕ್ಕಿ. ಬಳಿಕ ರಂಗಭೂಮಿಗೆ ತಮ್ಮನ್ನು ಸಮರ್ಪಿಸಿಕೊಂಡ ಅವರು ಜಮ್ಮುವಿನ 'ಏಕ್ ಸಾಥ್ ರಂಗ್‌ಮಂಡಲ್', 'ಅಮೆಚ್ಯೂರ್ ಥಿಯೇಟರ್ ಗ್ರೂಪ್', 'ಸಮೂಹ ಥಿಯೇಟರ್', 'ನಟರಂಗ್', ಪಶ್ಚಿಮ ಬಂಗಾಳದ 'ಗೋಬರ್ ಡಂಗ್', ಪಂಜಾಬ್, ಹಿಮಾಚಲದ ರಂಗತಂಡಗಳೊಂದಿಗೆ ಕೆಲಸ ಮಾಡಿದರು. 2009ರಲ್ಲಿ ಜಮ್ಮುವಿನಲ್ಲಿ ಅವರು ನಿರ್ದೇಶಿಸಿದ ಮಹತ್ವಾಕಾಂಕ್ಷೆಯ ಪ್ರಯೋಗ ಸುಸಜ್ಜಿತ ರಂಗಮಂದಿರ, ಹಣಕಾಸಿನ ಕೊರತೆಯಿಂದ ವಿಫಲವಾದ ನಂತರ ಅವರು ಏಕವ್ಯಕ್ತಿ ರಂಗಪ್ರಯೋಗದತ್ತ ಹೊರಳಿದರು.

ಕಳೆದ ಹದಿಮೂರು ವರ್ಷಗಳಲ್ಲಿ ನಾಲ್ಕೂವರೆ ಲಕ್ಷ ಕಿ.ಮೀ ಪಯಣಿಸಿರುವ ಅವರು ಭಾರತದ 25 ರಾಜ್ಯಗಳ 750 ಊರುಗಳಲ್ಲಿ ರಂಗಪ್ರದರ್ಶನ ನೀಡಿದ್ದಾರೆ. ಐದಾರು ಜನರ ಎದುರು ಕೂಡ ಏಕವ್ಯಕ್ತಿ ರಂಗಪ್ರಯೋಗ ಪ್ರದರ್ಶಿಸಿರುವ ಲಕ್ಕಿ, ಒಂದು ನಗರದ ಫ್ಲ್ಯಾಟ್‌ನಲ್ಲಿ ಒಬ್ಬನೇ ಪ್ರೇಕ್ಷಕನ ಎದುರು ಪ್ರದರ್ಶನ ನೀಡುವ ಸವಾಲನ್ನೂ ಸ್ವೀಕರಿಸಿ ಯಶಸ್ವಿಯಾಗಿದ್ದಾರೆ. ಇನ್ನೂ ಸ್ವಲ್ಪ ಕಾಲ ಕರ್ನಾಟಕದಲ್ಲಿಯೇ ಅವರು ಇರಲಿದ್ದಾರೆ. ಯಾರು ಎಲ್ಲಿಗೆ ಕರೆದರೂ ಹೋಗಿ ನಾಟಕ ಆಡುವುದು ಅವರ ಜಾಯಮಾನ. ಲಕ್ಕಿ ಅವರ ಸಂಪರ್ಕ: 8491891536.

ಹುಬ್ಬಳ್ಳಿಯ 'ಬೋಗಿ ಬೋಗಿ' ರೆಸ್ಟೋರೆಂಟ್‌ನ ನೋಟ ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ರೈಲ್ವೆ ಇಲಾಖೆಗೆ ವಾರ್ಷಿಕ ₹ 20 ಲಕ್ಷ ಆದಾಯ

'ಶ್ರೀ ಸಿದ್ಧಾರಾಢಸ್ವಾಮಿ ರೈಲು ನಿಲ್ದಾಣದಲ್ಲಿ ನಿತ್ಯ 37 ಸಾವಿರಕ್ಕೂ ಹೆಚ್ಚು ಪ್ರಯಾಣಿಕರು ಸಂಚರಿಸುತ್ತಾರೆ. ಪ್ರಯಾಣಿಕರಿಗೆ 24 ಗಂಟೆಯೂ ಉಪಾಹಾರ ಹಾಗೂ ಊಟದ ಸೌಲಭ್ಯ ಒದಗಿಸಬೇಕು ಎಂಬ ಉದ್ದೇಶದಿಂದ ಖಾಸಗಿ ಕಂಪನಿಯವರಿಂದ ಇ-ಟೆಂಡರ್ ಆಹ್ವಾನಿಸಿದೆವು. ಹುಬ್ಬಳ್ಳಿಯ ಮರಿಹಾ ಕಮ್ಯುನಿಕೇಷನ್ ಟೆಂಡರ್ ಪಡೆದಿದ್ದು, ಅವರಿಗೆ ರೈಲ್ವೆಯ ಹಳೆಯ ಹಾಳಾದ ಬೋಗಿ ಹಾಗೂ ರೈಲ್ವೆ ಆವರಣದಲ್ಲೆ 300 ಚದರ ಮೀಟರ್ ಸ್ಥಳ ನೀಡಿದ್ದೇವೆ. ಇದರಿಂದ ವಾರ್ಷಿಕ ₹ 20 ಲಕ್ಷ ರೈಲ್ವೆ ಇಲಾಖೆಗೆ ಆದಾಯ ಬರುತ್ತದೆ' ಎನ್ನುತ್ತಾರೆ ಹುಬ್ಬಳ್ಳಿಯ ನೈರುತ್ಯ ರೈಲ್ವೆ ವಿಭಾಗದ ವಾಣಿಜ್ಯ ವ್ಯವಸ್ಥಾಪಕಿ ಹರಿತಾ.

ಹೊಸಪೇಟೆ, ಬೆಳಗಾವಿಯಲ್ಲೂ ಇದೇ ರೀತಿ ರೆಸ್ಟೋರೆಂಟ್ ಆರಂಭಿಸುವ ಉದ್ದೇಶವಿದ್ದು, ಅದಕ್ಕೆ ಪೂರಕ ಕೆಲಸಗಳು ಪ್ರಗತಿಯಲ್ಲಿವೆ ಎಂದು ಅವರು ತಿಳಿಸುತ್ತಾರೆ.

'ಬೋಗಿ ಬೋಗಿ'... ತಿನ್ನಿ ಹೋಗಿ

ಗೌರಮ್ಮ ಕಟ್ಟಿಮನಿ

ಮುಂದೆ ಎಂಜಿನ್ ಇಲ್ಲ, ಹಿಂದೆ ಗಾರ್ಡ್ ಕಾಣಿಸಲ್ಲ. ಚುಕುಚುಕು ಶಬ್ದ ಕೇಳಲ್ಲ. ತೂಕಡಿಕೆ ಇರಲ್ಲ. ಟಿಕೆಟ್ ತಪಾಸಣೆಗೆ ಟಿಟಿ ಅಧಿಕಾರಿ ಬರಲ್ಲ. ಪ್ಲಾಟ್‌ಫಾರ್ಮ್ ಟಿಕೆಟ್ ಕೂಡ ತೆಗೆದುಕೊಳ್ಳಬೇಕಿಲ್ಲ. ಆದರೂ ಇದೊಂದು ಪುಟ್ಟ ರೈಲು. ಇದಕ್ಕೆ ಇರುವ ಚೆಂದದ ಹೆಸರು ಬೋಗಿ ಬೋಗಿ!

ಜಗತ್ತಿನ ಅತ್ಯಂತ ಉದ್ದನೆಯ ಪ್ಲಾಟ್‌ಫಾರ್ಮ್ ಹೊಂದಿರುವ ಹೆಗ್ಗಳಿಕೆಗೆ ಪಾತ್ರವಾಗಿರುವ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿ ರೈಲು ನಿಲ್ದಾಣದ ಆವರಣದಲ್ಲಿ ಇರುವ 'ಬೋಗಿ ಬೋಗಿ' ದೂರದಿಂದ ಆಕರ್ಷಕವಾಗಿ ಕಾಣುತ್ತದೆ. ಹತ್ತಿರ ಹೋಗಿ ಒಳಹೊಕ್ಕರೆ, ವಿಶಿಷ್ಟ ಅನುಭೂತಿ.

ಎಸಿ ಬೋಗಿಯಲ್ಲಿ ಕೂತು ಪ್ರಯಾಣಿಸುವ ಭಾವ. ಈ ಬೋಗಿಯಲ್ಲಿ ಎಲ್ಲಿ ಕೂತರೂ ಬಯಸಿದ ತಿಂಡಿ, ಊಟ, ಪಾನೀಯವನ್ನು ಪ್ರೀತಿಯಿಂದ ತಂದು ಕೊಡುತ್ತಾರೆ. ದಿನ ರಾತ್ರಿಯೆನ್ನದೇ 24 ಗಂಟೆಗಳಲ್ಲಿ ಯಾವ ಸಮಯಕ್ಕೆ ಹೋದರೂ ಸರ್ವಿಸ್ ಲಭ್ಯ. ಇದು ರೈಲು ಬೋಗಿಯಲ್ಲಿನ ಪುಟಾಣಿ ಹೋಟೆಲ್.

ಹುಬ್ಬಳ್ಳಿ 'ಬೋಗಿ ಬೋಗಿ' ರೆಸ್ಟೋರೆಂಟ್‌ನಲ್ಲಿ ಆಹಾರ ತಯಾರಿಸುತ್ತಿರುವ ಶೆಫ್ -ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

₹1.5 ಕೋಟಿಯಲ್ಲಿ ಅಭಿವೃದ್ಧಿ

ಕನ್ನಡಿಗರೇ ಆಗಿರುವ ಹುಬ್ಬಳ್ಳಿ ನಿವಾಸಿ ಉದ್ಯಮಿ ಇಸ್ರಾರ್ ಮಂಗಳೂರು ಅವರು 'ಬೋಗಿ ಬೋಗಿ' ಹೋಟೆಲ್ ಅಭಿವೃದ್ಧಿಪಡಿಸಿದ್ದಾರೆ.

'ಸುಮಾರು ₹ 1.5 ಕೋಟಿ ವೆಚ್ಚದಲ್ಲಿ ಹೋಟೆಲ್ ವಿನ್ಯಾಸಗೊಳಿಸಿದ್ದೇನೆ. ಮುಂಬೈನಲ್ಲಿ ಮೊದಲ ಬಾರಿಗೆ ಈ ರೀತಿಯ ಪ್ರಯತ್ನ ಮಾಡಿ, ಯಶಸ್ಸು ಕಂಡೆ. ಅದೇ ಪ್ರಯತ್ನ ಇಲ್ಲಿ ಮಾಡಿರುವೆ' ಎಂದು ಇಸ್ರಾರ್ ಹೇಳುತ್ತಾರೆ.

'ಜುಲೈ 15ರಿಂದ ಆನ್‌ಲೈನ್ ಆರ್ಡರ್ ಸೌಲಭ್ಯ ಆರಂಭವಾಗಲಿದ್ದು, ಅದಕ್ಕಾಗಿ ಪ್ರತ್ಯೇಕ ಆ್ಯಪ್ ಕೂಡ ಅಭಿವೃದ್ಧಿಪಡಿಸಲಾಗಿದೆ' ಎನ್ನುತ್ತಾರೆ ಅವರು.

ಆಹಾರ

ಕೆಲ ದಿನಗಳ ಹಿಂದೆಯಷ್ಟೇ ಆರಂಭವಾಗಿರುವ 'ಬೋಗಿ ಬೋಗಿ' ಹೋಟೆಲ್ ಇತರ ಉಪಾಹಾರ ಮಂದಿರಗಳಿಗಿಂತ ಭಿನ್ನ. ಅಕ್ಷರಶಃ ಚಲಿಸುತ್ತಿರುವ ಎಸಿ ಬೋಗಿಯಲ್ಲಿ ಕೂತು ಉಪಾಹಾರ ಅಥವಾ ಊಟ ಮಾಡುತ್ತಿರುವಂತೆ ಭಾಸವಾಗಿಸುವ ಈ ಪುಟ್ಟ ಕುಟೀರವು ರೈಲ್ವೆ ಇಲಾಖೆ ಕುರಿತ ಜ್ಞಾನವನ್ನು ಇನ್ನಷ್ಟು ವಿಸ್ತರಿಸುವಂತೆ ಮಾಡುತ್ತದೆ.

ಈ 'ಬೋಗಿ ಬೋಗಿ' ಏಕೈಕ ಬೋಗಿಯಲ್ಲಿ ರೂಪಿಸಿರುವ ಹೋಟೆಲ್. ನವೀಕೃತಗೊಳಿಸಿ ಆಕರ್ಷಕವಾಗಿಸಲಾಗಿರುವ ಇದರ ಎರಡೂ ಬದಿಯಲ್ಲಿ ರೈಲ್ವೆ ಇಲಾಖೆಯ ಇತಿಹಾಸ ಪರಿಚಯಿಸುವ ಚಿತ್ರ, ದಿನಾಂಕ ಜೊತೆಗೆ ಬೆರಗು ಮೂಡಿಸುವಂತಹ ಕೆಲವಷ್ಟು ಅಂಕಿಅಂಶಗಳಿವೆ.

ಬೋಗಿಯ ಒಳಾವರಣದಲ್ಲಿ ಏಕಕಾಲಕ್ಕೆ 50 ಮಂದಿ ಮತ್ತು ಹೊರಾವರಣದಲ್ಲಿ 50 ಮಂದಿ ಕೂರಬಹುದು. ಮಧ್ಯಾಹ್ನದ ಬಿಸಿಲಿನ ಸಹವಾಸವೇ ಬೇಡವೆಂದು ಕೆಲವರು ಎಸಿ ಬೋಗಿಯಲ್ಲಿ ಕೂತರೆ, ಸಂಜೆಯ ತಂಪಾದ ಗಾಳಿಯನ್ನು ಆಹ್ಲಾದಿಸಲೆಂದೇ ಇನ್ನು ಕೆಲವರು ಬೋಗಿಯ ಪಕ್ಕ ಹಾಕಲಾಗಿರುವ ಕುರ್ಚಿಗಳ ಮೇಲೆ ಕೂರುತ್ತಾರೆ. ದೇಶದ ವಿವಿಧ ರಾಜ್ಯಗಳ ತಿಂಡಿ ತಿನಿಸು ಅಲ್ಲದೇ ಅಪ್ಪಟ 'ಲೋಕಲ್' ಆಹಾರವೂ ಇಲ್ಲಿ ಸಿಗುತ್ತದೆ. ತವಾ ಪುಲಾವ್, ಚಿಕನ್ ಲಾಲಿಪಪ್, ಮಟನ್ ಖಾದ್ಯಗಳು ಬಾಯಲ್ಲಿ ನೀರೂರಿಸಿದರೆ, ವೆಜ್ ಕಡಾಯಿ, ಹರಿಯಾ ರಸೂಲಿ ಪದೇಪದೇ ಬೆರಳುಗಳನ್ನು ಚಪ್ಪರಿಸುವಂತೆ ಮಾಡುತ್ತವೆ. ಅರೇಬಿಯನ್ ಜ್ಯೂಸ್ ಕುಡಿದವರ ನಾಲಗೆಗೆ ಪರಮ ಸುಖ.

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ 'ಬೋಗಿ'ಯಲ್ಲಿ ಹೋಟೆಲ್ ಅಸ್ತಿತ್ವಕ್ಕೆ ಬಂದಿದೆ. 'ರೈಲ್ವೆ ಕೋಚ್ ರೆಸ್ಟೋರೆಂಟ್' ಮತ್ತು 'ರೆಸ್ಟೋರೆಂಟ್ ಆನ್ ವೀಲ್ಸ್' ಎಂಬ ಹೆಸರೂ ಇದಕ್ಕಿದೆ. ಆದರೆ, ಹೆಸರು ಕೊಂಚ ಉದ್ದವಾಗುವ ಕಾರಣ ಬಹುತೇಕ ಮಂದಿ ಬನ್ರಿ 'ಬೋಗಿ ಬೋಗಿ'ಗೆ ಹೋಗೋಣ ಎಂದು ಪ್ರೀತಿಯಿಂದ ಕರೆಯುತ್ತಾರೆ.

'ರೈಲು ನಿಲ್ದಾಣದಲ್ಲಿ ಹಲವು ಬಗೆಯ ಹೋಟೆಲ್‌ಗಳು ಇವೆ. ಕೆಲವರು ಆ ತುದಿಯಿಂದ ಈ ತುದಿಯವರೆಗೆ ಓಡುತ್ತ ಇಡ್ಲಿ, ವಡಾ, ಚಹಾ ಮುಂತಾದವನ್ನು ಮಾರುತ್ತಾರೆ. ಆದರೆ, ಸಾಕಷ್ಟು ಸಮಯವಿದ್ದರೆ ಮತ್ತು ಹೊಸದಾದ ಸ್ಥಳದಲ್ಲಿ ಆಹಾರ ಸವಿಯಬೇಕೆಂದು ಅನ್ನಿಸಿದರೆ, ಬೋಗಿ ಬೋಗಿಗೆ ಬರಬೇಕು. ಇಲ್ಲಿ ಕುಟುಂಬದ ಸದಸ್ಯರು ಮತ್ತು ಸ್ನೇಹಿತರ ಜೊತೆ ದೀರ್ಘ ಹೊತ್ತಿನವರೆಗೆ ಹರಟೆ ಹೊಡೆಯುತ್ತ ಆಹಾರ ಸವಿಯಬಹುದು' ಎಂದು ಪಿ.ಬಿ.ಶ್ರೀರಾಮ ಹೇಳುತ್ತಾರೆ. ಅವರು ಮೂರಕ್ಕೂ ಹೆಚ್ಚು ಬಾರಿ ಬಂದಿದ್ದು, ಇಲ್ಲಿನ ತಿಂಡಿ ಮತ್ತು ಊಟಕ್ಕೆ ಫಿದಾ ಆಗಿದ್ದಾರೆ.

ಬೋಗಿಯ ಒಂದು ಬದಿಯಲ್ಲಿ ಅಂಬಾರಿ ಹೊತ್ತ ಆನೆ, ಮೈಸೂರು ಅರಮನೆ, ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಮೇಕ್ ಇನ್ ಇಂಡಿಯಾ ಲೋಗೊ ಇದ್ದು, ಸರ್ಕಾರಿ ಯೋಜನೆ ಹಾಗೂ ಕರ್ನಾಟಕದ ಸಂಸ್ಕೃತಿ ಅನಾವರಣ ಮಾಡಲಾಗಿದೆ. ಇನ್ನೊಂದು ಬದಿಯಲ್ಲಿ ಕುಟುಂಬದವರು, ಸ್ನೇಹಿತರು, ಪ್ರೇಮಿಗಳು ಹಾಗೂ ಮಕ್ಕಳು ಬೋಗಿಯಲ್ಲಿ ಕುಳಿತು ಊಟ ಸವಿಯುತ್ತಿರುವ ಚಿತ್ರಗಳು ಆಕರ್ಷಿಸುತ್ತವೆ.

ಹಿರಿಯರು ಮತ್ತು ಕಿರಿಯರನ್ನು ಆಕರ್ಷಿಸಲೆಂದೇ ಇಲ್ಲಿ ಸೆಲ್ಫಿ ಪಾಯಿಂಟ್ ಇದೆ. ಅದರಲ್ಲಿ ಹಳೇ ಕಾಲದ ಟೆಲಿಫೋನ್ ಇದ್ದು, ಫೋಟೊಪ್ರಿಯರನ್ನು ಸೆಳೆಯುತ್ತದೆ. ಇದರ ಪಕ್ಕದಲ್ಲೇ 'ಜ್ಯೂಸ್ ಬಾಕ್ಸ್' ಇದ್ದು, ಎಲ್ಲಾ ಹಣ್ಣಿನ ಜ್ಯೂಸ್, ಮಿಲ್ಕ್‌ಶೇಕ್ ಹಾಗೂ ಐಸ್‌ಕ್ರೀಮ್ ದೊರೆಯುತ್ತವೆ. ಇದರ ಇನ್ನೊಂದು ಬದಿಯಲ್ಲಿ 'ಐ ಲವ್ ಬೋಗಿ ಬೋಗಿ' ಎಂಬ ಬರಹ ಇದೆ.

ನಿತ್ಯ ಬೆಳಿಗ್ಗೆ 7 ರಿಂದ ಸಂಜೆ 7ರವರೆಗೆ ಟೀ, ಕಾಫಿ, ಬಾದಾಮಿ ಹಾಲು, ಕಷಾಯ, ಚಿತ್ರನ್ನ, ಉಪ್ಪಿಟ್ಟು, ಶಿರಾ ಸಿಗುತ್ತದೆ. ಸಂಜೆ 5 ರಿಂದ ಮಧ್ಯರಾತ್ರಿ 3ರವರೆಗೆ 11 ರೀತಿಯ ದೋಸೆ ಸಿಗುತ್ತದೆ. ಮಸಾಲ ಬೆಣ್ಣೆ ದೋಸೆಗೆ ಬೇಡಿಕೆ ಹೆಚ್ಚು. ಆಹಾರದ ಸಮಯ ನಸುಕಿನ 5 ಗಂಟೆಯವರೆಗೆ ವಿಸ್ತರಿಸುತ್ತದೆ. ಆ ನಂತರ ಹೊಸ ದಿನದ ಮೆನು ಮತ್ತೆ ಸೇರ್ಪಡೆಯಾಗುತ್ತದೆ ಎಂದು ಶೆಫ್ ರಾಜು ನಗು ತುಳುಕಿಸುತ್ತಾರೆ. ❖

ಪ್ರತಿಕ್ರಿಯೆಗಳು

ಜೂನ್ 18ರ 'ಭಾನುವಾರದ ಪುರವಣಿ'ಯಲ್ಲಿ ಡಾ. ಎಚ್. ಎಸ್. ಅನುಪಮಾ ಅವರು ಬರೆದ 'ಭಾರತದ ಮೊದಲ ಮಹಿಳಾ ಕುಸ್ತಿಪಟು ಹಮೀದಾ ಬಾನು' ಲೇಖನವು ಒಂದು ಅಪೂರ್ವ ಅದ್ಭುತ ಸಾಧನೆಯ ಕಥೆಯಾಗಿದೆ. ಅದೇ ವೇಳೆಗೆ, ಇಡೀ ಗಂಡು ಜಾತಿಯನ್ನು ನ್ಯಾಯಾಲಯದ ಕಟೆಕಟೆಯಲ್ಲಿ ನಿಲ್ಲಿಸುವಂತಹ ದುರಂತ ಕಥೆಯಾಗಿದೆ. ಮಾನವೀಯತೆಯುಳ್ಳ ಪ್ರತಿಯೊಬ್ಬರೂ ಇಲ್ಲಿ ಅಪರಾಧಿ ಭಾವನೆಯ ಅಳುಕಿನಿಂದ ತಲೆತಗ್ಗಿಸಿ ನಿಲ್ಲಬೇಕಿದೆ. ಯಾವುದೇ ಗಂಡಿಗಿಂತ ಹೆಣ್ಣು ಬಲಿಷ್ಠಳು ಎನ್ನುವುದು ನೈಸರ್ಗಿಕ ಸತ್ಯವಾಗಿದ್ದರೂ, ಹೆಣ್ಣಿನ ಬಾಯಿ ಮುಚ್ಚಿಸಿ, ಆ ಸತ್ಯವನ್ನು ಮಣ್ಣುಮಾಡುತ್ತಲೇ ಬಂದಿರುವುದು ಪುರುಷನಿರ್ಮಿತ ದಬಾವಣೆಯ ಚರಿತ್ರೆ. ಅಂತಹ ಟೊಳ್ಳು ಚರಿತ್ರೆಯನ್ನು ಹಮೀದಾ ಅವರ ಸಾಧನೆ ಬಯಲುಮಾಡಿದೆ. ತನ್ನನ್ನು ಸೋಲಿಸಿದವನನ್ನು ಮದುವೆಯಾಗುತ್ತೇನೆ ಎಂದು ಸವಾಲು ಎಸೆದು ಅಜೇಯಳಾಗಿ ಮತ್ತು ಅವಿವಾಹಿತೆಯಾಗಿ ಉಳಿದ ಜಗತ್ತಿನ ಏಕೈಕ ಮಹಿಳೆ ಈ ಮಹಾನ್ ಪಟು ಮಾತ್ರ ಇರಬೇಕು ಅನಿಸುತ್ತದೆ. ಆದರೆ ಇಂತಹ ಬಲಾಢ್ಯ ಹೆಣ್ಣು ಸಹ ಕೊನೆಗೆ ಒಬ್ಬ ದುರ್ಬಲನಾದ ಗಂಡಿನಿಂದಲೇ ಕೈಕಾಲು ಮುರಿಸಿಕೊಂಡು ಮೂಲೆಸೇರಿ ಧಾರುಣ ಅಂತ್ಯ ಕಂಡದ್ದನ್ನು ಓದಿದಾಗ ಬಹಳ ವೇದನೆಯಾಗುತ್ತದೆ, ನಮಗೆ ಅರಿವಿಲ್ಲದೆಯೇ ಕಣ್ಣೀರು ಹರಿಯುತ್ತದೆ! ಕುಸ್ತಿಪಟುಗಳಿಗೆ-ಗಂಡು ಹೆಣ್ಣುಗಳಿಬ್ಬರಿಗೂ- ಕೊಡುವ ರಾಷ್ಟ್ರೀಯ ಪ್ರಶಸ್ತಿಯನ್ನು ಹಮೀದಾ ಬಾನು ಹೆಸರಿನಲ್ಲೇ ನೀಡುವಂತೆ ನಾವು ಸರ್ಕಾರವನ್ನು ಒತ್ತಾಯಿಸಬೇಕಿದೆ.

ಎಂ. ಗೋಪಿನಾಥ್, ನೀಲಸಂದ್ರ, ಬೆಂಗಳೂರು.

ನಾಗೇಶ ಹೆಗಡೆ ಅವರು ಬರೆದ 'ಆಕಾಶರಾಯನ ಬಾರುಕೋಲು, ಬರ-ಸಿಡಿಲು' ಬರಹವು ಲವಲವಿಕೆಯಿಂದ ಓದಿಸಿಕೊಂಡು ಹೋಗುತ್ತದೆ. ಜತೆಗೆ ಹವಾಮಾನ ಮುನ್ಸೂಚನೆಯ ವೈಜ್ಞಾನಿಕ ಅಧ್ಯಯನದ ಹಲವಾರು ವಿವರಗಳನ್ನೂ ಮಾಹಿತಿ ರೂಪದಲ್ಲಿ ಒದಗಿಸುತ್ತದೆ. ಈಗಲೂ ಎಷ್ಟೋ ರೈತರು ತಲೆ ತಲಾಂತರದಿಂದ ಬಂದ ಹವಾಮಾನ ಅಂದಾಜು ಕ್ರಮವನ್ನೇ ನೆಚ್ಚಿಕೊಂಡಿರುವುದನ್ನು ನಾನು ಕಂಡಿದ್ದೇನೆ. ಹವಾ ಬದಲಾವಣೆಯ ಈ ಕಾಲಘಟ್ಟಕ್ಕೂ ಅಂಥವರು ಪಿತ್ರಾರ್ಜಿತ ಜ್ಞಾನವನ್ನು ಅನ್ವಯಿಸುವ ಕ್ರಮ ಕೂಡ ಆಸಕ್ತಿಕರ ಎನಿಸುತ್ತದೆ.

ಎಚ್. ಶಾಂತಾ, ಮೈಸೂರು

ಮುನ್ನೋಟ 25-06-2023 ರಿಂದ -01-07-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾಹನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ. ಆಹಾರ ಪದಾರ್ಥಗಳನ್ನು ತಯಾರು ಮಾಡುವವರಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಕುಟುಂಬದ ಎಲ್ಲಾ ಸದಸ್ಯರಲ್ಲಿ ಅನ್ಯೋನ್ಯತೆ ಮೂಡಬಹುದು. ಆರ್ಥಿಕ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ. ವೃತ್ತಿಯಲ್ಲಿ ಮುಂದಿನ ಅಭಿವೃದ್ಧಿ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಸ್ವಂತ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯೋಜಿತ ಗುರಿಯನ್ನು ತಲುಪುವಲ್ಲಿ ಸಾಕಷ್ಟು ಪ್ರಯತ್ನಪಟ್ಟು ಯಶಸ್ವಿಯಾಗುವಿರಿ. ದೂರದ ಊರಿನಲ್ಲಿರುವ ಆಪ್ತರನ್ನು ಭೇಟಿಯಾಗಲು ಹೋಗುವಿರಿ. ಸಾರಿಗೆ ವ್ಯವಹಾರ ನಡೆಸುವವರಿಗೆ ಹೆಚ್ಚಿನ ಆದಾಯ ಇರುತ್ತದೆ. ಮನೆಯಲ್ಲಿ ಮಕ್ಕಳ ಓದಿನ ವಿಷಯದ ಬಗ್ಗೆ ಚಿಂತನೆ ನಡೆಯುವುದು. ಸಾಹಸ ಕಲಾವಿದರು ಆಸಕ್ತಿ ವಹಿಸಿ ಹೆಚ್ಚಿನ ಅವಕಾಶಗಳನ್ನು ಪಡೆಯುವರು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕಾರ್ಯಕ್ಷೇತ್ರದಲ್ಲಿ ಹೆಚ್ಚು ಒತ್ತಡವಿದ್ದರೂ ಅದನ್ನು ನಿಭಾಯಿಸಿ ಉತ್ತಮ ಬೆಳವಣಿಗೆಯನ್ನು ಸಾಧಿಸುವಿರಿ. ಆದಾಯವಿದ್ದರೂ ಅಷ್ಟೇ ಖರ್ಚು ಬರುವ ಸಾಧ್ಯತೆ ಇದೆ. ನಿರುದ್ಯೋಗಿಗಳು ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳುವುದು ಬಹಳ ಉತ್ತಮ. ತಂದೆಯಿಂದ ಕೃಷಿಯ ಬಗ್ಗೆ ತಿಳಿವಳಿಕೆ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಿದೇಶದಲ್ಲಿ ಓದುತ್ತಿರುವವರಿಗೆ ಉದ್ಯೋಗ ದೊರೆಯುವ ಸಂಭವವಿದೆ. ಬಂಧುಗಳ ನಡುವಿನ ಸಹಕಾರ ಕಡಿಮೆಯಾಗಬಹುದು. ಸ್ಥಿರಾಸ್ತಿಯ ವ್ಯವಹಾರ ಮಾಡುವವರಿಗೆ ಮಂದಗತಿಯ ವ್ಯವಹಾರವಿರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಮಧ್ಯಮಗತಿಯ ಫಲಿತಾಂಶವನ್ನು ಕಾಣಬಹುದು. ಕ್ರೀಡಾಪಟುಗಳಿಗೆ ಉತ್ತಮ ದರ್ಜೆಯ ತರಬೇತಿ ದೊರೆಯುವ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸಾಮಾಜಿಕ ಕ್ಷೇತ್ರದಲ್ಲಿ ಸಂಪಾದನೆ ಮಾಡುವ ಯೋಗವಿದೆ. ಅದಿರು ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ಬರುತ್ತದೆ. ಉತ್ತಮ ಯಶಸ್ಸು ಸಿಗುವ ಕಾಲ. ವಿದೇಶದಲ್ಲಿರುವ ಮಕ್ಕಳನ್ನು ನೋಡಿ ಬರಲು ಹಿರಿಯರಿಗೆ ವ್ಯವಸ್ಥೆಯಾಗುತ್ತದೆ. ಉಪನ್ಯಾಸಕರಿಗೆ ದೂರದ ಸ್ಥಳಕ್ಕೆ ಉಪನ್ಯಾಸ ಮಾಡಲು ಕರೆ ಬರುವ ಸಾಧ್ಯತೆಗಳಿವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಸ್ತ್ರಗಳ ಮೇಲೆ ಕಸೂತಿ ಕಲೆಯನ್ನು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಬಂಧುಗಳ ನಡುವೆ ಸಂಬಂಧ ಕಡಿಮೆಯಾಗಬಹುದು. ಸಂಸಾರದಲ್ಲಿ ಸುಖ ಮತ್ತು ಗೊಂದಲಗಳಿರುತ್ತವೆ. ಕೆಲವು ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಹೆಚ್ಚಿನ ಶ್ರಮ ಹಾಕಬೇಕಾದ ಅಗತ್ಯವಿರುತ್ತದೆ. ಸಾಲ ಕೊಟ್ಟವರು ಬಂದು ಪೀಡಿಸುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಧಾರ್ಮಿಕ ಕಾರ್ಯಗಳಿಂದ ಹೆಚ್ಚು ಸಂಪಾದನೆ ಮಾಡುವ ಯೋಗವಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಬಂಧುಗಳ ವಿಶ್ವಾಸವನ್ನು ಬೆಳೆಸಿಕೊಳ್ಳುವ ನಿಮ್ಮ ಪ್ರಯತ್ನಕ್ಕೆ ನೀವೇ ಮುಳುವಾಗುವಿರಿ. ಕೃಷಿಕರಿಗೆ ಹೆಚ್ಚಿನ ಸೌಕರ್ಯ ಮತ್ತು ಸೌಲಭ್ಯಗಳು ಈಗ ದೊರೆಯುತ್ತವೆ. ಮಕ್ಕಳ ನಡತೆಯು ಬೇಸರ ತರುವ ರೀತಿ ಇರುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಹೆಚ್ಚು ಹಣ ಗಳಿಸಬೇಕೆಂಬ ಆಸೆ ನಿಮ್ಮಲ್ಲಿ ಇರುತ್ತದೆ. ನಿಮಗೆ ತೊಂದರೆ ಕೊಡುತ್ತಿದ್ದ ಕೆಲ ಬಂಧುಗಳು ನಿಮ್ಮ ಸಹವಾಸಕ್ಕೆ ಬರುವುದಿಲ್ಲ. ಕೃಷಿಯನ್ನು ಮುಖ್ಯ ಉದ್ಯೋಗವಾಗಿ ಮಾಡುತ್ತಿರುವವರಿಗೆ ಈಗ ಅಭಿವೃದ್ಧಿ ಇರುತ್ತದೆ. ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಏಳಿಗೆ ಇರುತ್ತದೆ. ಕ್ಷೀರೋತನ್ನಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಿಸುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಹಣ ಹೂಡಿಕೆ ವಿಚಾರದಲ್ಲಿ ನಿಮ್ಮ ಅನಿಸಿಕೆ ಸರಿಯಾಗಿರುತ್ತದೆ. ಕಲಾವಿದರುಗಳಿಗೆ ಮುಂಬರುವ ಸ್ಪರ್ಧೆಗಳಿಗೆ ತಯಾರಿ ಮಾಡುವ ಕಾಲವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಅನಿರೀಕ್ಷಿತ ಯಶಸ್ಸುಗಳು ಒದಗಬಹುದು. ಲೇವಾದೇವಿ ವ್ಯವಹಾರ ಮಾಡಿದವರಿಗೆ ಕೈ ಕಚ್ಚಬಹುದು. ಶತ್ರುಗಳನ್ನು ಮಟ್ಟ ಹಾಕಲು ನೀವು ಬಳಸುವ ತಂತ್ರಗಳು ಪರಿಣಾಮಕಾರಿಯಾಗಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಾಕ್ಚಾತುರ್ಯದಿಂದ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಜ್ಞಾನಿಗಳ ಜೊತೆ ಚರ್ಚೆ ಮಾಡಿ ಬುದ್ಧಿಮತ್ತೆ ಹೆಚ್ಚಿಸಿಕೊಳ್ಳುವಿರಿ. ಖರ್ಚು ಕಡಿಮೆ ಮಾಡಿ ಇದ್ದ ಹಣದಲ್ಲಿ ಸಂತೋಷ ಪಡುವಿರಿ. ನೀವು ಮಾಡುವ ಧಾರ್ಮಿಕ ಕೆಲಸಗಳಿಗೆ ಹಣದ ಕೊರತೆ ಇರುವುದಿಲ್ಲ. ಕೆಲಸ ಕಾರ್ಯಗಳಲ್ಲಿ ಇದ್ದ ಆತಂಕಗಳು ದೂರವಾಗುತ್ತದೆ. ಗಣಿತಜ್ಞರಿಗೆ ಹೆಚ್ಚು ಬೇಡಿಕೆ ಬರುವ ಸಂಭವವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಣದ ಒಳಹರಿವು ಮಧ್ಯಮಗತಿಯಲ್ಲಿ ಇರುವುದರಿಂದ ಹಣ ಕ್ರೋಢೀಕರಿಸಲು ಹೊಸಮಾರ್ಗಗಳನ್ನು ಹುಡುಕುವಿರಿ. ಹಣ್ಣು,ತರಕಾರಿ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ ಆಗುತ್ತದೆ. ಆಭರಣ ಖರೀದಿ ಅಥವಾ ಆಸ್ತಿ ಮಾಡುವ ಯೋಗ ಕೆಲವರಿಗೆ ಒದಗಿ ಬರುತ್ತದೆ. ಭೂಮಿಯನ್ನು ಮಾರಾಟ ಮಾಡುವವರಿಗೆ ವ್ಯವಹಾರ ಮತ್ತು ಲಾಭ ಹೆಚ್ಚಾಗುವ ಸಂದರ್ಭವಿದೆ. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಉನ್ನತ ಹುದ್ದೆಯಲ್ಲಿರುವವರಿಗೆ ಮನಸ್ಸಿಗೆ ಖುಷಿಯಿದ್ದರೂ ಹಿತಶತ್ರುಗಳ ಕಾಟವಿರುತ್ತದೆ. ಕ್ರೀಡಾಪಟುಗಳಿಗೆ ತಮ್ಮ ಪ್ರತಿಭೆಯನ್ನು ತೋರಿಸುವ ಕಾಲ ಒದಗುತ್ತದೆ. ಹಣಕಾಸಿನ ವಿಚಾರದಲ್ಲಿ ಎಚ್ಚರದಿಂದಿರಿ, ಅತಿಯಾದ ಬಂಡವಾಳ ಹೂಡಿಕೆ ಬೇಡ. ಮನೆ ರಿಪೇರಿ ಮಾಡುವ ಕೆಲಸದವರಿಗೆ ಹೆಚ್ಚು ಕೆಲಸಗಳು ದೊರೆಯುತ್ತವೆ. ಕೊಂಕುನುಡಿಯ ಸ್ವಭಾವದಿಂದ ಸಹೋದ್ಯೋಗಿಗಳಲ್ಲಿ ನಿಷ್ಠುರ ಕಟ್ಟಿಕೊಳ್ಳಬಹುದು.

ಪದಬಂಧ 2795



ಮೇಲಿನಿಂದ ಕೆಳಕ್ಕೆ
1. ಅಂಗ ಊನವಾದರೂ ವಿಶೇಷವಾಗಿ ಸಮರ್ಥ 3
2. ಅಡ್ಡವಾಗಿ ಕಟ್ಟದ ಹೆಣಿಕೆ 3
3. ಬಿತ್ತನೆಗೆ ಮುನ್ನ ನೇಗಿಲ ಅಗೆತ 3
5. ಸಂಸ್ಕೃತದ ಬಸವ, ಸಪ್ತಸ್ವರಗಳಲ್ಲಿ ಎರಡನೆಯದ್ದು 3
7. ಸುಮಿತ್ರಾನಂದನ ರಾಮಾನುಜ 3
9. ಕೂತು ತಿನ್ನುವವನಿಗೆ ಸಾಲದಾಗುವ ಹುಂಡಿಯ ದುಡ್ಡು 5
10. ಶಿಷ್ಟರನ್ನಲ್ಲದೆ ದುರುಳರನ್ನೂ ಕಾಪಾಡುವವ 5
11. ಯೋಗಾಭ್ಯಾಸದಲ್ಲಿ ಹಾಕುವ ಮಣೆ 3
12. ಮೂರು ಕಡೆ ನೀರು ಕುಡಿದ ಉತ್ತರದ ವೇದ ಬ್ರಾಹ್ಮಣ 3
16. ಕಾವ್ಯವಾಚನದಲ್ಲಿ ಸ್ವರ ವಿನ್ಯಾಸ 3
17. ಶಮನಗೊಳಿಸಿ ತಣ್ಣಗಾಗಿಸು 3
19. ದುಡ್ಡಿನಿಂದ ಹಚ್ಚಿದ ದೀಪ 3
20. ಕಾವ್ಯ ಬ್ರಹ್ಮನ ಪದಗಳ ಮೋಡಿಯಲ್ಲಿರುವ ಕಲ್ಪನಾ ಸಾಲು 3
21. ಮೇಲುಕೀಳೆಂಬುದಿಲ್ಲದೆ ಮರ್ಯಾದೆಯಿಂದ ಕೂಡಿದ್ದು 3

ಎಡದಿಂದ ಬಲಕ್ಕೆ
1. ಪ್ರಪಂಚದಲ್ಲೇ ಹೆಸರುವಾಸಿಯಾದದ್ದು 5
3. ಜಗತ್ತಿನ ಏಳಿಗೆ ಮಾಡುವವನಲ್ಲಿ ಖುಷಿ ಅಡಗಿದ್ದಾನೆ 4
4. ಇಂಗ್ಲಿಷ್ ಪದಕೋಶ; ನಿಘಂಟು 4
6. ಉತ್ಸಾಹದ ಜೊತೆ ಚಟುವಟಿಕೆಯ ಗೆಲುವು 5
8. ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುವಿಕೆ 3
10. ಸಿಗುವುದೇ ಕಷ್ಟವೆಂದೆನಿಸಿದ್ದು ಸಿಕ್ಕಿದೆ 3
11. ಕನ್ನಡದಲ್ಲಿ ಮಾಡುವ ಆಜ್ಞೆ 3
13. ಹೆಂಗಸರಿಗೆ ಮುಗಿಯದ ಗೃಹ ಕಾರ್ಯ 5
14. ವಿಕಾಸವಾದದಲ್ಲಿ ಮಾನವನ ಮಂಗನ ಆಕೃತಿ 5
15. ಸುಸಂಸ್ಕೃತರ ನಗರ 3
17. ಕಷ್ಟ ಕಾರ್ಪಣ್ಯ ಭಯ ಭೀತಿಗಳಿಂದ ಉಂಟಾಗುವ ನಡುಕ 3
18. ಕಹಿಯಾಗಿ ಉಳಿಯುವ ಆಂತರಿಕ ಜಗಳ 3
20. ಕಾಗಿನೆಲೆ ಆದಿಕೇಶವ ಭಕ್ತ ಶ್ರೇಷ್ಠ 5
22. ಕಷ್ಟವೇ ಇಲ್ಲದೆ ಬದುಕು ನಡೆಸುತ್ತಿರುವವ 4
23. ಮನುಷ್ಯರಲ್ಲಿ ದಯೆ ಧರ್ಮ ಗುಣಗಳಿವೆಯೆಂಬ ನಂಬಿಕೆ 4
24. ಬಂದದ್ದೆಲ್ಲವನ್ನು ಸ್ವೀಕರಿಸುವ ಮುಕ್ತ ಅಂತರಾಳ 5

ಪದಬಂಧ ಉತ್ತರ -2794

ಮೇಲಿಂದ ಕೆಳಕ್ಕೆ

1. ಉಗಮ 2.ಣವರಾ 3.ವಿಚಾರಿಸು 4.ಕವಿಗೀತ 6.ಸುಗಮಸಂಗೀತ 7.ಸಗರ 11.ಪ್ರಮಾಣವಚನ 14.ಜವಾನ 16.ಕಲಾಪ 18.ಕತ್ತೆಬಾಲ 19.ನಮಸ್ಕಾರ 22.ಸ್ತಾವರ 24.ಮಿಥುನ

ಎಡದಿಂದ ಬಲಕ್ಕೆ

1. ಉಚಿತಪ್ರಯಾಣ 3.ವಿಧೇಯಕ 5.ಮನಸು 7.ಸರಾಸರಿ 9.ಗದಗ 10.ಸುಪ್ರಭಾತ 12.ಕರಮ 13.ರಜನಿ 15.ಜನಕ 17.ವರುಣ 18.ಕಳ್ಳತನ 20.ಲಾವಂಚ 21.ಮನಸ್ತಾಪ 23.ನವಮಿ 25.ಲಕ್ಷ್ಮೀಪುರ 26.ರಕ್ತಸಿಂಹಾಸನ

ಮೌನವೇ ಮಾತಾಡುವ ‘ಕಲಾ ಸ್ತಬ್ಧತೆ’

ಡಾ. ಕೆ.ಎಸ್. ಪವಿತ್ರ

ನೃತ್ಯ-ಸಂಗೀತಗಳನ್ನು ನೋಡುವಾಗ-ಕೇಳುವಾಗ ತೇಜಸ್ವಿಯವರ ‘ಅಣ್ಣನ ನೆನಪು’ ಪುಸ್ತಕದ ಒಂದು ಬರೆಹ ನೆನಪಾಗುತ್ತದೆ. ತೇಜಸ್ವಿ ಮತ್ತು ಕಡಿದಾಳು ಶಾಮಣ್ಣ ಹಿಂದೂಸ್ತಾನಿ ಸಂಗೀತದ ಜೋರು ಕಲಿಕೆ ನಡೆಸಿದ್ದಾಗ ಕುವೆಂಪು ಅವರು ಹೇಳಿದ ಒಂದು ಮಾತು–‘ನಿಶ್ಶಬ್ದಕ್ಕಿಂತ ಅತ್ಯುತ್ತಮ ಸಂಗೀತವೇ ಇಲ್ಲ ಎಂದು ನನಗನ್ನಿಸಿದೆ’. ನೃತ್ಯ-ಸಂಗೀತ-ನಾಟಕಗಳನ್ನು ನೋಡುವಾಗ-ಕೇಳುವಾಗ-ಸ್ವತಃ ನೃತ್ಯ ಮಾಡುವಾಗ ಕಲೆಯಲ್ಲಿ ‘ಸ್ತಬ್ಧತೆ’ಯ ಬಗ್ಗೆ ಮನಸ್ಸು ಮತ್ತೆ ಮತ್ತೆ ಯೋಚಿಸುತ್ತದೆ.

ನಾವೆಲ್ಲರೂ ಮಾತನಾಡುವ ಬಗ್ಗೆ ಗಮನ ವಹಿಸಿದಷ್ಟು ‘ಮೌನದ ಮಾತಿನ’ ಸಾಮರ್ಥ್ಯದ ಬಗ್ಗೆ ಲಕ್ಷ್ಯ ಬೀರುವುದು ಕಡಿಮೆಯೇ. ಮನೋವೈದ್ಯಕೀಯ ತರಬೇತಿಯಲ್ಲಿ ಮನೋವೈದ್ಯ ಎದುರಿನಲ್ಲಿ ಕುಳಿತು ನೋವನ್ನು ಹೇಳಿಕೊಳ್ಳುತ್ತಿರುವ ವ್ಯಕ್ತಿ ಮಾತಿನ ಮೂಲಕ ಹೇಳುವ ಭಾವನೆಗಳಂತೆಯೇ, ಮಾತನಾಡದೇ ಮೌನವಾಗಿ ಸಂವಹಿಸಬಹುದಾದ ಭಾವನೆಗಳನ್ನೂ ಗಮನಿಸಬೇಕಾದ ಬಗ್ಗೆ ಒತ್ತಿ ಹೇಳಲಾಗುತ್ತದೆ. ಅಂದರೆ ನೋವಿನಲ್ಲಿರುವ ವ್ಯಕ್ತಿ ಅಳುತ್ತಾರೆ ಎಂದರೆ, ಬೇರೇನೂ ಮಾತನಾಡದೆ, ಮೌನವಾಗಿದ್ದು, ‘ನಾವು ಕೇಳಲು ಸಿದ್ಧ/ಕೇಳುತ್ತಿದ್ದೇವೆ’ ಎಂದು ಸಂವಹಿಸುವುದೂ ಒಂದು ಪರಿಣಾಮಕಾರಿ ತಂತ್ರ ಎನ್ನುತ್ತದೆ ಮನೋವಿಜ್ಞಾನ. ಸಾಹಿತ್ಯದಲ್ಲಿಯೂ ಪದಗಳು ಧ್ವನಿಸಬಹುದಾದ ಅರ್ಥಗಳು-ಭಾವನೆಗಳು ಓದುಗರ ಮನಸ್ಸಿನಲ್ಲಿ ಭಾವತರಂಗಗಳನ್ನು ಎಬ್ಬಿಸಬಲ್ಲವು. ಹಾಗಾಗಿಯೇ ‘Reading between the lines’ ಎಂಬ ಗ್ರಹಿಕೆ ಕುರಿತ ಅಭಿಪ್ರಾಯವೊಂದಿದೆ.

ನೃತ್ಯದಲ್ಲಿ ಮಾತೇ ಇಲ್ಲ. ನರ್ತಕಿಯ ಮಾತೆಲ್ಲವೂ ಮುದ್ರೆಗಳ, ಅಂಗ ಚಲನೆಗಳ ಮೂಲಕವೇ. ಹೆಚ್ಚೆಂದರೆ ಹಿನ್ನೆಲೆಯ ಹಾಡಿನಲ್ಲಿ ಬರುವ ಸಾಹಿತ್ಯದ ಮಾತುಗಳು. ಹೀಗಿರುವಾಗ ಮೌನ-ನಿಶ್ಶಬ್ದ ಎನ್ನುವುದು ನೃತ್ಯದಲ್ಲಿ ಚಲನೆಯ ‘ಸ್ತಬ್ಧತೆ’ಗೆ ವರ್ಗಾವಣೆಗೊಂಡಿರುತ್ತದೆ. ಪ್ರಸಿದ್ಧ ನರ್ತಕಿಯಾದ ಯಾಮಿನೀ ಕೃಷ್ಣಮೂರ್ತಿಯವರ ಶಿಷ್ಯೆ, ಖ್ಯಾತ ನರ್ತಕಿಯೇ ಆದ ರಮಾ ವೈದ್ಯನಾಥನ್ ತಮ್ಮ ಗುರುವಿನ ನರ್ತನವನ್ನು ನೆನೆಸಿಕೊಳ್ಳುತ್ತಾ ಹೀಗೆ ಹೇಳುತ್ತಾರೆ- ‘‘ಯಾಮಿನಿ ಅಮ್ಮ ವೇದಿಕೆಯ ತುಂಬಾ ಓಡಾಡುವ ತನ್ನ ಚಲನೆಗಳಿಂದ ನೃತ್ಯ ಲೋಕದ ‘ಫೈರ್ ಬ್ರ್ಯಾಂಡ್’ ಎಂದೇ ಹೆಸರಾದವರು. ಆದರೆ ಅವರ ನರ್ತನದಲ್ಲಿ ‘ಸ್ತಬ್ಧತೆ’ಯನ್ನು ಪ್ರಭಾವಶಾಲಿಯಾಗಿ ಉಪಯೋಗಿಸುತ್ತಿದ್ದರು. ವೇಗವಾದ-ರಭಸವಾದ ಚಲನೆಗಳ ನಂತರ ಅವರು ಆ ಚಲನೆಯನ್ನು ಮುಕ್ತಾಯ ಮಾಡುತ್ತಿದ್ದುದು ಶಿಲ್ಪದಂತೆ ನಿಲ್ಲುತ್ತಿದ್ದ ಭಂಗಿಯಲ್ಲಿ. ಆಗ ಅವರು ಉಸಿರಾಡುತ್ತ ಇಲ್ಲವೇನೋ ಎಂಬಷ್ಟು ಸ್ತಬ್ಧ. ಹಾಗೆ ನಿಂತಾಗ ಅದಕ್ಕೆ ಮುನ್ನ ಅವರು ಮಾಡಿದ ಚಲನೆಗಳು ನಮ್ಮ ಮನದಲ್ಲಿ ರಿಂಗಣಿಸುತ್ತಿದ್ದವು. ಅದೊಂದು ‘ಮ್ಯಾಜಿಕಲ್’ ಕ್ಷಣ. ‘ಸ್ತಬ್ಧತೆ’ ಮತ್ತೆ ಚಲನೆಯಾದಾಗ, ನಮ್ಮ ಮನದಲ್ಲಿ ಉಳಿಯುತ್ತಿದ್ದುದು ಚಲನೆಯಲ್ಲ, ಆ ‘ಗಾಢ ಮೌನ’.

1930ರಲ್ಲಿ ಮಾರ್ಥಾಗ್ರಹಾಂ ಇನ್ನೂ ಯುವ ನರ್ತಕಿ. ಲಿಯೋನೈಡ್ ಮೆಸ್ಸೀನ್ ಎಂಬ ಖ್ಯಾತ ಬ್ಯಾಲೆ ನೃತ್ಯ ಸಂಯೋಜಕ ಮಾರ್ಥಾಳನ್ನು ‘Chosen Maiden’ ಎಂಬ ಪಾತ್ರ ವಹಿಸಲು ಆಹ್ವಾನಿಸಿದ. ಈ ಪಾತ್ರ ವಹಿಸುವಾಗ ತನಗೆ ಸಿಕ್ಕ ಪಾಠವನ್ನು ಮಾರ್ಥಾ ತತ್‌ಕ್ಷಣ ತನ್ನ ಸಹಕಲಾವಿದರಿಗೆ ಕಲಿಸಿದ ಬಗೆ ಹೀಗೆ: ‘ಜಗತ್ತಿನ ಅತಿ ಕಷ್ಟದ ಪಾಠವನ್ನು ನಾನಿಂದು ಕಲಿತಿದ್ದೇನೆ. ಮೌನವಾಗಿ, ಚಲಿಸದೇ ನಿಲ್ಲುವುದನ್ನು ನಾನು ಕಲಿತೆ. ಈಗ ನಿಮಗೆ ಅದನ್ನು ಕಲಿಸುವೆ’.

ಚಲನೆಯ ಮೌನವನ್ನು ನಿಷ್ಕ್ರಿಯತೆ ಎಂದು ನಾವಂದುಕೊಂಡರೆ ಅದು ತಪ್ಪೇ. ಸ್ತಬ್ಧತೆ ಒಂದು ದೃಷ್ಟಿಕೋನ, ವಿರೋಧ, ನಿರ್ಣಯ, ಅವಲೋಕನ ಯಾವುದನ್ನೂ ಸೂಚಿಸಬಹುದು. ಸಂಗಾತಿಯೊಂದಿಗೆ ನರ್ತಿಸುವ ಸಾಮಾಜಿಕ ನೃತ್ಯದಲ್ಲಿ (Social dancing) ಮೌನ ಒಂದು ಆಟವಾಗಿರಲು ಸಾಧ್ಯವಿದೆ! ಸಂಗೀತಕ್ಕೆ ಸ್ಪಂದಿಸುವುದು, ಸಂಗಾತಿಯನ್ನು ಪರೀಕ್ಷಿಸುವುದು- ಆತ/ ಆಕೆಯೊಡನೆ ಮೌನದ ಮೂಲಕವೇ ಸಂಭಾಷಿಸುವುದು ಸ್ತಬ್ಧತೆಯಲ್ಲಿ ಸುಲಭವೆನಿಸಬಹುದು.

ನೃತ್ಯದ ಚಲನೆಗಳನ್ನು ಅಂದರೆ ದೇಹವನ್ನು ಚಲಿಸುವ ಭಾವ-ಸಂಚಾರಿ ಅಂದರೆ ಒಂದೆಡೆ ನಿಲ್ಲದೆ ಓಡಾಡುವ ಭಾವಗಳಾಗಿಯೂ, ನಿಲ್ಲುವ ಕ್ಷಣದ ಮನಸ್ಸನ್ನು ‘ಸ್ಥಾಯಿ’- ತಟಸ್ಥ ಭಾವವಾಗಿಯೂ ಪರಿಕಲ್ಪಿಸಬಹುದು. ಮರ್ಕಟದಂತೆ ಚಲಿಸುವ ಮನಸ್ಸು, ಇಲ್ಲಿ, ದೇಹದ ಚಲನೆಗಳ ನಡುವೆಯೂ ಕೇಂದ್ರೀಕೃತವಾಗಬೇಕು. ಅಂದರೆ ಸ್ತಬ್ಧತೆಯ-ಮೌನದ ಅನುಭವ ಕೇವಲ ಪ್ರೇಕ್ಷಕನಿಗಲ್ಲ, ನರ್ತಿಸುವ ಕಲಾವಿದೆ ಅದನ್ನು ತಾನು ಅನುಭವಿಸಿ, ಪ್ರೇಕ್ಷಕನಿಗೆ ಆ ಉನ್ನತ ಕ್ಷಣವನ್ನು ದಾಟಿಸಬೇಕು. ಕಾಲ-ದೇಶಗಳ ಪರಿವೆ ಇಲ್ಲದಂತೆ ಅಥವಾ ಅನಂತವಾಗುವಂತೆ ಮಾಡಬೇಕು. ಚಲಿಸುವ ದೇಹ-ಏಕೀಕೃತವಾಗಿ ಘನೀಕರಿಸಿದ ಮನ ಇವುಗಳ ವೈರುಧ್ಯವನ್ನು ಒಟ್ಟಿಗೆ ನೃತ್ಯ ತರುವುದೇ ಒಂದು ಬೆರಗು.

ಧ್ವನಿಯೇ ಅಭಿವ್ಯಕ್ತಿಯಾದ ಸಂಗೀತದಲ್ಲಿ ಮೌನ ಸಶಕ್ತವಾಗಿ ನಿಲ್ಲುವುದೂ ಅಚ್ಚರಿಯ ಮಾತೇ. ತಾಳದ ಲಯದಲ್ಲಿ ಆಗಾಗ್ಗೆ ನೀಡುವ ‘ಸ್ತಬ್ಧತೆ’ಯ ತುಣುಕುಗಳು ಸೌಂದರ್ಯದ ಮತ್ತೊಂದು ರೂಪವೇ. ಹೀಗೆ ಬರುವ ನಿಲುಗಡೆಗಳು ಕಲಾವಿದನ ಪರಿಣತಿಯ ಕುರುಹೂ ಆಗಿರುತ್ತವೆ. ಪರಿಪೂರ್ಣವಾಗಿ ಶ್ರುತಿಯಾದ ತಂಬೂರದ ನಾಲ್ಕೂ ತಂತಿಗಳೂ ಒಂದಾಗಿ, ಹೊರಹೊಮ್ಮುವ ಗಾಂಧಾರ ಸ್ತಬ್ಧತೆಯ ಚೆಲುವನ್ನು ಗಂಭೀರವಾಗಿ ಪ್ರತಿಧ್ವನಿಸುತ್ತದೆ.

ಮೆಟ್ರೋಪಾಲಿಟನ್ ಕಲಾ ಸಂಗ್ರಹಾಲಯದಲ್ಲಿ ಜಪಾನ್‌ನ 2,000 ವರ್ಷಗಳಷ್ಟು ಹಳೆಯದಾದ ಘಂಟೆ ಸೃಷ್ಟಿಯಾದದ್ದು ಮೌನವಾಗಿರಲು! ಇಂಥ ‘ಡೊಟಕು’ (ಜಪಾನಿ ಭಾಷೆಯಲ್ಲಿ ಹೀಗಂತಾರೆ) ಘಂಟೆಗಳು ಇತಿಹಾಸ ತಜ್ಞರನ್ನು ಗೊಂದಲಕ್ಕೀಡು ಮಾಡಿವೆ. ಶಬ್ದದ ನಿರೀಕ್ಷೆ ಇಲ್ಲಿ ಮೌನವಾಗಿ ಬದಲಾಗಿದೆ. ಇದು ಘಂಟೆ ಮಾಡುವ ಗಲಾಟೆಗೆ ಮೌನದ ಅಗತ್ಯವನ್ನು ಸೂಚಿಸಬಹುದೇನೋ. ಜಾನ್ ಕೇಜ್ ಎಂಬಾತನ 1952ರ ವಿವಾದಾಸ್ಪದ ಸಂಗೀತ ಸಂಯೋಜನೆ ಯಾವುದು ಗೊತ್ತೆ? ‘ನಾಲ್ಕು ನಿಮಿಷಗಳ ಮೌನ’! ಎಷ್ಟೇ ವಿವಾದಕ್ಕೆ ಒಳಗಾದರೂ, ಅದು ಸಂಗೀತ-ನೃತ್ಯಗಳ ಕಲಾವಿದರ ಗಮನವನ್ನು ‘ಸ್ತಬ್ಧತೆ-ಮೌನ’ಗಳ ಕಡೆ ಕಿಂಚಿತ್ತಾದರೂ ಸೆಳೆದಿದ್ದು ಸತ್ಯ. ಜಪಾನೀ ಸಂಗೀತದಲ್ಲಿ ‘ಮಾ’ ಎಂಬ ಪದ ಶಬ್ದಗಳ ನಡುವಿನ ಅವಕಾಶವನ್ನು ಸೂಚಿಸಿ, ಕಲಾವಿದ ಅದರ ಪರಿಣತಿ ಸಾಧಿಸಬೇಕೆನ್ನಲಾಗುತ್ತದೆ. ಹಾಗೆಯೇ ಮೈಲ್ಸ್ ಡೇವಿಸ್ ಎಂಬಾತ ಹೇಳಿದ ಮಾತು ‘Its not the notes you play; its the notes you don't play’ (ನೀವು ನುಡಿಸಿದ ಸ್ವರಗಳಲ್ಲ, ನೀವು ನುಡಿಸದ ಸ್ವರಗಳು ಮಹತ್ವದ್ದು).

ಮಾನವರಾಗಿ ನಾವು ಸಂಭಾಷಣೆಗಳಲ್ಲಿ ಸುಮ್ಮನಿರುವುದನ್ನು ‘ಅರ್ಥಗರ್ಭಿತ ಮೌನ’ವಾಗಿ, ಮಾತು ಹೊರಡದ ಆಘಾತವಾಗಿ, ನಿರೀಕ್ಷಿತ ಮೌನವಾಗಿ, ಸುಲಭವಾಗಿ ವಿಶ್ಲೇಷಿಸಬಲ್ಲೆವು. ಗಲಾಟೆ ತುಂಬಿದ, ಕ್ಷಣಚಿತ್ತ ಕ್ಷಣಪಿತ್ತವಾದ ನಮ್ಮ ಆಧುನಿಕ ಜಗತ್ತಿನಲ್ಲಿಯೂ ಕಲಾವಲಯ ಮೌನ-ಸ್ತಬ್ಧತೆಗಳ ಮಹತ್ವವನ್ನು ಮನದಟ್ಟು ಮಾಡಿಸಿ, ಮನಸ್ಸುಗಳನ್ನು ಹಿಡಿದಿಡುವ ತುರ್ತನ್ನು ಈ ಹೊತ್ತಿನಲ್ಲಿ ಅರಿಯಲೇಬೇಕು. ಮಾರ್ಥಾಗ್ರಹಾಂ ಹೇಳಿದ integrity in silence- ನಿಶ್ಶಬ್ದದಲ್ಲಿ ಸಮಗ್ರತೆಯನ್ನು ನಾವು ಸಾಧಿಸುವತ್ತ ಮುನ್ನಡೆಯಬೇಕು.

ಶೈಲಿ ಪುಸ್ತಕದ ಕೊರತೆ ತುಂಬುವ ದೀಪಿಕೆ

ಪ್ರೊ.ಎಚ್.ಎಸ್.ಈಶ್ವರ

ವಿಮರ್ಶೆ



ಪು: 314 ₹300

ಮಾಧ್ಯಮ ಭಾಷಾ ದೀಪಿಕೆ
ಲೇ: ಪದ್ಮರಾಜ ದಂಡಾವತಿ
ಪ್ರ: ವಿಕಾಸ ಪ್ರಕಾಶನ
ಸಂ: 9900095204

ವಿಶ್ವದ ಪ್ರಮುಖ ದಿನಪತ್ರಿಕೆಗಳು ಮತ್ತು ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ತಮ್ಮವೇ ಶೈಲಿಯ ಕೈಪಿಡಿಗಳನ್ನು ರೂಪಿಸಿಕೊಂಡು ಅವುಗಳ ಅನ್ವಯವೇ ತಮ್ಮ ಪ್ರಕಟಣೆಗಳನ್ನು ಮಾಡುವುದು ಸಾಮಾನ್ಯ. ಇದಕ್ಕಾಗಿ ‘ದಿ ನ್ಯೂಯಾರ್ಕ್ ಟೈಮ್ಸ್’, ‘ದಿ ಅಸೋಸಿಯೇಟೆಡ್ ಪ್ರೆಸ್’, ಶಿಕಾಗೋ ವಿಶ್ವವಿದ್ಯಾಲಯದ ಶೈಲಿ ಪುಸ್ತಕಗಳನ್ನು ಇಲ್ಲಿ ಹೆಸರಿಸಬಹುದು. ವಿಜ್ಞಾನ ಸಂಶೋಧನೆಗಳಿಗೆ ಸಂಬಂಧಪಟ್ಟ ನಿಯತಕಾಲಿಕೆಗಳು ಸಹ ಆ ಬಗೆಯ ಕೈಪಿಡಿಗಳನ್ನು ಹೊಂದಿರುತ್ತವೆ. ಅದಕ್ಕೆ ಒಂದು ಉತ್ತಮ ನಿದರ್ಶನ ಅಮೆರಿಕಾದ ಮನಶ್ಶಾಸ್ತ್ರ ವಿಜ್ಞಾನಿಗಳ ಸಂಘ ತನ್ನ ಪ್ರಕಟಣೆಗಳಿಗಾಗಿ ಸಿದ್ಧಪಡಿಸಿರುವ ‘ಎಪಿಎ ಪಬ್ಲಿಕೇಷನ್ ಮ್ಯಾನುಯಲ್.’

ಕನ್ನಡ ಭಾಷೆಗೆ ಸಂಬಂಧಪಟ್ಟ ಹಾಗೆ ಈ ಬಗೆಯ ಅಧಿಕೃತ ಶೈಲಿ ಪುಸ್ತಕಗಳು ಅಪರೂಪ. ಕನ್ನಡ ಪತ್ರಿಕೋದ್ಯಮದ ಬರವಣಿಗೆಯ ಮಟ್ಟ ಅಥವಾ ಭಾಷಾ ಬಳಕೆಯ ಮಟ್ಟ ಕುಸಿಯುತ್ತಿದೆ ಎನ್ನುವ ಹಲವರ ಕಳಕಳಿಯ ನಡುವೆ ಅದನ್ನು ನಿವಾರಿಸಲು ಅಗತ್ಯವಾದ ಕಲಿಕೆಯ ಸಾಧನಗಳ ಕೊರತೆಯೂ ಉಳಿದುಕೊಂಡಿದೆ. ಈ ಲೋಪವನ್ನು ತುಂಬುವಲ್ಲಿ ಈಗ ಪ್ರಕಟವಾಗಿರುವ ಪದ್ಮರಾಜ ದಂಡಾವತಿಯವರ ‘ಮಾಧ್ಯಮ ಭಾಷಾ ದೀಪಿಕೆ’ ಒಂದು ಆರಂಭಿಕ ದೈತ್ಯ ಹೆಜ್ಜೆ. ಮೇಲೆ ಪ್ರಸ್ತಾಪಿಸಿರುವ ಮಾಮೂಲಿ ಶೈಲಿ ಪುಸ್ತಕಗಳಿಗೂ ದಂಡಾವತಿಯವರ ದೀಪಿಕೆಗೂ ಒಂದು ಪ್ರಮುಖ ವ್ಯತ್ಯಾಸ ಇದೆ. ಸಾಮಾನ್ಯ ಶೈಲಿ ಪುಸ್ತಕಗಳು ಹಸ್ತಪ್ರತಿ ತಯಾರಿಕೆಯಲ್ಲಿ ಅನುಸರಿಸಬೇಕಾದ ರೀತಿನೀತಿಗಳನ್ನು ಪ್ರಮುಖವಾಗಿ ನಿರ್ದೇಶಿಸಿದರೆ, ದಂಡಾವತಿಯವರ ದೀಪಿಕೆ ಇತರೆ ಸಂಗತಿಗಳನ್ನೂ ತಿಳಿ ಹೇಳುತ್ತಲೇ, ತಪ್ಪಿಲ್ಲದ ಶುದ್ಧ ಕನ್ನಡ ಬರವಣಿಗೆಗೆ ಹೆಚ್ಚಿನ ಒತ್ತು ಕೊಡುತ್ತದೆ.

‘ದೀಪಿಕೆ’ ಓದಿದ ನಂತರದಲ್ಲಿ ನನಗೆ ಅನ್ನಿಸಿದ್ದು, ಇದು ಓದಿ ಮುಗಿಯಿತು ಎಂದು ಒಂದು ಕಡೆ ಎತ್ತಿಡುವ ಪುಸ್ತಕ ಅಲ್ಲ. ಇದು ಮತ್ತೆ ಮತ್ತೆ ಪರಿಶೀಲನೆ ಮಾಡುತ್ತಲೇ ಇರಬೇಕಾದ ಆವಶ್ಯಕ ಪರಾಮರ್ಶನ ಗ್ರಂಥ. ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲರೂ, ವಿಶೇಷವಾಗಿ ಮಾಧ್ಯಮ ವಿದ್ಯಾರ್ಥಿಗಳು, ಪತ್ರಕರ್ತರು, ಹವ್ಯಾಸಿ ಬರೆಹಗಾರರು ಇದನ್ನು ಸದಾ ತಮ್ಮ ಒಡನಾಡಿಯಾಗಿ ಇಟ್ಟುಕೊಳ್ಳಬಹುದಾಗಿದೆ. ಅದು ಈ ಪುಸ್ತಕದ ಹೆಚ್ಚುಗಾರಿಕೆ.

‘ತಪ್ಪುಮಾಡುವುದು ಒಂದು ಸೃಜನಶೀಲ ಕ್ರಿಯೆ’ (ಪು 23) ಎನ್ನುವ ಲೇಖಕರು, ಈ ಪುಸ್ತಕದುದ್ದಕ್ಕೂ ಆ ಬಗೆಯ ‘ಸೃಜನಶೀಲ ಸೃಷ್ಟಿ’ಗಳನ್ನು ಗುರುತಿಸುವ ಮತ್ತು ಅವುಗಳನ್ನು ತಿದ್ದುವ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾರೆ. ಈ ವಿನೂತನ ವಿಧಾನದ ಮೂಲಕ ಬರವಣಿಗೆಯ ಕಲೆಯನ್ನು ಕಲಿಸಿಕೊಡುವ ಉಮೇದೂ ಅವರಿಗೆ ಇದೆ.

ಕನ್ನಡ ಬರವಣಿಗೆಯಲ್ಲಿ ಅನುಸರಿಸಬೇಕಾದ ಮೂಲ ಸೂತ್ರ ‘ಅನ್ವಯಾನುಕ್ರಮ’ದ ಪರಿಚಯದಿಂದಲೇ ಅವರು ತಮ್ಮ ವಿಶ್ಲೇಷಣೆಯನ್ನು ಆರಂಭಿಸುತ್ತಾರೆ. ‘ಕನ್ನಡ ಭಾಷೆ ಅತ್ಯಂತ ಸರಳವಾದುದು. ಅದರಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾಪದಗಳು ಕ್ರಮವಾಗಿ ಇದ್ದರೆ ಸಾಕು. ಆ ವಾಕ್ಯ ಸುಲಭವಾಗಿ ಅರ್ಥವಾಗುತ್ತದೆ. ವಿಶೇಷಣಗಳು ಇದ್ದರೆ ಆಯಾ ಪದಗಳ ಹಿಂದೆ ಇರುತ್ತವೆ’ (ಪು. 15) - ಈ ವಿವರಣೆಯಲ್ಲಿ ತುಂಬಾ ಸರಳವಾಗಿ ಭಾಷೆಯ ಗುಟ್ಟನ್ನು ಬಿಚ್ಚಿಟ್ಟಿದ್ದಾರೆ. ಈ ಬಗೆಯ ಸರಳ ವಿವರಣೆಗಳು ದಂಡಾವತಿಯವರ ಬರಹದ ವೈಶಿಷ್ಟ್ಯವೂ ಹೌದು. ಇದೇ ಬಗೆಯಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಹಲವು ಸೂತ್ರಗಳನ್ನು ಪುಸ್ತಕದುದ್ದಕ್ಕೂ ಕಾಣಬಹುದು (ಉದಾ: ‘ಒಂದು ವಾಕ್ಯ ಒಂದು ವಚನ’ ಪು. 20). ಅಲ್ಪಪ್ರಾಣ, ಮಹಾಪ್ರಾಣ, ವಿಸರ್ಗ, ದೀರ್ಘ, ಸಂಧಿ, ಸಮಾಸಗಳ ಬಳಕೆಯಲ್ಲಿ ತಪ್ಪುಗಳಿಗೆ ಕಾರಣವಾಗುವ ಹಲವು ಸೂಕ್ಷ್ಮಗಳನ್ನು ಕುರಿತಂತೆ ಉದಾಹರಣೆ ಸಹಿತ ವಿವರಣೆಗಳನ್ನು ಪುಸ್ತಕದಲ್ಲಿ ಕೊಡಲಾಗಿದೆ. ಅಪಶಬ್ದಗಳು, ಅಸಂಬದ್ಧ ಬಳಕೆಗಳು ಎಲ್ಲವೂ ಇಲ್ಲಿ ಚರ್ಚಿತ ವಿಷಯಗಳೇ ಆಗಿವೆ.

ಪ್ರಸ್ತುತ ದೀಪಿಕೆಯು ಭಾಷೆಯ ಬಳಕೆಯಲ್ಲಿನ ದೋಷಗಳ ಪರಿಹಾರಸೂಚಿ ಮಾತ್ರವೇ ಅಲ್ಲ; ಇದರ ವ್ಯಾಪ್ತಿ ಇನ್ನೂ ವಿಶಾಲವಾದದ್ದು. ಬರವಣಿಗೆಗೆ ಸಂಬಂಧಿಸಿದ ಅನೇಕ ವಿಚಾರಗಳು ಇಲ್ಲಿ ಪ್ರಸ್ತಾಪವಾಗಿವೆ. ಪ್ರಮುಖವಾಗಿ ಅನುವಾದದ ತೊಡಕುಗಳನ್ನು, ಸ್ವತಃ ಉತ್ತಮ ಅನುವಾದಕರಾಗಿರುವ ಲೇಖಕರು, ವಿವರಿಸಿದ್ದಾರೆ. ಒಂದೊಂದು ಭಾಷೆಗೂ ಅದರದೇ ರೀತಿ ಇರುತ್ತದೆ; ಅನುವಾದ ಮಾಡುವಾಗ ಭಾಷೆಯ ಜಾಯಮಾನಕ್ಕೆ ಸರಿಹೊಂದುವ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಅನುವಾದಗಳು ಹೇಗೆ ತಪ್ಪು ಅರ್ಥಕ್ಕೆ ಅನುವಾಗುತ್ತವೆ ಮತ್ತು ಯಾವ ಬಗೆಯಲ್ಲಿ ಅಪಹಾಸ್ಯಕ್ಕೆ ಎಡೆಮಾಡಿಕೊಡುತ್ತವೆ ಎನ್ನುವುದನ್ನು ಸ್ಪಷ್ಟ ಉದಾಹರಣೆಗಳ ಮೂಲಕ (‘ನನ್ನ ಗರ್ಭಧಾರಣೆಯ ಅವಧಿಯಲ್ಲಿ ಪೋಸ್ಟ್‌ಮನ್ ಅವರು ತುಂಬಾ ಸಹಾಯ ಮಾಡಿದರು,’ ಪು. 138) ವಿವರಿಸಿದ್ದಾರೆ. ವಾಕ್ಯ ಚಿಹ್ನೆಗಳು, ಸಂಕ್ಷಿಪ್ತ ರೂಪಗಳು, ಇಂಗ್ಲಿಷ್ ಪದಗಳು ಇವುಗಳನ್ನು ಸೂಕ್ತ ರೀತಿಯಲ್ಲಿ ಬಳಸುವ ಬಗ್ಗೆ ಒಂದೊಂದು ಪೂರ್ಣ ಅಧ್ಯಾಯವನ್ನೇ ಮೀಸಲು ಇಟ್ಟಿದ್ದಾರೆ. ಇನ್ನೂ ಹತ್ತು ಹಲವು ವಿಚಾರಗಳನ್ನು ಪ್ರಸ್ತಾಪಿಸುವ ಈ ದೀಪಿಕೆಯಲ್ಲಿ ಏನುಂಟು, ಏನಿಲ್ಲ ಎನ್ನುವ ವಿವರಗಳನ್ನು ಇಲ್ಲಿ ಪಟ್ಟಿ ಮಾಡುವುದು ಅನವಶ್ಯಕ ಎನ್ನಿಸುತ್ತದೆ. ಈ ದೀಪಿಕೆ ಶುದ್ಧ ಬರವಣಿಗೆಗೆ ಪೂರಕ ಮಾಹಿತಿ ಕೊಡಬಲ್ಲ ಒಂದು ಸಮಗ್ರ ಮಾರ್ಗಸೂಚಿ ಗ್ರಂಥ; ಬಹು ಉಪಯೋಗಿ ಕೈಪಿಡಿ.

ಭಾಷೆಯ ಬಳಕೆಯಲ್ಲಿ ಹಿಡಿತ ಸಾಧಿಸುವುದು ಸುಲಭದ ಕೆಲಸ ಅಲ್ಲ. ಅದಕ್ಕೆ ಪೂರಕವಾದ ಮನೋಧರ್ಮ ಬೆಳೆಸಿಕೊಳ್ಳಬೇಕು. ಈ ಬಗ್ಗೆ ಲೇಖಕರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ: ‘ಭಾಷಾ ಕೌಶಲ ಬೆಳೆಸಿಕೊಳ್ಳಬೇಕಾದರೆ, ಮೊದಲನೆಯದಾಗಿ ಭಾಷೆಯ ಕುರಿತು ಪ್ರೀತಿ ಇರಬೇಕು. ಶಬ್ದಗಳ ಬಗೆಗೆ ಮೋಹ ಇರಬೇಕು. ಯಾವ ಶಬ್ದ ಎಲ್ಲಿ ಬಳಸಬೇಕು ಎಂದು ತಿಳಿದಿರಬೇಕು. ಗೊತ್ತಿದೆ ಎಂದು ಬಳಸಲು ಹೋಗಬಾರದು.’ (ಪು. 262)

ಯಾವುದೇ ಪುಸ್ತಕ ಅಧಿಕೃತ ಎನ್ನಿಸುವುದು ಆ ಕೃತಿಯ ಲೇಖಕರ ಅರ್ಹತೆಯ ಆಧಾರದಲ್ಲಿ. ದಂಡಾವತಿಯವರ ಸುದೀರ್ಘ ಪತ್ರಿಕೋದ್ಯಮದ ಅನುಭವ, ವೃತ್ತಿಯ ಬಗೆಗಿನ ಅವರ ಬದ್ಧತೆ, ಕನ್ನಡ ಭಾಷೆಯ ಬಗೆಗೆ ಅವರ ಅಪಾರ ಪ್ರೀತಿ ಮತ್ತು ಪ್ರಭುತ್ವ ಇವೆಲ್ಲವೂ ಈ ಹೊತ್ತಿಗೆಗೆ ಅವಶ್ಯಕವಾದ ಅಧಿಕೃತತೆಯನ್ನು ತಂದು ಕೊಡುತ್ತವೆ.

ಸಂಚಾರ ಸಂಚಕಾರ...

10ನೇ ಪುಟದಿಂದ...

ತಂತ್ರಜ್ಞಾನವಿದ್ದರೂ ದಂಡ, ಶುಲ್ಕ

ಅತ್ಯಾಧುನಿಕ ತಂತ್ರಜ್ಞಾನ ಇದ್ದರೂ ವಾಹನಗಳ ಸಂಖ್ಯೆಯ ನಿಯಂತ್ರಣವಾಗದ ಕಾರಣ ಲಂಡನ್‌ನಲ್ಲಿ ಪೀಕ್ ಅವರ್‌ನಲ್ಲಿ ವಾಹನ ತೆಗೆಯಬೇಕೆಂದರೆ ನಿರ್ದಿಷ್ಟ ಹಣ ನೀಡಬೇಕು ಎಂಬ ನಿಯಮವನ್ನು ಅಲ್ಲಿನ ಸರ್ಕಾರ ಹೇರಿದೆ. ಇದರಿಂದ ಶೇ 30ರಷ್ಟು ವಾಹನ ದಟ್ಟಣೆ ಕಡಿಮೆಯಾಗಿದೆಯಂತೆ.

ವಾಹನ ದಟ್ಟಣೆ ಹಾಗೂ ಅದರಿಂದ ಉಂಟಾಗುವ ಮಾಲಿನ್ಯ ನಿಯಂತ್ರಣಕ್ಕಾಗಿ ದೆಹಲಿ ಸರ್ಕಾರ ‘ಸರಿ, ಬೆಸ’ದ ನಿಯಮ ಹೇರಿದೆ. ವಾಹನ ನೋಂದಣಿ ಸಂಖ್ಯೆ ‘ಸಮ’ವಾಗಿದ್ದರೆ ಒಂದು ದಿನ, ‘ಬೆಸ’ವಾದರೆ ಮತ್ತೊಂದು ದಿನ ವಾಹನಗಳು ರಸ್ತೆಗಿಳಿಯಬೇಕು. ಮುಂಬೈನಲ್ಲಿ ಸಿಗ್ನಲ್ ಬಳಿ ಹಸಿರು ದೀಪ ಹೊತ್ತಿಕೊಂಡಾಗ ಅನಗತ್ಯವಾಗಿ ಹಾರ್ನ್ ಮಾಡಿದರೆ ಕೆಂಪು ದೀಪ ಮತ್ತೆ 90 ಸೆಕೆಂಡುಗಳ ಕಾಲ ಹೆಚ್ಚಾಗುವಂತೆ ಮುಂಬೈ ಪೊಲೀಸರು ಮಾಡಿದ್ದಾರೆ. ಇದು ಅನಗತ್ಯ ಶಬ್ದಮಾಲಿನ್ಯ ತಡೆಗಟ್ಟುವ ಕ್ರಮವಾದರೂ, ವಾಹನ ಸವಾರರು ರಸ್ತೆ ಸಂಚಾರ ನಿಮಯ ಪಾಲನೆಯತ್ತ ಗಮನ ನೀಡಿದ್ದು ವರದಿಯಾಗಿತ್ತು. ಇಂಥ ಕ್ರಮಗಳಿಂದ ಸಂಚಾರ ನಿಯಮ ಪಾಲಿಕೆಯಲ್ಲಿ ಬೆಂಗಳೂರು ಹಾಗೂ ಹೈದರಾಬಾದ್‌ಗಿಂತ ಮುಂಬೈ ಮೇಲಿನ ಸ್ಥಾನದಲ್ಲಿದೆ.

ಮೊದಲ ಹಂತದಲ್ಲಿ 165 ಸಿಗ್ನಲ್‌ಗಳಲ್ಲಿ ಎಐ

ಬೆಂಗಳೂರು ನಗರದ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ನಿರಂತರ ಹೊಸ ಪ್ರಯೋಗ ನಡೆಸಲಾಗುತ್ತಿದೆ. ಇದರ ಭಾಗವಾಗಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಹೊಂದಿಕೆಯಾಗುವ ಸಂಚಾರ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಸಿ-ಡಾಕ್ ಅಭಿವೃದ್ಧಿಪಡಿಸಿರುವ ಕಾಸಿಕಾಸ್ಟ್ ಅಲ್ಗಾರಿದಮ್ ಬಳಸಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಮೊದಲ ಹಂತದಲ್ಲಿ 165 ಸಿಗ್ನಲ್‌ಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ ಎನ್ನುತ್ತಾರೆ ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಜಂಟಿ ಆಯುಕ್ತ ಎಂ.ಎನ್.ಅನುಚೇತ್. ಸದ್ಯಕ್ಕೆ ಡ್ರೋನ್‌ಗಳನ್ನು ಬಳಸಿ ವಾಹನ ದಟ್ಟಣೆಯ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿರುವುದರ ಮೇಲೂ ಅವರು ಬೆಳಕು ಚೆಲ್ಲಿದರು.

ಡ್ರೋಣ್ ಕಣ್ಣಲ್ಲಿ ಬೆಂಗಳೂರಿನ ಹೆಬ್ಬಾಳ ಮೇಲ್ಸೇತುವೆ

ಭಾರತವಷ್ಟೇ ಅಲ್ಲ, ಆಮ್‌ಸ್ಟರ್‌ಡ್ಯಾಮ್, ಮೆಲ್ಬರ್ನ್ ಮುಂತಾದ ನಗರಗಳು ರಿಯಲ್ ಟೈಮ್ ಮಾಹಿತಿ ಆಧರಿಸಿ ನಿಯಂತ್ರಿಸುವುದನ್ನೇ ಸದ್ಯಕ್ಕೆ ಮೂಲ ಮಂತ್ರವನ್ನಾಗಿಸಿಕೊಂಡಿವೆ. ತಂತ್ರಜ್ಞಾನದೊಂದಿಗೆ ಮೂಲಸೌಕರ್ಯವನ್ನೂ ಹೆಚ್ಚಿಸಿದಲ್ಲಿ ಸಂಚಾರ ದಟ್ಟಣೆ ತಡೆಯುವುದು ಸವಾಲಲ್ಲ ಎಂಬುದು ಸತ್ಯ.

ತಂತ್ರಜ್ಞಾನಕ್ಕಿಂತ ಮೂಲಸೌಕರ್ಯ ಹೆಚ್ಚಳವೇ ಮುಖ್ಯ

ವಾಹನ ದಟ್ಟಣೆ ನಿಯಂತ್ರಣಕ್ಕೆ ಸಿಗ್ನಲ್ ವ್ಯವಸ್ಥೆಯನ್ನು ಹೈಟೆಕ್ ಮಾಡುವುದಷ್ಟೇ ಪರಿಹಾರವಲ್ಲ. ರಸ್ತೆ ಅಭಿವೃದ್ಧಿ, ಲೇನ್‌ಗಳನ್ನು ಅನುಸರಿಸುವಂತೆ ಮಾಡುವ ಕಟ್ಟುನಿಟ್ಟಿನ ಕ್ರಮ ಹಾಗೂ ಸಾರ್ವಜನಿಕ ಸಂಚಾರ ವ್ಯವಸ್ಥೆ ಬಳಕೆಗೆ ಉತ್ತೇಜನ ನೀಡುವಂತಹ ಪ್ರಮುಖ ಅಂಶಗಳೂ ಹೆಚ್ಚು ಫಲಿತಾಂಶ ನೀಡಬಲ್ಲವು ಎನ್ನುವುದು ನಗರ ಯೋಜನೆಯಲ್ಲಿ ಬಹಳಷ್ಟು ವರ್ಷಗಳ ಕಾಲದ ಅನುಭವ ಹೊಂದಿರುವ ನಗರ ಯೋಜನಾ ತಜ್ಞ ಆರ್.ರವಿಚಂದರ್ ಸಲಹೆ.

‘ಬೆಂಗಳೂರಿನಲ್ಲಿ 200ರಿಂದ 250 ಪ್ರಮುಖ ವೃತ್ತಗಳಿವೆ. ಇವುಗಳಲ್ಲಿ ಎಡಕ್ಕೆ ತಿರುಗುವವರು ಎಡಕ್ಕೆ ಇರುವಂತೆ, ಲೇನ್ ಶಿಸ್ತು ಪಾಲಿಸುವಂತೆ ಮಾಡಿದಲ್ಲಿ ವಾಹನ ದಟ್ಟಣೆಯನ್ನು ಬಹಳಷ್ಟು ಪ್ರಮಾಣದಲ್ಲಿ ನಿಯಂತ್ರಿಸಲು ಸಾಧ್ಯ. ಸಿಗ್ನಲ್‌ಗಳು ಇರುವಲ್ಲಿ ಸುತ್ತಮುತ್ತಲಿನ 300ರಿಂದ 400 ಮೀ. ಜಾಗವನ್ನು ಗುಂಡಿರಹಿತವಾಗಿ ಇರುವಂತೆ ಅಭಿವೃದ್ಧಿಪಡಿಸಬೇಕು. ವಾಹನ ದಟ್ಟಣೆ ಹೆಚ್ಚಿರುವ ಪ್ರಮುಖ ರಸ್ತೆಗಳಲ್ಲಿ ಅಲ್ಲಲ್ಲಿ ವಾಹನಗಳನ್ನು ತಡೆದು ‘‘ಟ್ರಾಫಿಕ್ ಕಾಮ್’’ (ಅಂತಹ ಕಡೆಗಳಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಅನುವು ಮಾಡಿಕೊಡುವುದರಿಂದ) ಬಿಡುವುದರಿಂದಲೂ ವಾಹನ ದಟ್ಟಣೆ ಕಡಿಮೆ ಮಾಡಬಹುದು’ ಎನ್ನುತ್ತಾರೆ ಅವರು.

ತಂತ್ರಜ್ಞಾನ ಬಳಕೆಯನ್ನು ಟ್ರಾಫಿಕ್ ನಿಯಮ ಪಾಲಿಸದವರ ಪತ್ತೆಗೆ (ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪತ್ತೆ ಮಾಡುವುದನ್ನು ಹೊರತುಪಡಿಸಿ) ಬಳಸಬಹುದು. ಆದರೆ ವಾಹನ ದಟ್ಟಣ ನಿಯಂತ್ರಣವನ್ನು ಪೊಲೀಸರೇ ಮಾಡುವುದು ಸೂಕ್ತ. ಕೊನೆಯದಾಗಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಅದರಲ್ಲೂ ‘ಶಕ್ತಿ’ ಯೋಜನೆಯಂತಹವು ಟ್ರಾಫಿಕ್ ಸಮಸ್ಯೆಗೆ ಪರಿಹಾರವೂ ಆಗಬಲ್ಲದು’ ಎನ್ನುವ ರವಿಚಂದರ್ ಅವರ ಅಭಿಪ್ರಾಯ ಅರ್ಥಪೂರ್ಣ.

ಮೊದಲ ಓದು

ಪತ್ರಕರ್ತ–ಸಾಹಿತಿಯ ಎರಡು ಮುಖಗಳಿಗೆ ಕನ್ನಡಿ



ಪು: 192 ₹200

ಅಂತರ್ಯಾನ (ಜಿ.ಎನ್. ರಂಗನಾಥ ರಾವ್ ಅವರ ಪತ್ರಿಕೋದ್ಯಮ, ಸಾಹಿತ್ಯದ ಪರಾಮರ್ಶನ ಗ್ರಂಥ)
ಸಂ: ಎಚ್.ಎಸ್.ವೆಂಕಟೇಶಮೂರ್ತಿ
ಪ್ರ: ಕವಿತಾ ಪ್ರಕಾಶನ
ಸಂ: 9880105526

ಪತ್ರಿಕೋದ್ಯಮ ಬಯಸುವುದು ಬಹು ವಿಷಯಗಳ ಜ್ಞಾನಸೂಕ್ಷ್ಮವನ್ನು. ನಿತ್ಯದ ಬೇಕುಗಳಿಗೆ ಸ್ಪಂದಿಸುತ್ತಲೇ ಅವಸರದ ಸಾಹಿತ್ಯ ಮೂಡಿಸಲೇಬೇಕಾದ ವೃತ್ತಿ ಇದು. ಹೀಗೆ ತಲೆಯ ತುಂಬ ಹಲವು ಜ್ಞಾನಶಾಖೆಗಳನ್ನು ಮೂಡಿಸಿಕೊಂಡೂ ನಿರ್ದಿಷ್ಟ ಆಸಕ್ತಿಯನ್ನು ನೇವರಿಸಿ, ಬರಹದ ಕೃಷಿ ಮಾಡುವುದು ಸವಾಲೇ. ಜಿ.ಎನ್. ರಂಗನಾಥ ರಾವ್ ಇಂತಹ ಸವಾಲಿಗೆ ಜವಾಬು ಕೊಟ್ಟವರು. ವೃತ್ತಿ ಮತ್ತು ಪ್ರವೃತ್ತಿಯನ್ನು ಸರಿದೂಗಿಸಿಕೊಂಡೇ ಬಂದ ಅವರಿಗೆ ಇರುವ ಎರಡು ಮುಖಗಳನ್ನು ‘ಅಂತರ್ಯಾನ’ ಕೃತಿ ತೆರೆದಿಡುತ್ತದೆ. ಇದು ರಂಗನಾಥ ರಾವ್ ಅವರ ಪತ್ರಿಕೋದ್ಯಮ ಮತ್ತು ಸಾಹಿತ್ಯದ ಪರಾಮರ್ಶನ ಗ್ರಂಥ. ವೃತ್ತಿ–ಪ್ರವೃತ್ತಿ, ಕಥೆ–ಕಾವ್ಯ–ನಾಟಕ–ಸಂಪಾದಕೀಯ, ಸಾಹಿತ್ಯ ವಿಮರ್ಶೆ, ಅನುವಾದ ಸಾಹಿತ್ಯ, ಸುದ್ದಿ ಮತ್ತು ಶುದ್ಧಿ ಎಂಬ ಅಧ್ಯಾಯಗಳಾಗಿ ಇಲ್ಲಿನ ಬರಹಗಳನ್ನು ವಿಂಗಡಿಸಲಾಗಿದೆ. ರಂಗನಾಥ ರಾವ್ ಅವರ ಕುರಿತು ಪತ್ರಕರ್ತರು, ಸಾಹಿತಿಗಳು ಬರೆದಿರುವ ಲೇಖನಗಳು ಹಲವು ಒಳನೋಟಗಳನ್ನು ಕಾಣಿಸುತ್ತವೆ. ಸುದ್ದಿ ಮತ್ತು ಶುದ್ಧಿ ಎಂಬ ಕೊನೆಯ ಅಧ್ಯಾಯದಲ್ಲಿ ಈ ಕೃತಿಯ ಸಂಪಾದಕರಾದ ಎಚ್.ಎಸ್. ವೆಂಕಟೇಶಮೂರ್ತಿ ಅವರೇ ರಂಗನಾಥ ರಾವ್ ಅವರನ್ನು ಸಂದರ್ಶಿಸಿದ್ದಾರೆ. ಅದರಲ್ಲಿ ಪತ್ರಿಕೋದ್ಯಮ ಕುರಿತ ಹಲವು ಸೂಕ್ಷ್ಮಗಳ ದರ್ಶನವಿದೆ. ಅನುವಾದ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದವರು ರಂಗನಾಥ ರಾವ್. ಅದರ ಕುರಿತ ಅಧ್ಯಾಯವನ್ನು ಸಾಹಿತ್ಯಾಸಕ್ತರು ಓದಲೇಬೇಕು.

‘ಪತ್ರಿಕೋದ್ಯಮದಲ್ಲಿ ಇರುವವರು ತಮ್ಮ ಸಾಹಿತ್ಯಕ ಬರವಣಿಗೆಯನ್ನು ನಡೆಸಲಾರರು ಎಂಬ ಅಪವ್ಯಾಖ್ಯೆಯನ್ನು ಜಿ.ಎನ್.ಆರ್. ಹುಸಿಮಾಡಿದ್ದಾರೆ. ನಮ್ಮ ಹಳೆಯ ಪೀಳಿಗೆಯ ಕಡೆಂಗೋಡ್ಲು, ಆನಂದಕಂದ, ವೀರಕೇಸರಿ, ಡಿವಿಜಿಯವರಂತೆ ವೃತ್ತಿಗೆ ಮತ್ತು ಪ್ರವೃತ್ತಿಗೆ ಸಂಬಂಧಿಸಿ ಸಮಾಸಮ ತೂಕದ ಮೌಲ್ಯಾನ್ವಿತ ಬರಹಗಳನ್ನು ಜಿ.ಎನ್.ಆರ್. ಮಾಡಿದ್ದಾರೆ’ ಎಂದು ಎಚ್ಎಸ್‌ವಿ ಮುನ್ನುಡಿಯಲ್ಲಿ ಬರೆದಿರುವ ಮಾತೇ ತೂಕದ್ದು. ಟಿ.ವಿ. ವೆಂಕಟಾಚಲಶಾಸ್ತ್ರಿ, ಯು.ಆರ್. ಅನಂತಮೂರ್ತಿ, ಎಸ್. ಆರ್. ವಿಜಯಶಂಕರ್, ಎಸ್. ದಿವಾಕರ್, ಜಯಂತ ಕಾಯ್ಕಿಣಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಜಿ.ಎಸ್. ಸದಾಶಿವ, ಜಿ.ಎಸ್. ಆಮೂರ, ದೇಶ ಕುಲಕರ್ಣಿ ಮೊದಲಾದವರು ರಂಗನಾಥ ರಾಯರ ಸಾಹಿತ್ಯದ ಕುರಿತು ಬರೆದಿರುವ ಲೇಖನಗಳು ಕೃತಿಯಲ್ಲಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಸ್ಥೂಲ ಚಿತ್ರಣ



ಪು: 176 ₹150

ಮಿಷನರಿ ಪ್ರವಾಸ ಮಂಗಳೂರಿನಿಂದ ಸುಬ್ರಹ್ಮಣ್ಯಕ್ಕೆ 1840
ಜರ್ಮನ್ ಮೂಲ: ಹೆರ್ಮನ್ ಮ್ಯೋಗ್ಲಿಂಗ್, ಗಾಟ್‌ಫ್ರೈಡ್ ವೈಗ್ಲೆ
ಇಂಗ್ಲಿಷ್‌ಗೆ: ಜೆನ್ನಿಫರ್ ಜೆಂಕಿನ್ಸ್
ಕನ್ನಡಕ್ಕೆ: ಪ್ರೊ.ಎ.ವಿ.ನಾವಡ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಸಂ: 080-23183311

ಇದೊಂದು ರೀತಿಯ ಚಾರಣ ಕಥನ. ಕ್ರೈಸ್ತಧರ್ಮ ಪ್ರಚಾರಕರಾಗಿ ಬಾಸೆಲ್ ಮಿಷನ್ ಸಂಘಟನೆಯ ಸೂಚನೆಯಂತೆ ರೆ. ಹರ್ಮನ್ ಮೋಗ್ಲಿಂಗ್ ಹಾಗೂ ರೆ.ಗಾಟ್‌ಪ್ರೈಟ್ ವೈಗ್ಲೆ ಮಂಗಳೂರಿಗೆ ಹೆಜ್ಜೆ ಇಟ್ಟಿದ್ದರು. ದಕ್ಷಿಣ ಕನ್ನಡದಲ್ಲಿ ನಡೆಸಿದ ಅವರ ಪ್ರವಾಸದ ದಾಖಲೆಯ ಅನುವಾದ ಕೃತಿ ಇದು.

ಮಂಗಳೂರಿನಿಂದ ಆರಂಭವಾಗಿ ಧರ್ಮಸ್ಥಳ, ಸುಬ್ರಹ್ಮಣ್ಯ, ಕಾಸರಗೋಡು ಮಾರ್ಗವಾಗಿ ಮಂಜೇಶ್ವರ ಮೂಲಕ ಮತ್ತೆ ಮಂಗಳೂರು ತಲುಪಿದ ಈ ಹೆಜ್ಜೆಗಳು ದಾಖಲಿಸಿದ್ದು ಕೇವಲ ಚಾರಣ ಕಥನವನ್ನಲ್ಲ, ಬದಲಾಗಿ ದಕ್ಷಿಣ ಕನ್ನಡದ ಸಂಪ್ರದಾಯ, ಸಂಸ್ಕೃತಿ, ಇಡೀ ಜಿಲ್ಲೆಯ ಸ್ಥೂಲ ಪರಿಚಯ, ಚಿತ್ರಣವನ್ನು ಈ ಕೃತಿ ನೀಡಿದೆ. ತಾವು ಪ್ರಯಾಣಿಸಿದ ಪ್ರದೇಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಪ್ರತ್ಯೇಕವಾಗಿ ಇಲ್ಲಿ ದಾಖಲಿಸಿದ್ದಾರೆ ಮೋಗ್ಲಿಂಗ್ ಹಾಗೂ ವೈಗ್ಲೆ. ಭೇಟಿ ನೀಡಿದ ಸ್ಥಳಗಳ ಮಹತ್ವವನ್ನೂ, ಪುರಾಣ ಚರಿತ್ರೆಗಳನ್ನೂ ತಿಳಿದುಕೊಳ್ಳುವ ಆಸಕ್ತಿಯ ಜೊತೆಗೆ ಸ್ವಧರ್ಮದ ಬಗೆಗಿನ ಮೋಹ, ಸ್ಥಳೀಯ ಸಂಪ್ರದಾಯದ ವಿರುದ್ಧ ಪ್ರಶ್ನೆ, ಪ್ರಚಾರದ ಬಿರುಸು ಮೋಗ್ಲಿಂಗ್ ಬರವಣಿಗೆಯುದ್ದಕ್ಕೂ ಕಂಡುಬರುತ್ತದೆ. ‘ಇದು ಒಂದು ಪ್ರವಾಸಕಥನವಷ್ಟೇ ಅಲ್ಲ. ಅದು ಹತ್ತೊಂಬತ್ತನೆ ಶತಮಾನದ ಮೊದಲ ಅರ್ಧದ ಕರಾವಳಿಯ ಸಾಮಾಜಿಕ, ಧಾರ್ಮಿಕ ಚರಿತ್ರೆಯೂ ಹೌದು’ ಎಂದು ಉಲ್ಲೇಖಿಸುತ್ತಾರೆ ಅನುವಾದಕ ಎ.ವಿ.ನಾವಡ ಅವರು. ದಕ್ಷಿಣ ಕನ್ನಡ, ಕೇರಳಕ್ಕೆ ಸೇರಿದ ಈಗಿನ ಕಾಸರಗೋಡು ಜಿಲ್ಲೆಗಳಲ್ಲಿ ಓಡಾಡಿದವರಿಗೆ ಇಡೀ ಕೃತಿ ಪ್ರವಾಸಕಥನದಂತೆ ಕಂಡುಬರುತ್ತದೆ. ಜೊತೆಗೆ ಅಲ್ಲಿನ ದೈವಗಳ ಬಗ್ಗೆ ಇಲ್ಲಿ ಸುದೀರ್ಘವಾದ ವಿವರಣೆಗಳನ್ನು ಕಾಣಬಹುದು. ಅನುವಾದಕನ ಟಿಪ್ಪಣಿಯಡಿ ನಾವಡ ಅವರು ಹಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ತುಳುನಾಡಿನ ದೈವಗಳನ್ನು ಮೋಗ್ಲಿಂಗ್ ತಪ್ಪಾಗಿ ಗ್ರಹಿಸಿರುವುದನ್ನು ಲೇಖಕರು ಸೂಕ್ಷ್ಮವಾಗಿ ಉಲ್ಲೇಖಿಸಿದ್ದಾರೆ.

ಸಮಾಜ,ಮತ ಸುಧಾರಕರ ಕುರಿತ ಕೈಪಿಡಿ

ಪು: 152 ₹225

ಭಾರತದ ಸಮಾಜ ಮತ್ತು ಮತ ಸುಧಾರಕರು
ಲೇ:ಡಾ.ಎ.ಸಿ.ನಾಗೇಶ,ಎಚ್. ಪರಮೇಶ್ವರ
ಪ್ರ: ಚಿರಂತ್ ಪ್ರಕಾಶನ
ಸಂ: 8453338360

ಭಾರತ ಇತಿಹಾಸದ ಪುಟಗಳಲ್ಲಿ ಸಮಾಜ ಸುಧಾರಣೆ ಮಾಡಿರುವ ಅನೇಕ ಮಹನೀಯರು ಸಿಗುತ್ತಾರೆ. ಅಂತಹ ವ್ಯಕ್ತಿಗಳ ಕುರಿತು ಕಿರುಚಿತ್ರಣ ನೀಡುವ ಕೃತಿಯೇ ‘ಭಾರತದ ಸಮಾಜ ಮತ್ತು ಮತ ಸುಧಾರಕರು’. ಚರಿತ್ರೆಯ ಅಧ್ಯಯನದಲ್ಲಿ ತೊಡಗಿಸಿಕೊಂಡಿರುವ, ಈಗಾಗಲೇ ಚರಿತ್ರೆ ಕುರಿತು ಕೆಲ ಕೃತಿಗಳನ್ನು ರಚಿಸಿರುವ ಡಾ.ಎ.ಸಿ.ನಾಗೇಶ, ಎಚ್.ಪರಮೇಶ್ವರ ಈ ಕೃತಿಯ ಲೇಖಕರು. ‘ಚರಿತ್ರೆಯ ನಿರ್ಮಾಪಕರು ಆಯಾ ಕಾಲಘಟ್ಟಗಳಲ್ಲಿ ಜನತಾ ಸಮೂಹವೇ ಆದ್ದರಿಂದ ಯಾವುದೋ ಒಬ್ಬ ಧೀರೋದಾತ್ತ ವ್ಯಕ್ತಿ ಇಡೀ ಇತಿಹಾಸಕ್ಕೆ ತಿರುವು ನೀಡಬಹುದೆಂಬ ಮಿಥ್ಯೆಯನ್ನು ಪುರಸ್ಕರಿಸುವಂತಿಲ್ಲ. ಆದಾಗ್ಯೂ ತಮ್ಮ ಚಿಂತನೆ ಮತ್ತು ಕ್ರಿಯೆಗಳಿಂದ ಅನೇಕ ಮಹಾನ್ ವ್ಯಕ್ತಿಗಳು ಸಮುದಾಯದ ಆಶೋತ್ತರಗಳನ್ನು ಪ್ರತಿಫಲಿಸಿರುವುದುಂಟು’ ಎಂದು ಕೃತಿಯ ಬೆನ್ನುಡಿಯಲ್ಲಿ ಡಾ.ಜಿ.ರಾಮಕೃಷ್ಣ ಹೇಳಿದ್ದಾರೆ.

ಕೃತಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೇ ಭಾಗದಲ್ಲಿ ಪ್ರಾಚೀನ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರ ಕುರಿತ ಮಾಹಿತಿಯಿದೆ. ಇದರಲ್ಲಿ ಜೈನಮತ ಸಂಸ್ಥಾಪಕ ವರ್ಧಮಾನ ಮಹಾವೀರ ಹಾಗೂ ಬೌದ್ಧಮತದ ಸ್ಥಾಪಕ ಮಹಾತ್ಮ ಬುದ್ಧರ ಕುರಿತಾದ ಒಂದಷ್ಟು ವಿಚಾರಗಳಿವೆ. ಈ ಎರಡೂ ಮತಗಳ ಉಗಮ, ಬೆಳವಣಿಗೆ ಮತ್ತು ಪತನದವರೆಗಿನ ಸಾಕಷ್ಟು ವಿಚಾರಗಳನ್ನು ಲೇಖಕರು ಈ ಭಾಗದಲ್ಲಿ ವಿವರಿಸಿದ್ದಾರೆ. ಎರಡನೇ ಭಾಗದಲ್ಲಿ ಮಧ್ಯಕಾಲೀನ ಭಾರತದ ಸಾಮಾಜಿಕ ಮತ್ತು ಮತ ಸುಧಾರಕರ ಬಗ್ಗೆ ಮಾಹಿತಿ ಇದೆ. ಈ ಅಧ್ಯಾಯದಲ್ಲಿ ಶಂಕರಾಚಾರ್ಯ, ರಾಮಾನುಜಾಚಾರ್ಯರಿಂದ ಹಿಡಿದು ರಮಾನಂದರವರೆಗಿನ ಸುಧಾರಕರ ಮಾಹಿತಿ ಲಭಿಸುತ್ತದೆ. ಬಳಿಕ ಅಕ್ಬರ್, ಔರಂಗಜೇಬನ ಕಾಲದ ಧಾರ್ಮಿಕ ಬದಲಾವಣೆಗಳ ಬಗ್ಗೆ ಲೇಖಕರು ಬರೆಯುತ್ತಾರೆ. ಭಕ್ತಿ ಚಳವಳಿಗಳ ಪ್ರಭಾವವನ್ನೂ ಹೇಳುತ್ತಾರೆ. ಕೊನೆಯ ಅಧ್ಯಾಯದಲ್ಲಿ 19–20 ಶತಮಾನದ ಸುಧಾರಕರ ಬಗ್ಗೆ ಮಾಹಿತಿ ಸಿಗುತ್ತದೆ. ಒಟ್ಟಾರೆಯಾಗಿ ಅಧ್ಯಯನ ಆಸಕ್ತರಿಗೆ ಸಾಕಷ್ಟು ವಿಚಾರ ಒದಗಿಸುವ ಕೃತಿ.

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
(ಮೂಲ: ಇ. ಸಂತೋಷ್ ಕುಮಾರ್)
ಕನ್ನಡಕ್ಕೆ: ಸುನೈಫ್ ಅವರ
ಕಿತ್ತಳೆ ಹಣ್ಣಿನ ಉಪಮೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಡಾ.ಕೆ.ಷರೀಫಾ ಅವರ
ಅಮೃತ ಧಾರೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಪೆಹಲ್ಗಾಮ್ ಹಸಿರು ಕಣಿವೆಗಳಿಗೆ ಸಲಾಮ್

ಲಿಡರ್ ನದಿ ತಟದಲ್ಲಿ ಕುರಿಗಳು ಸಾರ್ ಕುರಿಗಳು...



ಪೆಹಲ್ಗಾಮ್‌ನ ಹಸಿರು ಕಣಿವೆಯ ನೋಟ

ಹಿಮ ತೀಡುವ ಚಳಿ, ಕಣ್ಣು ಕೀಲಿಸಿಕೊಳ್ಳುವ ಹಸಿರು, ಲಿಡರ್ ನದಿ ತಟದಲ್ಲಿ ಅಡ್ಡಾಡುವ ಪೊಗದಸ್ತಾದ ಕುರಿಗಳ ಹಿಂಡು, ಮಧುಚಂದ್ರಕ್ಕೆ ಹೇಳಿ ಮಾಡಿಸಿದ ಕೊಲಹೊ... ಪೆಹೆಲ್ಗಾಮ್‌ನಲ್ಲಿ ಇವೆಲ್ಲವೂ ಇವೆ.

ಆರು ವ್ಯಾಲಿಯಲ್ಲಿ ಮಳೆಯಲಿ ಜೊತೆಯಲಿ

ಮಂಜುಳಾ ರಾಜ್

ಉತ್ತರ ಭಾರತದ ಜಮ್ಮು ಮತ್ತು ಕಾಶ್ಮೀರ ಇಡೀ ವಿಶ್ವದಲ್ಲೇ ಅತ್ಯಂತ ಸುಂದರ ಗಿರಿಧಾಮವೆನಿಸಿಕೊಂಡಿದೆ. ಕಾಶ್ಮೀರ ಎಂದಾಗ ಏನೋ ಆಕರ್ಷಣೆ. ಆದರೂ ಅಲ್ಲಿಗೆ ಹೋಗಲು ಒಂದು ರೀತಿಯ ಆತಂಕ, ಎಲ್ಲಿ ಯಾವಾಗ ಬಾಂಬುಗಳ ಸುರಿಮಳೆ ಆಗುತ್ತದೆಯೋ ಅಥವಾ ಯಾವುದಾದರೂ ವಿಧ್ವಂಸಕ ಕೃತ್ಯ ನಡೆಯುತ್ತದೆಯೋ ಎನ್ನುವ ಭಯ. ಈಗ ಅಲ್ಲಿ ರಕ್ಷಣಾ ಕಾರ್ಯ ಚೆನ್ನಾಗಿರುವುದರಿಂದಲೋ ಏನೋ ಹೆಚ್ಚಿನ ಸಂಖ್ಯೆಯಲ್ಲಿ ಜನ ಪ್ರವಾಸ ಹೋಗುತ್ತಿದ್ದಾರೆ. ಕಾಶ್ಮೀರದಲ್ಲಿ ಎಲ್ಲಿ ಹೋದರೂ ಪ್ರವಾಸಿಗರ ದಂಡು ಕಾಣುತ್ತದೆ. ಕಾಶ್ಮೀರದ ತುಂಬಾ ಪೂರ್ಣವಾಗಿ ಹಸಿರು ಹಿಮಾಚ್ಛಾದಿತ ಶಿಖರಗಳು ಆವರಿಸಿಕೊಂಡಿವೆಯಾದರೂ ಅಲ್ಲಿನ ಮುಖ್ಯ ಪ್ರವಾಸಿ ಆಕರ್ಷಣೆಯಾದ ಪೆಹೆಲ್ಗಾಮ್ ಅತ್ಯಂತ ಸುಂದರ ತಾಣ.

7200 ಅಡಿ ಎತ್ತರದಲ್ಲಿರುವ ಈ ಸ್ಥಳವನ್ನು ಕುರುಬರ ತಾಣವೆಂದು ಕರೆಯಲಾಗುತ್ತದೆ. ಅನಂತನಾಗ್ ಜಿಲ್ಲೆಯ ಈಶಾನ್ಯ ದಿಕ್ಕಿನಲ್ಲಿ ಲಿಡರ್ ನದಿಯ ದಡದಲ್ಲಿದಲ್ಲಿರುವ ಈ ಸ್ಥಳ ಕುರಿಗಳ ಆವಾಸಸ್ಥಾನವಾಗಿರುವುದರಿಂದ ಈ ಹೆಸರು ಬಂದಿರಬಹುದು. ಇಲ್ಲಿನ ಕುರಿಗಳು ಮೈ ತುಂಬಾ ಉಣ್ಣೆ ತುಂಬಿಕೊಂಡು ದಷ್ಟಪುಷ್ಟವಾಗಿ ಕಾಣುತ್ತವೆ. ಅಲ್ಲಲ್ಲಿ ಕುರಿಗಳ ಹಿಂಡೂ ಕಾಣಸಿಗುತ್ತವೆ. ಎತ್ತರದಲ್ಲಿ ಇರುವುದರಿಂದಲೋ ಏನೋ ಎಲ್ಲಿ ನೋಡಿದರೂ ಹಸಿರೇ ಹಸಿರು. ಇಲ್ಲಿನ ಮತ್ತೊಂದು ಸುಂದರ ತಾಣವೆಂದರೆ ತುಲಿಯಾನ್ ಸರೋವರ. ಇದು ಸಾಮಾನ್ಯವಾಗಿ ಹಿಮದಿಂದ ಹೆಪ್ಪುಗಟ್ಟಿರುತ್ತದೆ ಅಥವಾ ಹಿಮದ ತುಂಡುಗಳು ಸರೋವರದಲ್ಲಿ ತೇಲಾಡುತ್ತಿರುತ್ತವೆ. ಚಳಿಗಾಲದಲ್ಲಿ ಪೆಹಲ್ಗಾಮ್ ನೋಡಲು ಮತ್ತೂ ಚೆನ್ನ. ಅಲ್ಲಿನ ಚಳಿ ತಡೆಯುವಷ್ಟು ಶಕ್ತಿ ಇರಬೇಕಷ್ಟೆ. ಪೆಹೆಲ್ಗಾಮ್‌ನ ತುಂಬಾ ಹಸಿರು ಕಣಿವೆಗಳಿವೆ. ಒಂದಕ್ಕಿಂತ ಒಂದು ಸುಂದರ. ಪ್ರಕೃತಿಮಾತೆ ಹಸಿರು ಸೀರೆಯನ್ನುಟ್ಟು ಅದರ ಮೇಲೆ ಹೊಳೆಯುವ ಹಿಮ ಮಣಿಗಳನ್ನು ಪೋಣಿಸಿಕೊಂಡಂತೆ ಅವು ಭಾಸವಾಗುತ್ತವೆ.

ಆರು ವ್ಯಾಲಿಯಲ್ಲಿ ಸ್ಕೀಯಿಂಗ್

ಇದು ಪೆಹಲ್ಗಾಮ್‌ನ ಪ್ರಸಿದ್ಧ ಹಸಿರು ಕಣಿವೆ. ಪೆಹಲ್ಗಾಮ್‌ನಿಂದ 12 ಕಿಲೋಮೀಟರ್ ದೂರವಿದೆ. ಅಲ್ಲಿಗೆ ಹೋಗಲು ಕೇವಲ 30 ನಿಮಿಷಗಳು ಸಾಕು. ಒಳಗೆ ಹೋಗಲು ಯಾವುದೇ ಶುಲ್ಕವಿಲ್ಲ. ಇಲ್ಲಿನ ಹಚ್ಚ ಹಸುರಿನ ಹುಲ್ಲುಗಾವಲುಗಳು, ಪ್ರಾಚೀನ ಸರೋವರಗಳು, ಹಿಮಾಚ್ಛಾದಿತ ಪರ್ವತಗಳು ಹೆಸರುವಾಸಿಯಾಗಿವೆ. ಕೊಲಾಹೊಯ್ ಹಿಮ ಪರ್ವತದ ಸುಂದರ ನೋಟದ ಜೊತೆ ಅನೇಕ ಚಟುವಟಿಕೆಗಳ ತಾಣವೂ ಹೌದು. ನದಿ ಚಾರಣಕ್ಕೆ ಹೇಳಿ ಮಾಡಿಸಿದ ಸ್ಥಳ. ಸ್ಕೀಯಿಂಗ್ ಮತ್ತು ಹೆಲಿಸ್ಕೀಯಿಂಗ್ ಇಲ್ಲಿನ ಜನಪ್ರಿಯ ಕ್ರೀಡೆಯೆನಿಸಿಕೊಂಡಿದೆ. ಕುದುರೆ ಸವಾರಿ ಇಲ್ಲಿನ ಒಂದು ಮುಖ್ಯ ಹಾಗೂ ಜನಪ್ರಿಯ ಚಟುವಟಿಕೆ. ಈ ತಾಣದಲ್ಲಿ ಬಹಳ ಸುಂದರವಾದ ದೊಡ್ಡ ತೆರೆದ ಉದ್ಯಾನವಿದೆ, ಸುತ್ತಲೂ ಹಸಿರು ಬೆಟ್ಟಗಳಿವೆ. ಈ ಸುಂದರ ನೈಸರ್ಗಿಕ ತಾಣದಲ್ಲಿ, ಪ್ರಕೃತಿಯ ಮಡಿಲಿನಲ್ಲಿ ಕಾಲ ಕಳೆಯುವುದೇ ಗೊತ್ತಾಗದು. ಆರು ವನ್ಯಧಾಮಗಳಲ್ಲಿ ಕಂದು ಬಣ್ಣದ ಹಿಮ ಕರಡಿಗಳು ಮತ್ತು ಕಸ್ತೂರಿ ಜಿಂಕೆ [ಮಸ್ಕ ಡೀರ್] ನೋಡಲು ಸಿಗುತ್ತವೆ ಎನ್ನುತ್ತಾರೆ; ನಮಗಂತೂ ಸಿಗಲಿಲ್ಲ.

ಬೈಸರನ್ ವ್ಯಾಲಿಯ ಫರ್ ವೃಕ್ಷ ವೈಭವ

ಇದನ್ನು ಮಿನಿ ಸ್ವಿಟ್ಜರ್‌ಲ್ಯಾಂಡ್ ಎಂದೂ ಕರೆಯುತ್ತಾರೆ. ಅಲ್ಲಿದ್ದಂತೆ ಮಂದ ಬೆಟ್ಟದ ತುದಿಗಳು ಇಲ್ಲಿಯೂ ಇವೆ. ಪೆಹಲ್ಗಾಮ್‌ನಿಂದ ಐದು ಕಿಲೋಮೀಟರ್ ದೂರ ಇದೆ ಅಷ್ಟೆ. ಬೆಳಿಗ್ಗೆ ಬೇಗ ಹೊರಟರೆ ಆದಷ್ಟು ಹೆಚ್ಚು ಹಸಿರು ಹಿಮಾಚ್ಛಾದಿತ ಕಣಿವೆಗಳನ್ನು ನೋಡಬಹುದು. ಈ ಕಣಿವೆಯೂ ತುಂಬಾ ಸುಂದರವಾಗಿದೆ. ಎತ್ತರದ ಬೆಟ್ಟಗಳನ್ನು ಆವರಿಸಿದ ಹಸಿರು ಹುಲ್ಲುಗಾವಲುಗಳು , ಅಲ್ಲಿನ ಸ್ವಚ್ಛ ಸರೋವರಗಳು, ಕಣ್ಣಿಗೆ ತಂಪೆನಿಸುತ್ತದೆ. ಪೈನ್, ಸೆಡಾರ್,ಮತ್ತು ಫರ್ ವೃಕ್ಷಗಳಿಂದ ಆವೃತವಾದ ಸುಂದರ ಮತ್ತು ಪವಿತ್ರ ಬೈಸರನ್ ಕಣಿವೆ ಪೆಹೆಲ್ಗಾಮ್‌ನ ಅತ್ಯಂತ ಸುಂದರ ತಾಣವೆಂದು ಪ್ರಸಿದ್ಧವಾಗಿದೆ. ನಿಮಗೆ ಆಸಕ್ತಿ ಮತ್ತು ಧೈರ್ಯ ಇದ್ದರೆ ಕುದುರೆಯ ಮೇಲೂ ಸವಾರಿ ಮಾಡಬಹುದು.

ಬೇತಾಬ್ ಸಿನಿಮಾದಿಂದ ಪಡೆದ ಹೆಸರು

ಇಲ್ಲಿಯ ಮತ್ತೊಂದು ಸುಂದರ ಕಣಿವೆ ಬೇತಾಬ್ ವ್ಯಾಲಿ ಅರ್ಥಾತ್ ಕಣಿವೆ. ಪೆಹೆಲ್ಗಾಮ್‌ನ ಈಶಾನ್ಯ ಪ್ರದೇಶದಲ್ಲಿರುವ ಈ ಕಣಿವೆಯಲ್ಲಿ ಖ್ಯಾತ ಚಲನಚಿತ್ರ 'ಬೇತಾಬ್' ಚಿತ್ರೀಕರಣವಾಗಿರುವುದರಿಂದಲೇ ಈ ಹೆಸರು ಬಂದಿತೆನ್ನುತ್ತಾರೆ. ವಿಸ್ತಾರವಾದ ಸೊಂಪಾದ ಹುಲ್ಲುಗಾವಲುಗಳು, ಹಿಮಾಚ್ಛಾದಿತ ಶಿಖರಗಳು, ಅಂಕು ಡೊಂಕಾಗಿ ತನ್ನದೇ ಹರಿವಿನಲ್ಲಿ ಸಾಗುವ ನದಿಗಳು ಕಣಿವೆಯ ಸೌಂದರ್ಯಕ್ಕೆ ಇಂಬು ಕೊಡುತ್ತದೆ. ಟ್ರೆಕ್ಕಿಂಗ್ ಮಾಡುವವರಿಗಂತೂ ಸ್ವರ್ಗವೇ ಸರಿ. ಮಧುಚಂದ್ರದ ದಂಪತಿಗಳಿಗೆ ಹೇರಳವಾಗಿ ಮಧು ಹಾಗೂ ಚಂದ್ರನ ಹೊಂಬೆಳಕು ಲಭ್ಯ. ಬೇತಾಬ್ ಕಣಿವೆಯ ಪಕ್ಕ ಲಿಡರ್ ನದಿ ಹರಿಯುತ್ತದೆ. ವಾಹನದಲ್ಲಿ ಸಾಗುವಾಗ ನಮ್ಮ ರಸ್ತೆಯ ಪಕ್ಕಕ್ಕೆ ನಮ್ಮ ಜೊತೆಯಲ್ಲೇ ಲಿಡರ್ ನದಿ ಜುಳು ಜುಳು ಸದ್ದು ಮಾಡುತ್ತಾ ಸಾಗುತ್ತದೆ. ಪರ್ವತದ ಸಾಲಿನಿಂದ ತುಲೈನ್ ಸರೋವರ ಹರಿಯುತ್ತದೆ ಆದರೆ ಬಹಳಷ್ಟು ಬಾರಿ ಅದು ಹಿಮಾವೃತವಾಗಿರುತ್ತದೆ. ಪೆಹಲ್ಗಾಮ್ ತನ್ನ ನೈಸರ್ಗಿಕ ಸೌಂದರ್ಯಕ್ಕೆ ಪ್ರಸಿದ್ಧ. ನೋಡಿದಷ್ಟೂ ಮತ್ತೆ ನೋಡಬೇಕೆನಿಸುವಷ್ಟು ಸುಂದರ ದೃಶ್ಯಗಳು. ಎತ್ತರದ ಹಸಿರು ಬೆಟ್ಟಗಳ ಪಕ್ಕ ಚಿನಾರ್, ಪೈನ್ ಮತ್ತು ಫರ್ ವೃಕ್ಷಗಳು ಎತ್ತರದ ಬೆಟ್ಟಗಳನ್ನು ಆವರಿಸಿರುವ ಹಿಮದ ವೈಭವ, ಹಸಿರು ಬೆಟ್ಟಗಳಿಗೆ ಶ್ವೇತ ವರ್ಣದ ಹೊಳೆಯುವ ಚಾದರವನ್ನು ಹೊದಿಸಿದಂತೆ ಕಾಣುತ್ತದೆ. ಹೈಕಿಂಗ್, ಟ್ರೆಕ್ಕಿಂಗ್, ಮತ್ತು ಫಿಶಿಂಗ್ ಮಾಡುವವರಿಗೆ ಒಳ್ಳೆಯ ಅವಕಾಶ. ಈ ಪರ್ವತದ ಸಾಲಿನಿಂದ ಹಿಂದೂಗಳ ಪವಿತ್ರ ಅಮರನಾಥ್ ದೇವಾಲಯದತ್ತ ಸಾಗುವ ಹಾದಿಯೂ ಸಿಗುತ್ತದೆ.

ಮಧುಚಂದ್ರಕ್ಕೆ ಕೊಲಹೊ

ಚಾರಣಿಗರಿಗೆ ಇದು ಸುಂದರ ತಾಣ. 18000 ಮೀಟರ್ ಎತ್ತರಕ್ಕೆ ಏರುವುದು ಸುಲಭವಲ್ಲವಾದರೂ ತಲುಪಿದ ನಂತರದ ದೃಶ್ಯ ನೋಡಲು ಕಣ್ಣುಗಳೆರಡು ಸಾಲದು. ದಟ್ಟ ಹಸಿರು ಪರ್ವತ ಮತ್ತು ಹಸಿರು ಅರಣ್ಯಮಾರ್ಗ, ಸುತ್ತಲೂ ಆವರಿಸಿರುವ ಹಿಮಾಚ್ಛಾದಿತ ಪರ್ವತದ ಸಾಲುಗಳು, ತಣ್ಣಗೆ ಕೊರೆಯುವ ಸದ್ದು ಮಾಡುತ್ತಾ ಗಮನ ಸೆಳೆಯುವ ಲಿಡರ್ ನದಿ... ಈ ಎಲ್ಲವೂ ಮಧುಚಂದ್ರಕ್ಕೆ ಬಂದ ದಂಪತಿಗಳಿಗೆ ಹೇಳಿ ಮಾಡಿಸಿದಂತಹ ತಾಣವೆನ್ನಬಹುದು.

ಚಂದನವಾರಿ ಕಣಿವೆ

ಇವೆಲ್ಲಕ್ಕಿಂತ ಮತ್ತೊಂದು ಗಮನ ಸೆಳೆಯುವ ಕಣಿವೆ ಚಂದನವಾರಿ. ಇದನ್ನು ತೋರಿಸಲು ಅಲ್ಲಿನ ಗೈಡುಗಳಿಗೆ ಬಹಳ ಕಾತರ. ಇಲ್ಲಿಗೆ ಕುದುರೆಯ ಮೇಲೆಯೇ ಹೋಗಬೇಕು. ಅದು ನಿಜಕ್ಕೂ ದುಬಾರಿ. ಅದಕ್ಕಿಂತಾ ಹೆಚ್ಚಾಗಿ ಭಯವೂ ಹೌದು, ಅದರಲ್ಲೂ ಮೊದಲ ಸಲ ಕುದುರೆಯ ಮೇಲೆ ಕುಳಿತುಕೊಳ್ಳುವವರಿಗೆ ಭಯವೋ ಭಯ. ಆ ಕುದುರೆಗಳು ಕಣಿವೆಯ ಪಕ್ಕಕ್ಕೆ ಸಾಗುತ್ತವೆ. ಪಕ್ಕದಲ್ಲೇ ಪ್ರಪಾತ ಆದರೆ ಅವು ಹೋಗುವುದು ತುದಿಯಲ್ಲೇ. ಅಭ್ಯಾಸವಿಲ್ಲದವರು ಮತ್ತು ಸ್ವಲ್ಪ ವಯಸ್ಸಾದವರು ಹೋಗದಿರುವುದೇ ವಾಸಿ. ದಿನವೂ ಒಬ್ಬರಿಬ್ಬರಾದರೂ ಬೀಳುತ್ತಾರೆ ಮತ್ತು ನಂತರದ ಕಥೆ ಕೇಳಬೇಡಿ. ಇದು ಅಮರನಾಥ ಯಾತ್ರೆಗೆ ಹೋಗುವ ಪ್ರಾರಂಭಿಕ ಹಂತ. ಆದರೆ ಈಗ ಅಲ್ಲಿಗೆ ಬಹಳಷ್ಟು ಜನ ಹೆಲಿಕಾಪ್ಟರಿನಲ್ಲೇ ಹೋಗುತ್ತಾರೆ. ಕುದುರೆಯ ಮೇಲಿನ ಪ್ರಯಾಣ ಸ್ವಲ್ಪ ಕಷ್ಟವೇ ಸರಿ. ಈ ಕಣಿವೆಯನ್ನು ತಲುಪುವುದು ತ್ರಾಸದಾಯಕವಾದರೂ ತಲುಪಿದ ಮೇಲೆ ಕಾಣುವ ದೃಶ್ಯ ರಾಶಿಯ ಸೊಬಗು ಬಣ್ಣಿಸಲಸದಳ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ವಂಶವಾಹಿನಿ ಸಂಖ್ಯೆಗಳು

$12^2=144$ ಮತ್ತು $132^2=17424$

$18^2=324$ ಮತ್ತು $192^2=39204$

$19^2=361$ ಮತ್ತು $199^2=39601$

$9^2=81$ ಮತ್ತು $99^2=9801$

$9^3=729$ ಮತ್ತು $99^3=970299$

$9^5=59049$ ಮತ್ತು $99^5=9509900499$

ಇಲ್ಲಿಯ ಗುಣಲಕ್ಷಣಗಳೆಂದರೆ, ತಂದೆ ತಾಯಿಯರ ವರ್ಣ ತಂತುಗಳು ವಂಶವಾಹಿನಿಯಾಗಿ ತಮ್ಮ ಮಕ್ಕಳಲ್ಲಿ ಹರಿದು ಬರುವಂತೆ ಈ ಸಂಖ್ಯೆಗಳ ಘಾತಸಂಖ್ಯೆಗಳ ವಿಸ್ತೀರ್ಣದಲ್ಲಿ ಕಾಣಬಹುದಾಗಿದೆ.

ಮುತ್ತಿನಂಥ ಮಾತು

ನಾಚಿಕೆ ಎಂಬ ಶಬ್ದ ಹುಟ್ಟದಿದ್ದರೆ ಮಾನವನ ಸ್ಥಿತಿ ಇನ್ನೂ ಹೀನಾಯ ಸ್ಥಿತಿಯಲ್ಲಿರುತ್ತಿತ್ತು. ಕಾನೂನಿನಿಂದ ನಿರ್ಬಂಧಿಸಲಾಗದ ಎಷ್ಟೋ ಸಮಸ್ಯೆಗಳನ್ನು ಈ ನಾಚಿಕೆಯು ನಿರ್ಬಂಧಿಸಬಲ್ಲದು!

A ಟು Z ಪದಬಂಧ

ಇಲ್ಲಿ ಕೇವಲ 26 ಇಂಗ್ಲಿಷ್ ಮೂಲಾಕ್ಷರ ಬಳಸಿಕೊಂಡು ಒಂದು ಪದಬಂಧ ರಚಿಸಲಾಗಿದೆ

	Q				V
J	U	G		D	O
	I		Z		L
	C	R	A	F	T
	K		X		S
W	E	B			
	N	Y	M	P	H

ಜಾಣಪದ ಆಟ

ಇಲ್ಲಿ ಮಧ್ಯದಲ್ಲಿ ಒಂದಕ್ಷರ ಹಾಗೂ ಅದರ ಆಚೀಚೆ ಅನುಸ್ವಾರ ಕೊಟ್ಟಿದೆ. ನೀವು ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡಕ್ಷರ ಆರಿಸಿ ಅವುಗಳ ಆಚೀಚೆ ತುಂಬಿ ಅರ್ಥಬದ್ಧ ಪದ ರಚಿಸಬಲ್ಲಿರಾ?

ಅ	ಡ	ಅ	ಜು	ಧ	ಗ	ಸ
ಪಿ	ಪ	ನ	ಸ	ಶ	ಗ	ತಿ

1		ಂ	ಗಾ	ಂ	
2		ಂ	ಚಾ	ಂ	
3		ಂ	ಬ	ಂ	
4		ಂ	ಡಾ	ಂ	
5		ಂ	ಗಾ	ಂ	
6		ಂ	ಕ್ರಾ	ಂ	
7		ಂ	ಜು	ಂ	

ಗುಬ್ಬಚ್ಚಿ ಗೂಡಾದ ಪೋಸ್ಟ್ ಬಾಕ್ಸ್

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಮನೆಯ ಹತ್ತಿರ ಒಂದು ಪೋಸ್ಟ್ ಬಾಕ್ಸ್ ಇತ್ತು. ಎರಡು ದಿನಕ್ಕೊಮ್ಮೆ ಪೋಸ್ಟ್‌ಮ್ಯಾನ್ ಬಂದು ಆ ಬಾಕ್ಸ್‌ನಲ್ಲಿದ್ದ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಿದ್ದ. ಆ ಪೋಸ್ಟ್ ಬಾಕ್ಸ್ ಮೇಲೆ ಒಂದು ಗುಬ್ಬಚ್ಚಿ ಯಾವಾಗಲೂ ಕೂತಿರುತ್ತಿತ್ತು...

ಒಂದು ದಿನ ತನ್ನ ಗೆಳೆಯನನ್ನು ಮನೆಗೆ ಆಹ್ವಾನಿಸಲು ಗುಂಡ ಪತ್ರ ಬರೆದ. ಗೆಳೆಯನೊಂದಿಗೆ ಪ್ರವಾಸ ಹೋಗುವ ಯೋಚನೆ ಗುಂಡನದ್ದಾಗಿತ್ತು. ಬರೆದ ಪತ್ರವನ್ನು ಲಕೋಟೆಯಲ್ಲಿ ಹಾಕಿ ಪೋಸ್ಟ್ ಬಾಕ್ಸ್‌ನತ್ತ ಹೆಜ್ಜೆ ಹಾಕಿದ. ಅಲ್ಲೊಂದು ಗುಬ್ಬಚ್ಚಿ ಕೂತಿರುವುದನ್ನು ದೂರದಿಂದಲೇ ಗುಂಡ ಗಮನಿಸಿದ...

ಪೋಸ್ಟ್ ಬಾಕ್ಸ್ ಸಮೀಪಿಸುತ್ತಿದ್ದಂತೇ ಬಾಕ್ಸ್ ಒಳಗಿಂದ ಜೋರಾದ ಸದ್ದು ಕೇಳುತ್ತಿತ್ತು. ಇದನ್ನು ಕೇಳಿಸಿಕೊಂಡ ಗುಂಡ ಒಂದು ಕ್ಷಣ ಬೆಚ್ಚಿಬಿದ್ದ. ಮೆಲ್ಲನೆ ಹೋಗಿ ಬಾಕ್ಸ್ ಮುಟ್ಟಿ ಅದರೊಳಗೇನಿದೆ ಎಂದು ಯೋಚಿಸತೊಡಗಿದ.

ಆ ಕ್ಷಣದಲ್ಲೇ ಬಾಕ್ಸ್ ಒಳಗೆ ಗೂಡುಕಟ್ಟಿಕೊಂಡಿದ್ದ ಗುಬ್ಬಚ್ಚಿಗಳ ಹಿಂಡು ಚಿಂವ್ ಚಿಂವ್ ಸದ್ದು ಮಾಡುತ್ತಾ ಹೊರ ಹಾರಿದವು. ಗುಂಡ ಗಾಬರಿಯಿಂದ ಓಡಿದ.

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1.ಹಳೆಬಿಲ್ಲು:________

2.ನಾಡುಕಾಯಿ:________

3.ಮಾನವರ ಹಿತ:________

4.ಮಾರಿಗುಡಿ:________

ಪುಟಾಣಿ ಪದಬಂಧ

					ಸುಳಿವು
1			ಪ	ಡಿ	ಪಡಿ ಕಾಳು ಸ್ವೀಕರಿಸಿ ಮಾಡಿದ ಬದಲಾವಣೆ
2			ವಾ	ರ	ವಾರಕ್ಕೊಮ್ಮೆ ಬರುವ ತನ್ನ ಸಂಬಂಧಿಕರು
3			ಗು	ಡಿ	ಗುಡಿಯಲ್ಲಿ ಸಿಕ್ಕ ತಂಬಾದು ಸೇದುವ ಚಿಲುಮೆ
4			ಕಾ	ರ	ಕಾರನ್ನು ತೊಳೆಯುವ ಯಂತ್ರ
5			ಕಿ	ರಿ	ಕಿರಿಯರಿಗಾದ ತೊಂದರೆ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ:

1.ಚೆಲ್ಲಾಪಿಲ್ಲಿ 2.ಸಂಕ್ರಮಣ 3.ಮುಜುಗರ 4.ಭಾನಗಡಿ 5.ಆಭರಣ

ಅದಲು ಬದಲು....:

1.ಜನರಬಲಿ 2.ಯಾರಗಡಿ 3.ಪಾಟಿಕವಚ 4.ಮಹಾಗುರು

ಊರು ನಿಮಗೆಷ್ಟು ಗೊತ್ತು:

1.ತಿರುಪತಿ 2.ಹರಿಹರ 3.ರಬಕವಿ 4.ಮಡಿಕೇರಿ 5.ಯಾದಗಿರಿ 6.ಅಳ್ನಾವರ 7.ಕಾರವಾರ 8.ಹರಿಯಾಣ 9.ರಾಯಚೂರ 10.ಶಹಪೂರ 11.ಚಿಂತಾಮಣಿ 12.ಮಣಿಪಾಲ 13.ಕುಂದಗೋಳ 14.ಕಾಗಿನೆಲೆ 15.ಚಳ್ಳಕೆರೆ 16.ಸಿರಿಗೆರೆ 17.ಹೊರನಾಡು 18.ಧರ್ಮಸ್ಥಳ 19.ಮೇಘಾಲಯ 20.ಹಳೆಬೀಡು

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಅಕ್ಷರ ಎಂ.ಎಸ್. ಮೈಸೂರು



ಸಾನ್ನಿಧ್ಯ .ಡಿ., ಶ್ರೀರಾಂಪುರ

ಹರ್ಷವರ್ಧನ್ ಕೆ.ಎಂ. ದಾವಣಗೆರೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ನಾಯಕ ಸುನಿಲ್ ಚೆಟ್ರಿ, ಮಹೇಶ್ ಸಿಂಗ್ ಮಿಂಚು: ನೇಪಾಳ ತಂಡಕ್ಕೆ ನಿರಾಶೆ

ಸ್ಯಾಫ್ ಫುಟ್‌ಬಾಲ್: ಸೆಮಿಗೆ ಭಾರತ

• ಗಿರೀಶ ದೊಡ್ಡಮನಿ

ಬೆಂಗಳೂರು: ಶನಿವಾರ ಮುಸ್ಸಂಜೆಯ ಮಳೆ ಮತ್ತು ತಂಪುಗಾಳಿಯನ್ನೂ ಲೆಕ್ಕಿಸದ ಫುಟ್‌ಬಾಲ್ ಪ್ರೇಮಿಗಳನ್ನು ಭಾರತ ತಂಡದ ಆಟಗಾರರು ನಿರಾಶೆಗೊಳಿಸಲಿಲ್ಲ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ಏಷ್ಯಾ ಫೆಡರೇಷನ್ ಫುಟ್‌ಬಾಲ್ (ಸ್ಯಾಫ್) ಟೂರ್ನಿಯ ಪಂದ್ಯದಲ್ಲಿ ಸುನಿಲ್ ಚೆಟ್ರಿ ಬಳಗವು 2–0 ಗೋಲುಗಳಿಂದ ನೇಪಾಳ ತಂಡದ ವಿರುದ್ಧ ಜಯಭೇರಿ ಬಾರಿಸಿತು. ಸತತ ಎರಡನೇ ಜಯ ಸಾಧಿಸಿದ ಭಾರತ ತಂಡವು ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟಿತು. 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಸಂಭ್ರಮಿಸಿದರು.

ಪಂದ್ಯದ ಮೊದಲ ಒಂದು ಗಂಟೆಯಲ್ಲಿ ಉಭಯ ತಂಡಗಳೂ ತುರುಸಿನ ಪೈಪೋಟಿ ನಡೆಸಿದವು. ಇದರಿಂದಾಗಿ ಎರಡೂ ತಂಡಗಳ ಖಾತೆಯಲ್ಲಿ ಗೋಲು ಇರಲಿಲ್ಲ. ಆದರೆ 61ನೇ ನಿಮಿಷದಲ್ಲಿ ಭಾರತದ ನಾಯಕ ಚೆಟ್ರಿ ಕಾಲ್ಚಳಕ ಮೆರೆದರು. ಭಾರತ ತಂಡದ ನವಪ್ರತಿಭೆ ಮಹೇಶ್ ಸಿಂಗ್ ನೀಡಿದ ಕ್ರಾಸ್ ಪಡೆದ ಚೆಟ್ರಿ ಶರವೇಗದಿಂದ ಚೆಂಡನ್ನು ಗುರಿ ಮುಟ್ಟಿಸಿದರು. ಎದುರಾಳಿ ಗೋಲ್ ಕೀಪರ್ ಕಿರಣಕುಮಾರ್ ಲಿಂಬು ಚೆಂಡು ತಡೆಯಲು ಚುರುಕಾಗಿ ಪ್ರಯತ್ನಿಸಿದರೂ ಚೆಟ್ರಿಯ ಕಿಕ್ ವೇಗಕ್ಕೆ ಸರಿಸಾಟಿಯಾಗಲಿಲ್ಲ. ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಇದು ಚೆಟ್ರಿ ಗಳಿಸಿದ 91ನೇ ಗೋಲು.

ಇದರಿಂದಾಗಿ ಒತ್ತಡಕ್ಕೊಳಗಾದ ನೇಪಾಳ ಆಟಗಾರರು ಮತ್ತಷ್ಟು ಆಕ್ರಮಣಶೀಲರಾಗಲು ಪ್ರಯತ್ನಿಸಿದರು. 63ನೇ ನಿಮಿಷದಲ್ಲಿ ಉಭಯ ತಂಡಗಳ ಆಟಗಾರರ ನಡುವೆ ಮಾತಿನ ಚಕಮಕಿ, ತಳ್ಳಾಟಗಳೂ ನಡೆದವು. ರೆಫರಿ ಮಧ್ಯಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು.

ಭಾರತ ತಂಡದ ರಾಹುಲ್ ಭೆಕೆ ಮತ್ತು ನೇಪಾಳದ ಬಿಮಲ್ ಮಗಾರ್ ಅವರು ಹಳದಿ ಕಾರ್ಡ್ ದರ್ಶನ ಕೂಡ ಪಡೆದರು.

ನೇಪಾಳ ವಿರುದ್ಧದ ಪಂದ್ಯದಲ್ಲಿ ಭಾರತ ತಂಡದ ನಾಯಕ ಸುನಿಲ್ ಚೆಟ್ರಿ (ಬಲ) ಅವರು ಗೋಲು ಹೊಡೆಯಲು ಪ್ರಯತ್ನಿಸಿದರು – ಪ್ರಜಾವಾಣಿ ಚಿತ್ರ/ರಂಜು ಪಿ.

1–0 ಮುನ್ನಡೆ ಪಡೆದ ಭಾರತದ ಆಟಗಾರರ ಆತ್ಮವಿಶ್ವಾಸ ಉತ್ತುಂಗದಲ್ಲಿತ್ತು. ಇದರಿಂದಾಗಿ ಪದೇ ಪದೇ ಗೋಲು ವಲಯದತ್ತ ಚೆಂಡನ್ನು ತೆಗೆದುಕೊಂಡು ಹೋಗುವಲ್ಲಿ ಯಶಸ್ವಿಯಾದರು. 70ನೇ ನಿಮಿಷದಲ್ಲಿ ಇದರ ಫಲ ಲಭಿಸಿತು. ಸಹಲ್ ಸಮದ್ ಕೊಟ್ಟ ಪಾಸ್ ಪಡೆದ ಚೆಟ್ರಿ ಕಿಕ್ ಮಾಡಿದರು. ಆದರೆ ಚೆಂಡು ಗೋಲ್ ಪೋಸ್ಟ್‌ನ ಕ್ರಾಸ್‌ಬಾರ್‌ಗೆ ಅಪ್ಪಳಿಸಿ ಮರಳಿತು.

ಆದರೆ ಅಲ್ಲಿಯೇ ಇದ್ದ ಮಹೇಶ್ ಗುರಿಮುಟ್ಟಿಸುವಲ್ಲಿ ಯಶಸ್ವಿಯಾದರು. ಎರಡು ಗೋಲುಗಳನ್ನು ಗೆಲುವಿನ ಮೆಟ್ಟಿಲಾಗಿಸಿಕೊಂಡರು. ಉಳಿದ ಅವಧಿಯಲ್ಲಿ ಸತತವಾಗಿ ಚೆಂಡನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ ಚೆಟ್ರಿ ಬಳಗವು ಯಶಸ್ವಿಯಾಯಿತು. ಮುಖ್ಯ ಕೋಚ್ ಇಗೋರ್ ಸ್ಟಿಮ್ಯಾಚ್ ಗೈರುಹಾಜರಿಯಲ್ಲಿ ಸಹಾಯಕ ಕೋಚ್ ಮಹೇಶ್ ಗಾವ್ಲಿ ಅವರು ಬದಲಿ ಆಟಗಾರರನ್ನು ಸಮರ್ಥವಾಗಿ ನಿಭಾಯಿಸಿದರು.

ಸಂಧು–ಲಿಂಬು ಪೈಪೋಟಿ: ಪಂದ್ಯದ ಮೊದಲಾರ್ಧವು ಉಭಯ ತಂಡಗಳ ಗೋಲು ಕೀಪರ್‌ಗಳ ಅಮೋಘ ಆಟದ ಕಣವಾಗಿತ್ತು. ಭಾರತದ ಅಗ್ರಮಾನ್ಯ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಮತ್ತು ನೇಪಾಳದ ಕಿರಣಕುಮಾರ್ ಲಿಂಬು ಅವರ ದಿಟ್ಟೆದೆಯ ಆಟದಿಂದಾಗಿ ಇಡೀ ಅವಧಿಯಲ್ಲಿ ಉಭಯ ತಂಡಗಳ ಖಾತೆಗೆ ಗೋಲು ದಾಖಲಾಗಲಿಲ್ಲ.

ಚೆಟ್ರಿ ಬಳಗವು ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿತು. ನೇಪಾಳ ಕೂಡ ಅದಕ್ಕೆ ತಕ್ಕ ತಂತ್ರಗಾರಿಕೆ ತೋರಿತು. 17ನೇ ನಿಮಿಷದಲ್ಲಿ ನೇಪಾಳದ ಅಲಿಕ್ ಬಿಷ್ಠ ಶೂಟ್ ಮಾಡಿದ ಚೆಂಡನ್ನು ತಡೆಯುವಲ್ಲಿ ಸಂಧು ಯಶಸ್ವಿಯಾದರು. 32ನೇ ನಿಮಿಷದಲ್ಲಿ ಭಾರತಕ್ಕೆ ಫ್ರೀ ಕಿಕ್ ಲಭಿಸಿತ್ತು. ಚೆಟ್ರಿ ಒದ್ದ ಚೆಂಡನ್ನು ತಡೆದ ನೇಪಾಳದ ಡಿಫೆಂಡರ್ ಅನಂತ ತಮಾಂಗ್ ಅಪಾಯವನ್ನು ತಪ್ಪಿಸಿದರು. ವಿರಾಮಕ್ಕೆ ಕೆಲವೇ ಸೆಕೆಂಡುಗಳ ಆಟ ಬಾಕಿಯಿದ್ದಾಗ ಚೆಟ್ರಿ ಒದ್ದ ಚೆಂಡನ್ನು ಡೈವ್ ಮಾಡಿ ಹಿಡಿತಕ್ಕೆ ಪಡೆದ ಲಿಂಬು ಗೋಲಿನ ಅಪಾಯ ತಪ್ಪಿಸಿದರು. ಇದರಿಂದಾಗಿ ಮೊದಲಾರ್ಧ ಗೋಲಿಲ್ಲದೇ ಕಳೆಯಿತು.

ಇಂದಿನ ಪಂದ್ಯಗಳು
ಬಾಂಗ್ಲಾದೇಶ– ಮಾಲ್ದೀವ್ಸ್ (ಮ. 3.30)
ಭೂತಾನ್– ಲೆಬನಾನ್ (ರಾತ್ರಿ 7.30)

ಆಯ್ಕೆ ಸಮಿತಿಗೆ ಗಾವಸ್ಕರ್ ತರಾಟೆ

ಪೂಜಾರ ಕೈಬಿಟ್ಟಿದ್ದಕ್ಕೆ, ಸರ್ಫರಾಜ್ ಕಡೆಗಣನೆಗೆ ಆಕ್ಷೇಪ

ನವದೆಹಲಿ (ಪಿಟಿಐ): ಬಿಸಿಸಿಐ ಆಯ್ಕೆಸಮಿತಿಯು ಚೇತೇಶ್ವರ ಪೂಜಾರ ಅವರನ್ನು 'ಬಲಿಪಶು'ವನ್ನಾಗಿ ಮಾಡಿದೆ ಮತ್ತು ದೇಶಿ ಕ್ರಿಕೆಟ್‌ನಲ್ಲಿ ರನ್ನುಗಳನ್ನು ಹರಿಸಿರುವ ಸರ್ಫರಾಜ್ ಖಾನ್ ಅವರನ್ನು ಕಡೆಗಣಿಸಿದೆ ಎಂದು ಭಾರತ ತಂಡದ ಮಾಜಿ ನಾಯಕ ಸುನೀಲ್ ಗಾವಸ್ಕರ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವೆಸ್ಟ್ ಇಂಡೀಸ್ ಪ್ರವಾಸ ಕೈಗೊಳ್ಳುವ ಟೆಸ್ಟ್ ಮತ್ತು ಏಕದಿನ ತಂಡವನ್ನು ಶುಕ್ರವಾರ ಆಯ್ಕೆ ಸಮಿತಿ ಪ್ರಕಟಿಸಿತ್ತು.

ಸರ್ಫರಾಜ್ ಅವರನ್ನು ಕೈಬಿಟ್ಟಿರುವುದರ ಬಗ್ಗೆ ಪ್ರಸ್ತಾಪಿಸಿದ ಅವರು, ಟೆಸ್ಟ್ ತಂಡದ ಆಯ್ಕೆ ವೇಳೆ ದೇಶಿಯ ಕ್ರಿಕೆಟ್‌ನ ಅತ್ಯುನ್ನತ ಟೂರ್ನಿಯಾದ ರಣಜಿ ಟ್ರೋಫಿಯಲ್ಲಿ ತೋರುವ ಸಾಧನೆಯನ್ನು ಪರಿಗಣಿಸದೇ ಇರುವುದರ ಹಿಂದಿನ ತರ್ಕ ಏನು ಎಂದು ಪ್ರಶ್ನಿಸಿದ್ದಾರೆ.

'ಕಳೆದ ಮೂರು ಋತುಗಳಲ್ಲಿ ಸರ್ಫರಾಜ್ ಅವರು 100ಕ್ಕೂ ಹೆಚ್ಚು ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ತಂಡಕ್ಕೆ ಆಯ್ಕೆಯಾಗಲು ಅವರು ಇದಕ್ಕಿಂತ ಹೆಚ್ಚು ಇನ್ನೇನು ಮಾಡಬೇಕು? ಅವರಿಗೆ ಆಡುವ 11ರಲ್ಲಿ ಸ್ಥಾನ ಕೊಡದಿದ್ದರೂ, ತಂಡಕ್ಕೆ ತೆಗೆದುಕೊಳ್ಳಬಹುದಲ್ಲವೇ' ಎಂದು ಗಾವಸ್ಕರ್ ಕ್ರೀಡಾ ಪತ್ರಿಕೆಯೊಂದರ ಜೊತೆ ಸಂದರ್ಶನದ ವೇಳೆ ಕೇಳಿದ್ದಾರೆ.

2022–23ನೇ ಋತುವಿನಲ್ಲಿ ಸರ್ಫರಾಜ್ ಅವರು ರಣಜಿ ಟ್ರೋಫಿ ಪಂದ್ಯಗಳಲ್ಲಿ ಮೂರು ಶತಕಗಳನ್ನು ಒಳಗೊಂಡಂತೆ 92.66 ಸರಾಸರಿಯಲ್ಲಿ 556 ರನ್‌ಗಳನ್ನು ಪೇರಿಸಿದ್ದರು. 25 ವರ್ಷದ ಈ ಬ್ಯಾಟರ್ 2021–22ನೇ ಋತುವಿನಲ್ಲಿ 122.75 ಸರಾಸರಿಯಲ್ಲಿ 982 ರನ್ ಗಳಿಸಿದ್ದರು.

ಸುನಿಲ್ ಗಾವಸ್ಕರ್

ಮುಂಬೈನ ಈ ಆಟಗಾರ ಒಟ್ಟಾರೆ 37 ಪ್ರಥಮ ದರ್ಜೆ ಪಂದ್ಯಗಳಲ್ಲಿ 79.65 ಸರಾಸರಿಯಲ್ಲಿ 3,505 ರನ್ ಗಳಿಸಿ ಗಮನ ಸೆಳೆದಿದ್ದಾರೆ.

ಪೂಜಾರ ಅವರನ್ನು ಕೈಬಿಟ್ಟಿದ್ದಕ್ಕೂ 'ಸನ್ನಿ' ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ರೀತಿ ಭಾರತ ತಂಡದ ಸ್ಟಾರ್ ಆಟಗಾರರಿಗಿರುವಂತೆ ಅವರಿಗೆ (ಪೂಜಾರ) ಕೋಟಿಗಟ್ಟಲೆ ಫಾಲೋವರ್‌ಗಳಿಲ್ಲದೇ ಇರಬಹುದು. ಆದರೆ ಇದು ಯಾರನ್ನೂ ಕೈಬಿಡಲು ಕಾರಣವಾಗಬಾರದು' ಎಂದಿದ್ದಾರೆ.

'ಭಾರತ ತಂಡದ ಬ್ಯಾಟಿಂಗ್ ವೈಫಲ್ಯಕ್ಕೆ ಅವರೊಬ್ಬರನ್ನು ಬಲಿಪಶು ಮಾಡಲಾಗುತ್ತಿದೆ. ಅವರು ಭಾರತ ತಂಡದ ನಿಷ್ಠಾವಂತ ಸೇವಕ. ಸಮರ್ಥ ಸಾಧಕ. ಸಾಮಾಜಿಕ ಮಾಧ್ಯಮಗಳಲ್ಲಿ ಕೋಟ್ಯಂತರ ಫಾಲೋವರ್‌ಗಳಿಲ್ಲದೇ ಇರುವುದರಿಂದ ಅವರನ್ನು ಕೈಬಿಟ್ಟರೆ ಏನೂ ಆಗದೆಂದು ಈ ರೀತಿ ಮಾಡುವುದು ಸರಿಯೇ? ಇದು ಗ್ರಹಿಕೆಗೆ ನಿಲುಕದ್ದು' ಎಂದು ಹೇಳಿದ್ದಾರೆ.

ಪೂಜಾರ ಅಭ್ಯಾಸ

ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್ ಪ್ರವಾಸಕ್ಕೆ ತೆರಳಲಿರುವ ಭಾರತ ಟೆಸ್ಟ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆಯದ ಬ್ಯಾಟರ್ ಚೇತೇಶ್ವರ್ ಪೂಜಾರ ಶನಿವಾರ ನೆಟ್ಸ್‌ನಲ್ಲಿ ಅಭ್ಯಾಸ ಆರಂಭಿಸಿದರು.

ಟೆಸ್ಟ್ ಪರಿಣತ ಬ್ಯಾಟರ್ ಪೂಜಾರ ಅವರು ತಾವು ಬ್ಯಾಟಿಂಗ್ ಅಭ್ಯಾಸ ಮಾಡಿದ ವಿಡಿಯೊ ತುಣುಕನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ.

ಅವರು ಈಚೆಗೆ ಡಬ್ಲ್ಯುಟಿಸಿ ಫೈನಲ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಮುಂದಿನ ತಿಂಗಳು ವಿಂಡೀಸ್‌ನಲ್ಲಿ ಭಾರತವು ಟೆಸ್ಟ್ ಸರಣಿ ಆಡಲಿದೆ. ಶುಕ್ರವಾರ ಪ್ರಕಟವಾದ ಈ ತಂಡದ ಪಟ್ಟಿಯಲ್ಲಿ ಪೂಜಾರ ಅವರ ಹೆಸರಿಲ್ಲ. ಅದರಿಂದಾಗಿ ಪೂಜಾರಗೆ ಅಂತರರಾಷ್ಟ್ರೀಯ ಕ್ರಿಕೆಟ್ ಅವಕಾಶಗಳು ಮುಗಿದವು ಎಂಬ ಸುದ್ದಿಗಳು ಹರಿದಾಡುತ್ತಿವೆ.

'ತಂಡಕ್ಕೆ ಆಯ್ಕೆ: ಅಪ್ಪನ ಆನಂದಭಾಷ್ಪ'

ಮುಂಬೈ (ಪಿಟಿಐ): 'ಟೆಸ್ಟ್ ತಂಡಕ್ಕೆ ನಾನು ಆಯ್ಕೆಯಾದ ಸುದ್ದಿ ತಿಳಿದು ಅಪ್ಪ ಆನಂದಭಾಷ್ಪ ಸುರಿಸಿದರು..'

ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರ ಭಾವುಕ ನುಡಿಗಳಿವು. ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡುವ ಭಾರತ ತಂಡಕ್ಕೆ ಜೈಸ್ವಾಲ್ ಆಯ್ಕೆಯಾಗಿದ್ದಾರೆ. ಮೂಲತಃ ಉತ್ತರ ಪ್ರದೇಶದ ಬಡೊಹಿ ಗ್ರಾಮದ ಯಶಸ್ವಿ ಕ್ರಿಕೆಟಿಗನಾಗಿ ಬೆಳೆದಿದ್ದು ಮುಂಬೈನಲ್ಲಿ. ಆಜಾದ್ ಮೈದಾನದ ಪಕ್ಕದಲ್ಲಿದ್ದ ಕಾರ್ಮಿಕರ ಟೆಂಟ್‌ನಲ್ಲಿ ರಾತ್ರಿ ಕಳೆದು ಬೆಳಿಗ್ಗೆದ್ದು ಕ್ರಿಕೆಟ್ ಅಭ್ಯಾಸಕ್ಕೆ ತೆರಳುತ್ತಿದ್ದರು ಜೈಸ್ವಾಲ್. ಜೀವನೋಪಾಯಕ್ಕಾಗಿ ಅಪ್ಪನೊಂದಿಗೆ ಪಾನೀಪುರಿ ಅಂಗಡಿಯಲ್ಲಿಯೂ ಕೆಲಸ ಮಾಡುತ್ತಿದ್ದರು.

ಕೋಚ್ ಜ್ವಾಲಾ ಸಿಂಗ್ ಅವರ ತರಬೇತಿಯಲ್ಲಿ ಅರಳಿದ ಯಶಸ್ವಿ 21 ವರ್ಷಕ್ಕೇ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಕಳೆದ ಮೂರು ವರ್ಷಗಳಿಂದ ದೇಶಿ ಕ್ರಿಕೆಟ್‌ನ ಎಲ್ಲ ಮಾದರಿಗಳು ಮತ್ತು ಐಪಿಎಲ್‌ನಲ್ಲಿ ಅವರ ಬ್ಯಾಟಿಂಗ್ ಗಮನ ಸೆಳೆದಿದೆ. ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ಡಬ್ಲ್ಯುಟಿಸಿ ಫೈನಲ್ ಆಡಿದ್ದ ಭಾರತ ತಂಡದಲ್ಲಿಯೂ ಕಾಯ್ದಿಟ್ಟ ಆಟಗಾರನಾಗಿ ಆಯ್ಕೆಯಾಗಿದ್ದರು.

ಯಶಸ್ವಿ ಜೈಸ್ವಾಲ್

'ಬಹಳ ಸಂತೋಷವಾಗಿದೆ. ವಿಂಡೀಸ್ ಸರಣಿಯ ಆಯ್ಕೆ ಪಟ್ಟಿ ಹೊರಬೀಳುವವರೆಗೂ ಆತಂಕವಿತ್ತು. ಅವಕಾಶ ಸಿಕ್ಕಿದೆ. ನನ್ನ ಸಾಮರ್ಥ್ಯವನ್ನು ಸಂಪೂರ್ಣವಾಗಿ ವಿನಿಯೋಗಿಸುತ್ತೇನೆ' ಎಂದು ಯಶಸ್ವಿ ಹೇಳಿದರು.

ಐಪಿಎಲ್‌ನಲ್ಲಿ ಅವರು ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸುತ್ತಾರೆ.

'ರಾಯಲ್ಸ್ ತಂಡದ ಕೋಚ್ ಕುಮಾರ ಸಂಗಕ್ಕಾರ, ಸಹ ಆಟಗಾರರಾದ ಟ್ರೆಂಟ್ ಬೌಲ್ಟ್ ಮತ್ತು ಜೋ ರೂಟ್ ಅವರ ಮಾರ್ಗದರ್ಶನವಿದೆ. ಅಲ್ಲದೇ ಇತ್ತೀಚೆಗೆ ಇಂಗ್ಲೆಂಡ್‌ಗೆ ತೆರಳಿದ್ದಾಗ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ಅವರೊಂದಿಗೆ ಬಹಳಷ್ಟು ಮಾತುಕತೆ ನಡೆಸಿದ್ದೆ. ಅದರಿಂದಾಗಿ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಿದೆ' ಎಂದಿದ್ದಾರೆ.

'ಸಿಕ್ಕ ಅವಕಾಶದಲ್ಲಿ ಏಕಾಗ್ರತೆಯಿಂದ ಆಡುವತ್ತ ನಾನು ಗಮನ ಹರಿಸುತ್ತೇನೆ. ಶಿಸ್ತು ಮತ್ತು ಸರಳವಾದ ಯೋಜನೆಗಳೊಂದಿಗೆ ಆಡುತ್ತೇನೆ' ಎಂದರು.

ಪಾಕಿಸ್ತಾನಕ್ಕೆ ಎರಡನೇ ಸೋಲು

ಬೆಂಗಳೂರು: ಪಾಕಿಸ್ತಾನ ತಂಡವನ್ನು 4–0 ಗೋಲುಗಳಿಂದ ಮಣಿಸಿದ ಕುವೈತ್, ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿತು.

ಮೊದಲ ಪಂದ್ಯದಲ್ಲಿ ಭಾರತದ ಎದುರು ಇದೇ ಅಂತರದಿಂದ ಸೋತಿದ್ದ ಪಾಕಿಸ್ತಾನ ತಂಡ, ನಾಕೌಟ್ ಹಂತ ಪ್ರವೇಶಿಸುವ ಅವಕಾಶ ಕಳೆದುಕೊಂಡಿದೆ. ಕುವೈತ್, ತನ್ನ ಮೊದಲ ಪಂದ್ಯದಲ್ಲಿ 3–1 ರಿಂದ ನೇಪಾಳ ತಂಡವನ್ನು ಮಣಿಸಿತ್ತು.

ಶನಿವಾರ ನಡೆದ ಪಂದ್ಯದಲ್ಲಿ ಹಸನ್ ಅಲ್‌ಎನೆಝಿ (10ನೇ ನಿ.), ಅಲ್‌ಫನೀನಿ (17 ಮತ್ತು 45 + 1) ಹಾಗೂ ನಾಸೆರ್ ಅಲ್ ರಶೀದಿ (69) ಅವರು ಕುವೈತ್ ಪರ ಗೋಲು ಗಳಿಸಿದರು.

ಹಾಕಿ: ರಾಜ್ಯ ತಂಡಕ್ಕೆ ಸಹನಾ ನಾಯಕಿ

ಬೆಂಗಳೂರು: ಒಡಿಶಾದ ರೂರ್ಕಿಯಲ್ಲಿ ಇದೇ ತಿಂಗಳ 27 ರಿಂದ ಜುಲೈ 7ರವರೆಗೆ ನಡೆಯುವ 13ನೇ ಜೂನಿಯರ್ ಮಹಿಳಾ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಕರ್ನಾಟಕ ರಾಜ್ಯ ತಂಡವನ್ನು ಪ್ರಕಟಿಸಲಾಗಿದೆ. ಸಹನಾ ಸಿ.ಎಂ. ಅವರು ತಂಡದ ನೇತೃತ್ವ ವಹಿಸುವರು.

ತಂಡ ಇಂತಿದೆ: ವಿದ್ಯಾಶ್ರೀ ವಿ., ಶ್ರಾವ್ಯಾ (ಗೋಲ್‌ಕೀಪರ್), ಜೀವಿತ ಬಿ.ಜಿ., ಮಣಿ ಎಚ್., ಮಾನಸಾ ಎಂ.ಎಸ್., ಸಹನಾ ಸಿ.ಎಂ. (ನಾಯಕಿ), ದೀಪಿಕಾ ಬಿ., ಸಿದ್ದಗಂಗಾ ಎಚ್.ಬಿ, ಚತುರ್ಥಿ ಡಿ.ಎ., ಸೀಮಾ ಆನಂದರಾವ್ ಪವಾರ್, ಎಸ್.ಪಿ. ರಿತುಶ್ರೀ, ಸೌಮ್ಯಾ ಎಚ್.ವಿ., ನಿಸರ್ಗಾ ಎಸ್.ಬಿ., ದೇಚಮ್ಮ ಗಣಪತಿ ಬಿ., ಕಾವ್ಯಶ್ರೀ ಎಂ.ಡಿ., ಯಮುನಾ, ಐಶ್ವರ್ಯಾ ಎಸ್.ಕಲ್ಲಿ, ರಕ್ಷಿತಾ ಜೆ.

ಧರ್ಮೇಂದ್ರ ಜಿ.ಆರ್. (ಕೋಚ್), ಮೇರಿ ಅಭಿಜಿತ್ (ಮ್ಯಾನೇಜರ್).

ಸಂಕ್ಷಿಪ್ತ ಸುದ್ದಿ

ಟಿಟಿ: ಫೈನಲ್‌ಗೆ ಸುತೀರ್ಥಾ– ಐಹಿಕಾ

ನವದೆಹಲಿ (ಪಿಟಿಐ): ಭಾರತದ ಮಹಿಳಾ ಡಬಲ್ಸ್ ಜೋಡಿ ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ, ಟುನೀಷಿಯಾದಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಭಾರತದ ಜೋಡಿ 7-11, 11-9, 11-9, 7-11, 11-9 ರಲ್ಲಿ ಕೊರಿಯಾದ ಶಿನ್ ಯುಬಿನ್– ಜಿಯೊನ್ ಜಿಹಿ ಎದುರು ಗೆದ್ದಿತು.

ಮಿಕ್ಸಡ್ ಡಬಲ್ಸ್ ಸೆಮಿಫೈನಲ್‌ನಲ್ಲಿ ಮಣಿಕಾ ಬಾತ್ರಾ– ಜಿ.ಸತ್ಯನ್ 0–3 ರಿಂದ ಶಿನ್ ಯುಬಿನ್– ಲಿಮ್ ಜಾಂಗ್‌ಜೂನ್ ಎದುರು ಪರಾಭವಗೊಂಡಿತು. ಪುರುಷರ ಡಬಲ್ಸ್ ಸೆಮಿಯಲ್ಲಿ ಮಾನವ್ ಥಾಕರ್– ಮನುಷ್ ಶಾ 0–3 ರಿಂದ ಚೊ ದಾಯೆಸಾಂಗ್– ಚೊ ಸೆಂಗ್‌ಮಿನ್ ಕೈಯಲ್ಲಿ ಸೋತಿತು.

ಗಂಗಾಸ್‌ಗೆ ಜಯ

ದುಬೈ (ಪಿಟಿಐ): ವಿಶ್ವನಾಥನ್ ಆನಂದ್ ಅವರನ್ನೊಳಗೊಂಡ ಗಂಗಾಸ್ ಗ್ರ್ಯಾಂಡ್‌ಮಾಸ್ಟರ್ಸ್ ತಂಡ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಸತತ ಮೂರನೇ ಗೆಲುವು ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಗಂಗಾಸ್ ತಂಡ 11–6 ರಿಂದ ಬಾಲನ್ ಅಲಾಸ್ಕನ್ ನೈಟ್ಸ್ ಎದುರು ಗೆದ್ದಿತು. ಆನಂದ್ –ಇಯಾನ್ ನೆಪೊಮ್‌ನಿಷಿ ಪಂದ್ಯ ಡ್ರಾ ಆಯಿತು.

ವಿಂಡೀಸ್‌ಗೆ ಆಘಾತ

ಹರಾರೆ (ಎಎಫ್‌ಪಿ): ಜಿಂಬಾಬ್ವೆ ತಂಡ, ಏಕದಿನ ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ ಶನಿವಾರ 35 ರನ್‌ಗಳಿಂದ ವೆಸ್ಟ್ ಇಂಡೀಸ್‌ಗೆ ಆಘಾತ ನೀಡಿತು.

ಮೊದಲು ಬ್ಯಾಟ್ ಮಾಡಿದ ಜಿಂಬಾಬ್ವೆ 49.5 ಓವರ್‌ಗಳಲ್ಲಿ 268 ರನ್ ಗಳಿಸಿದರೆ, ವಿಂಡೀಸ್ 44.4 ಓವರ್‌ಗಳಲ್ಲಿ 233 ರನ್‌ಗಳಿಗೆ ಆಲೌಟಾಯಿತು. ಸಿಕಂದರ್ ರಝಾ (68 ರನ್ ಹಾಗೂ 36ಕ್ಕೆ 2) ಅವರು ಜಿಂಬಾಬ್ವೆ ಗೆಲುವಿನಲ್ಲಿ ಗಮನ ಸೆಳೆದರು. ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ 7 ವಿಕೆಟ್‌ಗಳಿಂದ ನೇಪಾಳ ವಿರುದ್ಧ ಗೆದ್ದಿತು. 'ಸೂಪರ್ ಸಿಕ್ಸ್' ಹಂತ ಪ್ರವೇಶಿಸುವ ಅವಕಾಶವನ್ನು ನೇಪಾಳ ಕಳೆದುಕೊಂಡಿತು.

ಸ್ನೂಕರ್: ಭಾರತ 'ಬಿ' ತಂಡಕ್ಕೆ ಚಿನ್ನ

ಮುಂಬೈ (ಪಿಟಿಐ): ಭಾರತ 'ಬಿ' ತಂಡದವರು ಇರಾನ್‌ನ ಟೆಹರಾನ್‌ನಲ್ಲಿ ನಡೆದ ಎಸಿಬಿಎಸ್ ಟೀಮ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದುಕೊಂಡರು. ಕಮಲ್ ಚಾವ್ಲಾ, ಬ್ರಿಜೇಶ್ ದಮನಿ ಮತ್ತು ಸ್ಪರ್ಶ್ ಫೆರ್ವಾನಿ ಅವರನ್ನೊಳಗೊಂಡ ಭಾರತ ತಂಡ ಫೈನಲ್‌ನಲ್ಲಿ 3–2 ರಲ್ಲಿ ಹಾಂಗ್‌ಕಾಂಗ್ ತಂಡವನ್ನು ಮಣಿಸಿತು.

BANKING PARTNER — ಕೆನರಾ ಬ್ಯಾಂಕ್ Canara Bank, Together We Can
ASSOCIATE SPONSORS — Freedom Rice Bran Oil, Prestige, INSIGHTSIAS, ಸದ್ಗುರು ಆಯುರ್ವೇದ GRAM FLOUR, coloressence Color your spirit
STYLE PARTNER — BSC B.S. CHANNABASAPPA & SONS Since 1938
INDUSTRY BODIES & PARTNERS
AUDIT PARTNER — EY